ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 2

ಜೂನ್ 10, 2007

ಬೆಲೆ ರೂ. 5.00

ರೇಷನ್ ಅವ್ಯವಸ್ಥೆ



ಕಾಳು ಇದೆ ಕೂಳಿಗಿಲ್ಲ




ಬಿಜೆಪಿ ಮತ್ತು ಅಧಿಕಾರದ ಅವಾಂತರ



ಕೇರಳ : ಅಭಿವೃದ್ಧಿಯ ಪರ್ಯಾಯದ ಹಾದಿ

ಚಾಮರಾಜ ನಗರದಲ್ಲಿ ಸಿಎಂ ಜನರ ನಿರೀಕ್ಷೆ ಈಡೇರಿತೇ?

ಪೇಜ್ 9



ನೀರು ಬೇಕು ನಮಗೆ ನೀರು....

ಪೇಜ್ 12



ಗೋಮಾಳ ಭೂಮಿ: ನ್ಯಾಯಾಲಯ ತೀರ್ಪು ನಿರ್ಲಕ್ಷಿಸುತ್ತಿರುವ ಸರ್ಕಾರ


ಪೇಜ್ 6



'ಜನಶಕ್ತಿ' ಸಂಭ್ರಮದ ಬಿಡುಗಡೆ

'ಜನಶಕ್ತಿ' ನಿರ್ಭೀತ ಪತ್ರಿಕೆಯಾಗಿ ಮೆರೆಯಲಿ....

ಸಮಕಾಲೀನ ಭಾರತದಲ್ಲಿ ಕೋಮುವಾದ, ಜಾತಿವಾದ, ಲಿಂಗ ತಾರತಮ್ಯ, ಲಂಚ ಗುಳಿತನ, ಸರ್ವ ವ್ಯಾಪಿಯಾಗಿ ಹಬ್ಬುತ್ತಿವೆ. ಜಾಗತೀಕರಣವು ಈ ಎಲ್ಲ ರೋಗಗಳಿಗೂ ನೀರು, ಗೊಬ್ಬರ, ಹಾಕಿ ಚೆನ್ನಾಗಿ ಬೆಳೆಸುತ್ತಿದೆ. ತಳಮಟ್ಟದ ದೀನ, ದಲಿತ, ಬಡ ಕಾರ್ಮಿಕರು ಪರಿಹಾರ ಕಾಣದೆ ದಿಕ್ಕೆಟ್ಟು ನಿಂತಿದ್ದಾರೆ. ಕಾನೂನಿನ ಮೂಲಕ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಅಸಾಧ್ಯವೆನ್ನಿಸಿದೆ.



ಪ್ರಜಾಪ್ರಭುತ್ವವು ಎದುರಿಸುತ್ತಿರುವ ಇಂದಿನ ಬಿಕ್ಕಟ್ಟಿಗೆ ಪರಿಹಾರ, ಜನಶಕ್ತಿಯನ್ನು ಜಾಗ್ರತಿಗೊಳಿಸುವುದರಲ್ಲದೆ, ಎಂಬುದು ಪರಮ ಸತ್ಯವಾಗಿರುವಾಗ, ಕೈ ಬೆರಳೆಣಿಕೆಯ ಕೆಲವೇ ಕೆಲವು ಪತ್ರಿಕೆಗಳನ್ನು ಹೊರತುಪಡಿಸಿದರೆ, ಇಡೀ ಮಾಧ್ಯಮವೇ ರೋಚಕ, ರಂಜಕ, ಸುದ್ದಿ ಸಂಗತಿಗಳ ಬೆನ್ನು ಹತ್ತಿ ಜನರ ಮನಸ್ಸಾಕ್ಷಿಗೆ ಮಂಕು ಕವಿಸಿ ಬಿಟ್ಟಿವೆ.

ಈ ಹಿನ್ನೆಲೆಯಲ್ಲಿ 'ಜನಶಕ್ತಿ' ವಾರ ಪತ್ರಿಕೆಯ ಶುಭಾರಂಭವನ್ನು ನಾನು ಸ್ವಾಗತಿಸುತ್ತೇನೆ.

ಭಾರತದ ರಾಜಕಾರಣವನ್ನು ಪ್ರಗತಿಪರ ಮಾರ್ಗದಲ್ಲಿ ಮುನ್ನಡೆಸುತ್ತಿರುವ ಎಡಪಂಥೀಯ ರಾಜಕೀಯ ಪಕ್ಷಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ಶಾಖೆಯ ನೇತೃತ್ವದಲ್ಲಿ 'ಜನಶಕ್ತಿ' ಪ್ರಾರಂಭವಾಗಿರುವುದು ಮತ್ತೊಂದು ಸಂತೋಷದ ಸಂಗತಿ.


ತನ್ನ ಹೆಸರಿಗೆ ಸಾರ್ಥಕವಾಗುವಂತೆ 'ಜನಶಕ್ತಿ' ಮುನ್ನಡೆಯುತ್ತದೆ ಎಂಬ ಭರವಸೆ ಮತ್ತು ಶುಭಾಶಯಗಳೊಡನೆ,

ಡಾ. ಕೆ.ಮರುಳಸಿದ್ದಪ್ಪ, ಸಾಹಿತಿಗಳು

★

'ಜನಶಕ್ತಿ' ಪತ್ರಿಕೆ ಅವರಿಗೆ ಅಭಿನಂದನೆ

ತಾವು 'ಐಕ್ಯರಂಗ' ಪತ್ರಿಕೆಯನ್ನು 'ಜನಶಕ್ತಿ'ಯನ್ನಾಗಿ ಪರಿವರ್ತಿಸುವುದನ್ನು ತಿಳಿದು ಸಂತೋಷವಾಯಿತು. ಕೇವಲ ಹೆಸರಿನ ಬದಲಾವಣೆ ಮಾತ್ರವಲ್ಲದ ಅದರ ಮೂಲಭೂತ ವಿನ್ಯಾಸವನ್ನೇ ಬದಲಿಸ ಹೊರಟಿರುವುದರಿಂದ ಪತ್ರಿಕೆಯ ಉಪಯುಕ್ತತೆಯೇ ಹೆಚ್ಚಲಿದೆ. ಸಂದರ್ಭಕ್ಕೆ ತಕ್ಕ ಬದಲಾವಣೆ, ವಿಮರ್ಶೆ ಪ್ರತಿಕ್ರಿಯೆ ಇವೆಲ್ಲ ಸ್ವಾಗತಾರ್ಹ ವಾದುದು.




'ಜನಶಕ್ತಿ' ಸ್ವಾತಂತ್ರ್ಯ ಹೋರಾಟದಲ್ಲಿ ದುಡಿದ ಪತ್ರಿಕೆ. ದೇಶದ ಚರಿತ್ರೆಯಲ್ಲಿ 'ಜನಶಕ್ತಿ'ಗೆ ಅದರದೇ ಆದ ಮಹತ್ವವಿದೆ, ಮೌಲ್ಯವಿದೆ. ನಿರಂಜನರಂಥ ವಿಚಾರವಾದಿಗಳು, ಸಾಹಿತಿಗಳು ಸಂಪಾದಕರಾಗಿದ್ದ ಅಂದಿನ ಪತ್ರಿಕೆಯಂತೆ ಇಂದೂ 'ಜನಶಕ್ತಿ' ಜನರಿಗೆ ದಾರಿ ದೀಪವಾಗಲಿ ಎಂದು ಹಾರೈಸುತ್ತೇನೆ.

ಯಶಸ್ವಿಯಾಗಲಿ, ಅಭಿನಂದನೆ

ಡಾ. ಆರ್.ವಿ.ಭಂಡಾರಿ
ಬಂಡಾಯ ಸಾಹಿತಿಗಳು

★

ನನಗೆ ಆತ್ಮೀಯರಾಗಿದ್ದ ದಿ.ನಿರಂಜನ ಅವರು ಸಂಪಾದಿಸುತ್ತಿದ್ದ 'ಜನಶಕ್ತಿ' ಈಗ ಕನ್ನಡ ವಾರ ಪತ್ರಿಕೆಯಾಗಿ ನಿಮ್ಮ ಸಂಪಾದಕತ್ವದಲ್ಲಿ ಇದೇ 27 ರಿಂದ ಪ್ರಕಟವಾಗಲಿದೆಯೆಂದು ತಿಳಿದು ತುಂಬ ಸಂತೋಷವಾಯಿತು. ಪತ್ರಿಕೆ ಜನ ಸಮೂಹದ ಧ್ವನಿಯಲ್ಲಿ ಯಾವ ಪೂರ್ವಾನುಗ್ರಹವೂ ಇರದ ನಿರ್ಭೀತ ಪತ್ರಿಕೆಯಾಗಿ ದೀರ್ಘಕಾಲ ಮೆರೆಯುವಂತಾಗಲಿ ಎಂಬ ಶುಭ ಹಾರೈಕೆಗಳು.



ವಯಸ್ಸಿನ (84) ಕಾರಣದಿಂದ ನನಗೆ ನಡೆಯುವುದು ಕಷ್ಟವಾಗುತ್ತಿದೆ. ಹಾಗಾಗಿ ಬಿಡುಗಡೆ ಸಮಾರಂಭಕ್ಕೆ ಬರಲು ಸಾಧ್ಯವಾಗದು ಕ್ಷಮಿಸಿ.

ವ್ಯಾಸರಾಯಬಲ್ಲಾಳ, ಸಾಹಿತಿಗಳು

★


ಪತ್ರಿಕೆಗೆ ಶುಭಾಶಯಗಳು

- ಬಿ.ವಿ.ಸೀತಾರಾಂ,
ವ್ಯವಸ್ಥಾಪಕ ನಿರ್ದೇಶಕರು,
ಕರಾವಳಿ ಅಲೆ, ಮಂಗಳೂರು

★

ಜನಶಕ್ತಿ ಮತ್ತೆ ಬರುತ್ತಿರುವುದು ಸಂತೋಷ. ನನಗೆ ನಿರಂಜನರ ಸಂಪಾದಕರಾಗಿದ್ದಾಗಿನ ವಿಚಾರಗಳ ನೆನಪಾಯಿತು. ಪತ್ರಿಕೆ ಉಜ್ವಲವಾಗಿ ಬೆಳೆಯಲಿ.

- ವಿ.ಎನ್.ಸುಬ್ಬರಾವ್
ಅಧ್ಯಕ್ಷರು,
ಕರ್ನಾಟಕ ಮಾಧ್ಯಮ ಅಕಾಡೆಮಿ



ಹೊಸ ವಿಚಾರ - ಬದಲಾವಣೆಗಳ ಮುನ್ಸೂಚಿ

ಮೇ 27, 2007ರಂದು ಜನಶಕ್ತಿ ಕನ್ನಡ ವಾರಪತ್ರಿಕೆಯನ್ನು ಹೊರತರಲಾಗುತ್ತಿದೆಯೆಂದು ತಿಳಿದು ನನಗೆ ತುಂಬಾ ಸಂತೋಷವಾಯಿತು.

ರಚನಾತ್ಮಕವಾದ ಮತ್ತು ಸಾಮಾಜಿಕ ಜವಾಬ್ದಾರಿ ಹೊಂದಿರುವ ಮಾಧ್ಯಮವು ಸಮಾಜದಲ್ಲಿ ಹೊಸ ವಿಚಾರ ಬದಲಾವಣೆಗಳ ಮುನ್ಸೂಚಿಯಂತೆ ಕೆಲಸ ಮಾಡುತ್ತದೆ ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುತ್ತದೆ. ನಾಗರೀಕರ ಅದರಲ್ಲಿಯೂ ಕಾರ್ಮಿಕ ವರ್ಗದ ಮತ್ತು ನೊಂದ ಸಮುದಾಯಗಳ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸುತ್ತದೆ. ತನ್ನ ಇಂತಹ ಬಹುಮುಖಿ ಪಾತ್ರದ ಮೂಲಕ ಮಾಧ್ಯಮವು ಪ್ರಜಾಪ್ರಭುತ್ವದ ಅವಿಭಾಜ್ಯವಾದ ಅಂಗವೇ ಆಗಿದೆ.

ಪತ್ರಿಕೆಯು ಕರ್ನಾಟಕದ ಧ್ವನಿಯಾಗಿ ಕೆಲಸ ಮಾಡುತ್ತದೆ ಎಂಬ ನಂಬಿಕೆ ನನಗಿದೆ. ಪತ್ರಿಕೆಯು ಯಶಸ್ಸನ್ನು ಕಾಣಲಿ ಎಂದು ಹಾರೈಸುತ್ತೇನೆ.

- ಸೋಮನಾಥ ಚಟರ್ಜಿ
ಲೋಕಸಭಾಧ್ಯಕ್ಷರು

★

ಹೃತ್ಪೂರ್ವಕ ಅಭಿನಂದನೆ

ತಮ್ಮ ಪತ್ರದ ಮೂಲಕ ಜನಶಕ್ತಿ ಕನ್ನಡ ವಾರ ಪತ್ರಿಕೆಯನ್ನು ತರುತ್ತಿರುವ ಬಗ್ಗೆ ತಿಳಿದು ಬಹಳ ಸಂತೋಷವಾಯಿತು. ಕರ್ನಾಟಕದ ನಮ್ಮ ಸಂಗಾತಿಗಳು, ಸ್ನೇಹಿತರು ಮತ್ತು ಸಿಪಿಐ(ಎಂ) ಪಕ್ಷಕ್ಕೆ ಇದು ಖಂಡಿತಾ ಒಂದು ಅವಿಸ್ಮರಣೀಯ ಸಂದರ್ಭ.

ಪಶ್ಚಿಮಬಂಗಾಳದ ಸಿಪಿಐ(ಎಂ) ರಾಜ್ಯ ಸಮಿತಿಯ ಮುಖವಾಣಿ 'ಗಣಶಕ್ತಿ' ದಿನ ಪತ್ರಿಕೆಯ ಪರವಾಗಿ ಪತ್ರಿಕೆಯನ್ನು ಆರಂಭಿಸುತ್ತಿರುವ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಪತ್ರಿಕೆಯು ಜನರ ಶಕ್ತಿಯನ್ನು ಬಲಪಡಿಸಲು ಶ್ರಮಿಸುತ್ತದೆ ಹಾಗೂ ಕರ್ನಾಟಕದ ದುಡಿಯುವ ವರ್ಗಕ್ಕೆ ತನ್ನದೇ ಆದ ಕೊಡುಗೆ ನೀಡುತ್ತದೆ ಎಂಬ ನಂಬಿಕೆ ನಮ್ಮದು.

ಈ ಮಹತ್ವದ ಸಂದರ್ಭದಲ್ಲಿ ಪತ್ರಿಕೆಗೆ ನಮ್ಮ ಕಡೆಯಿಂದ ಸಂಪೂರ್ಣ ಸಹಕಾರ ನೀಡುವ ಭರವಸೆ ನೀಡುತ್ತೇನೆ.

ನಾರಾಯಣದತ್ತ, ಸಂಪಾದಕರು,
ಗಣಶಕ್ತಿ, ಪಶ್ಚಿಮಬಂಗಾಳ

★

ಅಭಿನಂದನೆಗಳು, ಯಶಸ್ಸು ನಿಮ್ಮದಾಗಲಿ

ಮಹ್ಮದ್ ಸಲೀಂ, ಎಂ.ಪಿ.
ಮಾಜಿ ಸಚಿವ, ಪಶ್ಚಿಮಬಂಗಾಳ

★

'ಕರ್ನಾಟಕದ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಪತ್ರಿಕೆ ಮಿನುಗಲಿ, ಜನದನಿಯ ಸಮರ್ಥ ಪ್ರತಿನಿಧಿಯಾಗಲಿ'

ಜಿತೇಂದ್ರ ಚೌಧುರಿ,
ಕ್ರೀಡಾ ಸಚಿವ, ತ್ರಿಪುರ



ಪತ್ರಿಕೆ ತುಂಬಾ ಚೆನ್ನಾಗಿ ಮೂಡಿಬಂದಿದೆ

ಲೇಖನಗಳು, ಕಾಲಂಗಳು ಅರ್ಥಪೂರ್ಣವಾಗಿವೆ.

ಪ್ರದೀಪ್, ರಾಯಚೂರು

●

ಪತ್ರಿಕೆಯ ಮುಖಪುಟ, ಒಳಪುಟಗಳನ್ನು ನೋಡಿದಾಗ ಖುಷಿಯಾಯಿತು. ಲೇಔಟ್ ಸ್ವಲ್ಪ ಇಂಪ್ರೂವ್ ಆಗಬೇಕು. ಒಂದು ಕಿರು ಕಥೆ ಹಾಕಿ.

ಸದಾನಂದ, ಹುಬ್ಬಳ್ಳಿ

●

ಪತ್ರಿಕೆಯ ಗ್ರಾಮ ವಾಸ್ತವ್ಯದ ವಿಶೇಷ ಲೇಖನ ಗಮನ ಸೆಳೆಯಿತು. ಬೇರಾವ ವಾರಪತ್ರಿಕೆಗಳೂ ತೆರೆದಿಡಲಾಗದ ಅಂಶಗಳನ್ನು ಪತ್ರಿಕೆ ಹೊರಚೆಲ್ಲಿದೆ.

ಸುಬ್ರಹ್ಮಣ್ಯ, ಮೈಸೂರು

●

ಸಾರ್ವಜನಿಕ ಸ್ವತ್ತಾಗಿರುವ ಸರ್ಕಾರಿ ಭೂಮಿಯನ್ನು ಒಂದು ತಿಮಿಂಗಿಲಿನಿಂದ ಕಿತ್ತುಕೊಂಡು ಇನ್ನೊಂದು ತಿಮಿಂಗಿಲಿನ ಬಾಯಿಗೆ ದೂಡುತ್ತಿರುವುದು ಖಂಡನೀಯ. ಮನೆಯಿಲ್ಲದೇ ಹೇಗೇಗೋ ಜೀವನ ಸಾಗಿಸೋ ಲಕ್ಷಾಂತರ ಜನರಿಗೆ ಹಂಚಿಕೊಡಬಾರದೇಕೆ?

ರುದ್ರಮೂರ್ತಿ, ಬೆಂಗಳೂರು

●

ಇನ್ಫೋಸಿಸ್ ನಾರಾಯಣಮೂರ್ತಿ, ಕಲಾಂರಂಥವರು ರಾಷ್ಟ್ರಪತಿಗಳಾಗಬೇಕೆಂಬ ಅಬ್ಬರ ಪ್ರಚಾರವಿರುವಾಗ ನಮಗೆಂಥ ರಾಷ್ಟ್ರಪತಿ ಬೇಕು ಲೇಖನ ಅರ್ಥಪೂರ್ಣ. ಮಾಹಿತಿ ದೊರಕಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು

ರಾಬರ್ಟ್ ಡಿಸೋಜಾ,
ಬೋಳಾರ, ಮಂಗಳೂರು

●

ಉಳಿದ ಪತ್ರಿಕೆಗಳಿಗಿಂತಲೂ ಭಿನ್ನವಾಗಿದೆ. ಮಾಧ್ಯಮಲೋಕದ ವಿಶಿಷ್ಟ ಧ್ವನಿ, ಗಟ್ಟಿದ್ವನಿಯೆನಿಸುತ್ತದೆ.

- ಗೋಪಾಲ, ಉಡುಪಿ

●

ಗುಜರಾತ್‌ನ ಎನ್‌ಕೌಂಟರ್‌ಗಳ ಬಗ್ಗೆ ಓದಿದಾಗ, ದಿಗ್ಭ್ರಮೆಯಾಯಿತು. ಹಿಂದುತ್ವ ಧರ್ಮರಕ್ಷಣೆ ಎಂಬ ಮಾತಿನ ಹಿಂದಿನ ಪಾತಕವನ್ನೂ ಪರಿಚಯಿಸಿದ ಜನಶಕ್ತಿಗೆ ಧನ್ಯವಾದಗಳು

ಶಿರಾಜ್ ಶೇಖ್, ಗುಲಬರ್ಗಾ

ಪ್ರತಿಧ್ವನಿ

ನಿಮ್ಮ ಸಮಸ್ಯೆಗೆ ನಮ್ಮ ದನಿ

ನಿಮ್ಮ ಪ್ರದೇಶದಲ್ಲಿ ಯಾವುದೇ ಸಮಸ್ಯೆ ಇದೆಯೇ?
ಹಾಗಿದ್ದರೆ ನಮ್ಮಲ್ಲಿ ಅದಕ್ಕೆ ವೇದಿಕೆ ಇದೆ.
ನಿಮ್ಮ ಸಮಸ್ಯೆ ಬಗ್ಗೆ ಚುಟುಕಾಗಿ ಕೆಲವೇ ವಾಕ್ಯಗಳಲ್ಲಿ ನಮಗೆ ಬರೆದು ಕಳಿಸಿ.

ಪತ್ರಿಕೆ ಬಗ್ಗೆ ನಿಮ್ಮ ಅನಿಸಿಕೆ

ನಿಮ್ಮ ಯಾವುದೇ ಅನಿಸಿಕೆಗೆ ಸ್ವಾಗತವಿದೆ. ಪತ್ರಿಕೆಯನ್ನು ಇನ್ನಷ್ಟು ಶಕ್ತಿಯುತಗೊಳಿಸಲು, ನೊಂದ ಜನರ ದನಿಯಾಗಿ ಮೂಡಿಬರಲು ನಿಮ್ಮ ಅನಿಸಿಕೆ ಸಲಹೆ ಅತಿ ಅಗತ್ಯ. ನಿಮ್ಮ ಎಲ್ಲ ಅಭಿಪ್ರಾಯಗಳನ್ನು ಪತ್ರಿಕೆಯ ವಿಳಾಸಕ್ಕೆ ಕಳಿಸಿ ಅಥವಾ ಕೆಳಗಿನ ಮೊಬೈಲ್ ನಂ.ಗೆ ಎಸ್.ಎಂ.ಎಸ್.ಮಾಡಿ.

9448230114
9448505789

ಸಂಪಾದಕೀಯ...

ಬಿಜೆಪಿಗೆ ಅಧಿಕಾರ ಹಸ್ತಾಂತರ

ಬಿಜೆಪಿಗೆ ಜೆಡಿ(ಎಸ್) ಅಧಿಕಾರ ಹಸ್ತಾಂತರಿಸುವುದೇ ಎಂಬ ಪ್ರಶ್ನೆ ಮತ್ತೆ ಎದ್ದು ಬಂದಿದೆ. ಉಳ್ಳಾಲ ಉಪ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಸಚಿವ ಅನ್ಸಾರಿಯವರು 20 ತಿಂಗಳ ಅವಧಿ ಮುಗಿದ ಬಳಕವೂ ಕುಮಾರಸ್ವಾಮಿಯವರೇ ಮುಖ್ಯಮಂತ್ರಿಗಳಾಗಿ ಮುಂಧುವರಿಯುತ್ತಾರೆ ಎಂದು ಹೇಳಿದ್ದು ವಿವಾದ 'ಅನುಮಾನ'ಗಳ ಪುನಶ್ಚೇತನಕ್ಕೆ ಚಾಲನೆ ನೀಡಿದೆ. ಜೆಡಿ(ಎಸ್)ನ ಇತರೆ ಕೆಲವು ಸಚಿವರೂ ಅದಕ್ಕೆ ದನಿಗೂಡಿಸಿದ್ದು ಮತ್ತು ಬಿಜೆಪಿಯ 30 ಶಾಸಕರು ಜೆಡಿ(ಎಸ್)ಗೆ ಬೆಂಬಲಿಸುವರು ಅಥವಾ ಸೇರುವರು ಎಂಬ ಇನ್ನೊಂದು ಹೇಳಿಕೆ, ಕಾಂಗ್ರೆಸ್ ಶಾಸಕರು ಬೆಂಬಲಿಸುವರೆಂಬುದು ಪರಿಸ್ಥಿತಿಯನ್ನು ಗಂಭೀರಗೊಳಿಸಿದೆ. ಮುಖ್ಯಮಂತ್ರಿ ಕುಮಾರಸ್ವಾಮಿಯೂ ಸಹ ಹಣೆ ಬರಹದಲ್ಲಿದ್ದರೆ ತಾವೇ ಮುಖ್ಯಮಂತ್ರಿ ಎಂದು ಹೇಳಿರುವುದು ಗಮನಾರ್ಹವೇ. ಈ ಹಿನ್ನೆಲೆಯಲ್ಲಿಯೇ ಉಪಮುಖ್ಯಮಂತ್ರಿ ಯಡಿಯೂರಪ್ಪನವರು ಪಕ್ಷದ ಶಾಸಕರುಗಳ ಸಭೆಯನ್ನು ಕರೆದು ಚರ್ಚಿಸಿದ್ದಾರೆ.

ಸರ್ಕಾರ ರಚಿಸಲು ಸಂದರ್ಭ ಸಾಧಕ ಮೈತ್ರಿ ಮಾಡಿಕೊಂಡಾಗ ಒಪ್ಪಂದ ಏನೇ ಆಗಲಿ, ಬಿಜೆಪಿಯ ಕೈಗೆ ರಾಜ್ಯದ ಅಧಿಕಾರವನ್ನು ಒಪ್ಪಿಸುವುದು ಅತ್ಯಂತ ಅಪಾಯಕಾರಿಯಾದ ಸಂಗತಿಯಾಗಿದೆ. ಈಗಾಗಲೇ ಅಧಿಕಾರದಲ್ಲಿ ಬಿಜೆಪಿ ಪಾಲು ಪಡೆದಿರುವ ಸಂಧರ್ಭವನ್ನೇ ಬಳಸಿ ರಾಜ್ಯದಲ್ಲಿ ವ್ಯಾಪಕವಾಗಿ ಕೋಮುವಾದಿಗಳು ಸಕ್ರಿಯವಾಗಿದ್ದಾರೆ. ಬೆಂಗಳೂರು, ಮುಂತಾದೆಡೆ ಕೋಮು ಗಲಭೆಗಳು ನಡೆದಿವೆ. ಹುಬ್ಬಳ್ಳಿಯಲ್ಲಿ ಭಜರಂಗದಳದ ಕಾರ್ಯಕರ್ತರಿಗೆ ತ್ರಿಶೂಲ ಹಂಚಲಾಗಿದೆ. ಹಿಂದೂ ಸಮಾಜೋತ್ಸವಗಳ ಮೂಲಕ ಅಲ್ಪಸಂಖ್ಯಾತರು, ಪ್ರಗತಿಪರರ ವಿರುದ್ಧ ಕೋಮುದ್ವೇಷದ ಕಿಚ್ಚನ್ನು ಹಚ್ಚಲಾಗಿದೆ. ವಿಶ್ವ ಗೋ ಸಮ್ಮೇಳನದ ಹೆಸರಿನಲ್ಲಿಯೂ ಗೋವಿನ ಬಗೆಗಿನ ಭಾವನೆಗಳನ್ನು ಬಳಸಿ ಕೋಮುವಾದಿಕರಣ ಮಾಡಲಾಗುತ್ತಿದೆ. ಉನ್ನತ ಶಿಕ್ಷಣ ರಂಗದಲ್ಲಿಯೂ, ಸಾಮಾಜಿಕ ಸಾಂಸ್ಕೃತಿಕ ರಂಗಗಳಲ್ಲಿ ಕೋಮುವಾದದ ವಿಷ ಪ್ರಸಾರ ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ. ಬಿಜೆಪಿ ಶಾಸಕರು ಇರುವ ಕಡೆ ಮತ್ತು ಇತರೆ ಕಡೆಗಳಲ್ಲಿ ಆಡಳಿತ ಯಂತ್ರದ ಮೇಲೆ ಸಂಘ ಪರಿವಾರದ ಹಾಗೂ ಬಿಜೆಪಿಯ ಪ್ರಭಾವ ಹೆಚ್ಚುತ್ತಿದೆ. ಬಾಬಾಬುಡನ್‌ಗಿರಿ ಮುಂತಾದೆಡೆ ವಿವಾದಗಳನ್ನು ತೀವ್ರಗೊಳಿಸುತ್ತಿದ್ದಾರೆ. ಹೊಸ ಪ್ರದೇಶಗಳಲ್ಲಿ ಹುಟ್ಟು ಹಾಕುತ್ತಿದ್ದಾರೆ.

ಇದರೊಂದಿಗೆ ಬಿಜೆಪಿ ಸಚಿವರೂ, ಶಾಸಕರೂ ಹಲವಾರು ಭ್ರಷ್ಟಾಚಾರ, ಹಗರಣಗಳಲ್ಲಿ ಸಿಕ್ಕಿಸಿಕೊಂಡು ಅವರ ನೈತಿಕತೆ ರಾಜಕಾರಣವನ್ನು ಹರಾಜಿಗಿಟ್ಟಿದ್ದಾರೆ. ಹಾಗೇನೇ ಬಿಜೆಪಿ ಅನುಸರಿಸುವ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳು ಕರ್ನಾಟಕವನ್ನು ಹತ್ಯಾಕಾಂಡದ ಗುಜರಾತ್ ಮಾಡುವ ಅವರ ಕಾರ್ಯಯೋಜನೆ ರೂಪಿಸಲಾಗಿದೆ. ಹೀಗಿರುವಾಗ ಬಿಜೆಪಿಗೆ ಅಧಿಕಾರ ನೀಡುವುದು ಅಥವಾ ಪಡೆಯುವುದನ್ನು ಮಾನವೀಯತೆ; ಪ್ರಜಾಸತ್ತಾತ್ಮಕ ಮೌಲ್ಯಗಳು ಹಾಗೂ ಕೋಮುಸೌಹಾರ್ದತೆಯಲ್ಲಿ ನಂಬಿಕೆ ಇರುವ ಯಾರೂ ಒಪ್ಪಲು ಸಾಧ್ಯವೇ ಇಲ್ಲ. ರಾಷ್ಟ್ರದ, ರಾಜ್ಯದ ಜನತೆಯ ಹಿತದೃಷ್ಟಿಯಿಂದ ಬಿಜೆಪಿಗೆ ಅಧಿಕಾರ ಹಸ್ತಾಂತರ ಆಗಲೇಕೂಡದು. ಉಳ್ಳಾಲದ ಚುನಾವಣೆ ಫಲಿತಾಂಶದ ನಂತರ ಮುಂದಿನ ವಿದ್ಯಮಾನಗಳ ಹೇಗಿರುತ್ತವೆ ಎಂದು ನಿರೀಕ್ಷಿಸೋಣ.

ಸತ್ಯದ ಶತ್ರುಗಳು

'ಬಸವ ಭಕ್ತರಿಗೆ ನೋವಾಗಿದೆ, 'ಅನುದೇವ ಹೊರಗಣವನು' ಕೃತಿಯನ್ನು ಮುಟ್ಟುಗೋಲು ಹಾಕುವುದಾಗಲೀ, ಕೃತಿ ನಿಷೇಧಿಸುವ ಅಥವಾ ಸುಡುವುದಕ್ಕಿಂತ ಕೃತಿಕಾರನನ್ನೇ ಸುಟ್ಟು ಬಿಡಬೇಕು. ಸರ್ಕಾರ ನಿರ್ಣಯ ಕೈಗೊಳ್ಳಬೇಕು' ಎಂದು ಬಾಲೆ ಹೊಸೂರಿನ ದಿಂಗಾಲೇಶ್ವರ ಸ್ವಾಮಿ ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ಕೂಗಾಡಿದ್ದು ದಿಗ್ಭ್ರಾಂತಿ ಮೂಡಿಸುವ ಸಂಗತಿಯಾಗಿದೆ. ಕೃತಿಕಾರ ಕೆಲವು ಐತಿಹ್ಯಗಳ ಅವಲೋಕನದಿಂದ ಬಸವಣ್ಣನವರು ಮಾದಿಗ ಸಮುದಾಯದಲ್ಲಿ ಹುಟ್ಟಿದವರು ಎಂದು ಹೇಳಿರುವುದು ಅವರ ಅಭಿಪ್ರಾಯ. ಆದರೆ ಇದು ಬಸವಣ್ಣನವರಿಗೆ ಅವಮಾನ ಹೇಗಾಗುವುದೆಂದು ಅವರೇ ಹೇಳಬೇಕು. ಜಾತಿ ವ್ಯವಸ್ಥೆಯೇ ಕ್ರೂರ ಇದರ ನಾಶವಾಗಬೇಕು ಇದು ತೊಲಗಬೇಕೆಂದು ಸಮರ ಸಾರಿದ ಕಲ್ಯಾಣದ ಕ್ರಾಂತಿಕಾರಿ ಉಚ್ಚ ಬ್ರಾಹ್ಮಣ ಕುಲದಲ್ಲಿ ಹುಟ್ಟಿದನೆಂದಾಗ ಬೀಗುವುದು, ಅಸ್ಪಶ್ಯ ಕುಲದಲ್ಲಿ ಹುಟ್ಟಿದನೆಂದಾಗ ಕ್ರೋಧಗೊಳ್ಳುವುದಕ್ಕೆ ಅರ್ಥವೇನಿದೆ? ಇವರದ್ದು ಗತ ಕಾಲದೊಂದಗಿನ ಮಾತುಕತೆಯಲ್ಲ, ಅನುಭವ ಮಂಟಪದ ಚಿಂತನ-ಮಂಥನವಂತೂ ಅಲ್ಲಿವೇ ಅಲ್ಲ, ಅದೇನಿದ್ದರೂ ವರ್ತಮಾನದ ಜಾತಿ ತಾರತಮ್ಯದ ದ್ವೇಷದ ಕಿಚ್ಚು ಅಷ್ಟೇ. ಬಸವಣ್ಣ ಯಾವುದೇ ಕುಲದಲ್ಲಿ ಹುಟ್ಟಲಿ, ಆತನ ಚಿಂತನೆ ವ್ಯಕ್ತಿತ್ವಕ್ಕೆ ಜಾತಿ ಮೂಲವು ಮೆರಗು ತರುವುದೇ? ಅಥವಾ ಮಾಡುವುದೇ? ಸಾತ್ವಿಕತೆ, ಸಹಿಷ್ಣುತೆಯ ಸಂಕೇತವೆಂದೆಲ್ಲಾ ಭಾಷಣ ಬಿಚ್ಚುವ ಇಂತಹ ಖಾವಿಧಾರಿಗಳು ಖಾವಿಯೊಳಗಣ ತಾಲೀಬಾನ್‌ಗಳೆಂದು ನಿಜವೇಷದ ಅನಾವರಣ ಮಾಡಿಕೊಳ್ಳುತ್ತಿದ್ದಾರೆ.


ತಮಗೆ ತಿಳಿದಿರುವುದೇ ಸತ್ಯ ಎಂದು ಭ್ರಮಿಸಿರುವವರಿಗೆ ಇರುವುದು ಕೇವಲ ಅಹಂಕಾರ ಮಾತ್ರವಲ್ಲ, ಹೊಸತನವನ್ನು, ಸತ್ಯದ ಅನ್ವೇಷಣೆಯನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸುವ ಪಾಳೇಗಾರಿ ಪ್ರವೃತ್ತಿ! ಅವರಿಗೆ ಬೇಕಿರುವುದು ಒಂದು ರಾಜಕಾರಣ. ಆ ಗುಪ್ತ ಅಜೆಂಡಾಕ್ಕೆ ತಕ್ಕಂತೆಯೇ ಎಲ್ಲವನ್ನು ಹೆಣೆಯುತ್ತಾರೆ. ಇಂತಹ 'ವಿಧ್ವಂಸ' (ಕ)ರು ಕೇವಲ ಬಸವಣ್ಣನನ್ನು ಮಾತ್ರವಲ್ಲ, ಮೇಧಾವಿಗಳಾದ ಕುವೆಂಪು, ಅಂಬೇಡ್ಕರ್‌ರವರನ್ನು ಅಪಮಾನ ಗೊಳಿಸಲಾಗಿದೆಯೆಂದು ಹೇಳಿಕೆ ತಿರುಚಿ ಎತ್ತಿ ಕಟ್ಟಲು ತೊಡಗಿದ್ದಾರೆ. ಇದು ವೀರಶೈವ, ಒಕ್ಕಲಿಗರು, ದಲಿತರನ್ನು ಪ್ರಚೋದಿಸುವ ಉದ್ದೇಶವುಳ್ಳದ್ದು. ರಾಜ್ಯದಲ್ಲಿ ಅಧಿಕಾರ ಹಿಡಿಯಲು, ಕೋಮುವಾದಿ ನೆಲೆಯನ್ನು ವಿಸ್ತರಿಸಲು ಸಂಘಪರಿವಾರ ಬಿಜೆಪಿ ಹೊಸೆದಿರುವ ತಂತ್ರವೆಂಬುದನ್ನು ಬೇರೆ ಹೇಳಬೇಕಿಲ್ಲ. ಅದು ಗೋಲ್ವಾಲ್ಕರ್‌ರವರ ಜನ್ಮಶತಾಬ್ದಿ ಆಚರಣೆ, ಹಿಂದೂ ಸಮಾಜೋತ್ಸವಗಳ ಸಂದರ್ಭದಲ್ಲಿ ಜಗಜ್ಜಾಹೀರಾಗಿದೆ.

ಇಂದು 'ಅನುದೇವ...' ಕೃತಿಯನ್ನು ನಿಷೇಧಿಸಬೇಕೆಂದೂ, ಕೃತಿಕಾರನ ಮೇಲೆ ಮೊಕದ್ದಮೆಯನ್ನು ಹೂಡುವ ದಿಕ್ಕಿನಲ್ಲಿ ಸಿದ್ಧತೆಗಳು ಆರಂಭಗೊಂಡಿವೆ.

ಹಿಂದುತ್ವದ ಕೋಮುವಾದಿ ಫಾಶಿಸ್ಟ್ ಶಕ್ತಿಗಳು ಬೆಳೆಯುತ್ತಿರುವಂತೆ ವ್ಯಕ್ತಿಯ ಅಥವಾ ಜನಸಮೂಹದ ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಜಾಸತ್ತಾತ್ಮಕ ಮೌಲ್ಯಗಳ ಮೇಲಿನ ದಾಳಿಯೂ ತೀವ್ರಗೊಳ್ಳುತ್ತದೆ. ಕರ್ನಾಟಕದ ಅಧಿಕಾರದಲ್ಲಿ ಪಾಲು ಪಡೆದಿರುವಾಗ ಬಿಜೆಪಿ, ಪೂರ್ಣಾಧಿಕಾರ ಪಡೆದರೆ ಪರಿಸ್ಥಿತಿ ಹೇಗಿರುತ್ತದೆಂಬುದನ್ನು ಗಂಭೀರವಾಗಿ ಯೋಚಿಸಬೇಕಿದೆ.

ಈ ಸಂಘರ್ಷದಲ್ಲಿ ಜನತೆ, ಬುದ್ಧಿ ಜೀವಿಗಳು ಐಕ್ಯತೆಯಿಂದ ಪ್ರಗತಿಪರ ಮೌಲ್ಯಗಳ ಉಳಿವಿಗೆ ದೃಢವಾಗಿ ನಿಲ್ಲಬೇಕು.

ಚಾಮರಾಜನಗರಕ್ಕೆ ಸಿ.ಎಂ. ಭೇಟಿ
ಜನರ ನಿರೀಕ್ಷೆ ಈಡೇರಿತೆ?



ಎಸ್.ವೈ.ಗುರುಶಾಂತ್

ಹದಿನಾರು ವರುಷಗಳ ನಂತರ ಚಾಮರಾಜನಗರಕ್ಕೆ ಮುಖ್ಯಮಂತ್ರಿಗಳು ಕಾಲಿಟ್ಟಿದ್ದಾರೆ. ಇದನ್ನೇ 'ಶಾಪವಿಮೋಚನೆ' ಎಂದೂ ಪತ್ರಿಕೆ ಟಿ.ವಿ.ಗಳು ಕರೆದಿವೆ. ಈ ಪಟ್ಟಣಕ್ಕೆ (ಸರ್ಕಾರಕ್ಕೆ) ಭೇಟಿ ನೀಡಿದ ಹಿಂದಿನ ಎಲ್ಲಾ ಮುಖ್ಯಮಂತ್ರಿಗಳು ತದನಂತರದಲ್ಲಿ ಅಧಿಕಾರ ಕಳೆದುಕೊಂಡಿದ್ದಾರೆ. ಅಧಿಕಾರ ಕಳೆದುಕೊಳ್ಳಲು ' ಈ ಭೇಟಿಯೇ' ಕಾರಣ ಎನ್ನುವಂತಹ ಮೌಢ್ಯತನ ಮನೆ ಮಾಡಿತ್ತು. ಅಂತಹುದರಲ್ಲಿ ಕುಮಾರಸ್ವಾಮಿ ಸ್ವಾಗತಾರ್ಹ.

ವೀರೇಂದ್ರ ಪಾಟೀಲ(1990)ರಾಗಲಿ, ಎಸ್.ಆರ್.ಬೊಮ್ಮಾಯಿ(1988)ರವರಾಗಲಿ ಯಾಕೆ ಅಧಿಕಾರ ಕಳೆದುಕೊಂಡರು. ಅವರ ಪಕ್ಷದೊಳಗಿನ ಒಳಜಗಳ, ಮತ್ತು ಸರ್ವಾಧಿಕಾರಿ ಧೋರಣೆಗಳಂತಹ ಮೂಲ ವಿಷಯಗಳನ್ನು ಮೂಲೆಗೊತ್ತಿ,ಜನತೆ ಅದರಿಂದ ಗ್ರಹಿಸಬೇಕಾದ ಮತ್ತು ಕಲಿಯಬೇಕಾದ ಪಾಠಗಳನ್ನು ಮರೆ ಮಾಡುವ ಹುನ್ನಾರ ಈ ಮೌಢ್ಯದ ಪ್ರಚಾರ. ವೈಚಾರಿಕತೆ, ವೈಜ್ಞಾನಿಕ ಮನೋಭಾವದ ಕೊರತೆ ಇರುವಾಗ ಮೌಢ್ಯ, ಅಂಧ ಶ್ರದ್ಧೆಗಳೇ



ಮೇಲುಗೈ ಪಡೆದಿರುವ ಸನ್ನಿವೇಶದಲ್ಲಿ ಇಂತಹ ವಾದಗಳು ಬಹುಬೇಗ ಜನತೆಯ ಮನಸ್ಸನ್ನು ಹಿಡಿದು ಬಿಡುತ್ತವೆ. ಆದರೆ ಖಂಡಿಸಬೇಕಾದ್ದು ಮುಂದೆ ಬಂದ ಮುಖ್ಯಮಂತ್ರಿಗಳು ಏನೊಂದು ವಿವೇಚನೆಯಿಲ್ಲದೇ, ಅಂತಹ ಅಂಧ ಜಾಡ್ಯಕ್ಕೆ ನೀರೆದರು. ಅಲ್ಲಿಗೆ ಭೇಟಿ ನೀಡದಿದ್ದರೂ ಧರ್ಮಸಿಂಗ್ ರವರು ಪದಚ್ಯುತರಾಗಲಿಲ್ಲವೇ? ರಾಮಕೃಷ್ಣ ಹೆಗಡೆ, ದೇವೇಗೌಡರ, ಸಮಾಜವಾದಿ ಜೆ.ಹೆಚ್.ಪಟೇಲ್, ಎಸ್.ಎಂ.ಕೃಷ್ಣ ರಂತಹವರ ಅಧಿಕಾರದ ಕುರ್ಚಿ ಖಾಯಂ ಹಾಗೇ ಉಳಿಯಿತೇ? ಹೀಗಾಗಿ ಮುಖ್ಯಮಂತ್ರಿ ಚಾಮರಾಜನಗರಕ್ಕೆ ಭೇಟಿ ನೀಡುವುದನ್ನು ಅಧಿಕಾರ ಕಳೆದುಕೊಳ್ಳುವುದನ್ನು ಏನೊಂದು ಸಂಬಂಧಗಳಿಲ್ಲ. ಆದರೆ ಜನತೆಗೆ, ತಿಳಿಸಿ ಹೇಳುವವರಾರು? ಉನ್ನತ ಸ್ಥಾನದಲ್ಲಿರುವವರೇ ಇಂತಹ ಮೂರ್ಖ ನಂಬಿಕೆಗೆ ಒಳಗಾಗಿರುವಾಗ?

ಆದರೆ ಜನರ ನಿರೀಕ್ಷೆಗಳು ಕುಸಿದಿರಲಿಲ್ಲ. ಮೌಢ್ಯದ ಮಡುವಿನಲ್ಲೇ ಕೊಳೆಯಲಿಲ್ಲ. ತಮ್ಮ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳು ಬರಬೇಕೆಂದು ಸತತವಾಗಿ ಜನ ಆಗ್ರಹಿಸುತ್ತಾ ಬಂದಿದ್ದಾರೆ. ಎಲ್ಲೆಲ್ಲೋ ನಡೆಯುವ ಅಧಿಕಾರದ ದಾಳದ ಆಟಕ್ಕೆ ತಮ್ಮನ್ನು ಯಾಕೆ ದೂರಬೇಕು ಎಂದೂ ಪ್ರಶ್ನಿಸಿದ್ದಾರೆ.

ಆದ್ದರಿಂದಲೇ ಕುಮಾರಸ್ವಾಮಿ ಚಾಮರಾಜನಗರಕ್ಕೆ ಭೇಟಿ ನೀಡಿದಾಗ ಜನರ ಸಂತೋಷಕ್ಕೆ ಪಾರವೇ ಇರಲಿಲ್ಲ. ಸೇರಿದ ಜನ ಈ ಕ್ಷಣವನ್ನೇ ಸಂಭ್ರಮದಿಂದ ಆಚರಿಸಿದರು, ಸವಿದರು. ಏನೇನೋ ಕಾರಣ ಹೇಳಿ ತಮ್ಮ ಸಂಕಷ್ಟಗಳನ್ನು ಕೇಳದೇ ಹೋದ ಮುಖ್ಯಮಂತ್ರಿಗಳ ಎದುರಲ್ಲಿ ಕುಮಾರನ ಮುಖದರ್ಶನ ಮಾಡಿದಾಗ ಹರ್ಷೋದ್ಗಾರ ಗೈದದ್ದು.

ಈ ಅಪಾರ ನಿರೀಕ್ಷೆಗಳನ್ನು ಕುಮಾರಸ್ವಾಮಿ ಸರ್ಕಾರ ಗಂಭೀರವಾಗಿ ಪರಿಗಣಿಸವುದೇ? ಅಥವಾ ಭೇಟಿ ನೀಡಿ 'ಕ್ರಾಂತಿ' ಮಾಡಿದ್ದು ಸಾಕು ಈ ಅಲೆಯ ಮೇಲೆಯೇ ತೇಲಬಹುದು ಎಂದು ಲೆಕ್ಕಾಚಾರ ಹಾಕುವುದೇ?

ಕುಮಾರಸ್ವಾಮಿ ಭೇಟಿ ನೀಡುವವರೆಗೂ ಅವರು ಬರುತ್ತಿದ್ದಾರೆ ಎಂದು ಜನಕ್ಕೆ ಖಾತರಿ ಇರಲಿಲ್ಲ. ಕಾರಣ, ಅವರು ಇಂತಹ ನಂಬಿಕೆಗಳಿಂದ ದೂರವಿದ್ದಾರೆ ಎಂಬ ವಿಶ್ವಾಸ ಮೂಡಿರಲಿಲ್ಲ, ಯಜ್ಞ, ಮಂತ್ರ ತಂತ್ರವೆಂದೂ ಗುಡಿ ಗುಂಡಾರ ಸುತ್ತುತ್ತಿರುವಾಗ ಕುಮಾರಸ್ವಾಮಿ ಅಲ್ಲಿಗೆ ಭೇಟಿ ನೀಡಿದ್ದು ಸ್ವಾಗತಾರ್ಹ. ಆದರೆ ಮೌಢ್ಯ ನಂಬಿಕೆಗಳಿಂದ ಅವರೇನೂ ಮುಕ್ತರೆಂದು, ವ್ಯವಹಾರತೀತರೆಂದೂ ಭಾವಿಸಬೇಕಿಲ್ಲ. ಈಗೇನೋ ಕೆಲವು ಅಭಿವೃದ್ಧಿಯ ಯೋಜನೆಗಳನ್ನು ಪ್ರಕಟಿಸಿದ್ದಾರೆ. ಜನರ ಕಷ್ಟ ಕನಿಷ್ಠ ಅಗತ್ಯಗಳ ಈಡೇರಿಕೆಗೆ ಅಗತ್ಯ ನೆರವು, ಗಮನವನ್ನು ನೀಡುವರೇ? ಮುಖ್ಯಮಂತ್ರಿಗಳ ಈ ಜಿಲ್ಲೆಯ ಭೇಟಿಯ ವೇಳೆಯಲ್ಲೇ ಕೃಷಿ ಸಾಲದ ಬಾಧೆ ತಾಳದೇ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಬಹಳಷ್ಟು ಬುಡಕಟ್ಟು ಜನರಿರುವ ಈ ಜಿಲ್ಲೆಯಲ್ಲಿ ರೇಷನ್ ಕೊರತೆ, ಹಸಿವಿನಾಕ್ರಂಧನ ವ್ಯಾಪಕವಾಗಿದೆ. ಇಂತಹ ಪ್ರಶ್ನೆಗಳು ನೂರಾರು.... ಇವುಗಳನ್ನು ಒಂದು ಸವಾಲಾಗಿ ಮುಖ್ಯಮಂತ್ರಿ ಸ್ವೀಕರಿಸಿಯಾರೆ? ಇಲ್ಲವಾದಲ್ಲಿ 'ಬಂದ ಪುಟ್ಟ ಹೋದ ಪುಟ್ಟ' ಎಂದು ಜನರು ಅಣಕು ಮಾಡುತ್ತಾರೆ.


ಅತಂತ್ರ ಸ್ಥಿತಿ ಸಲ್ಲದು

ನಿರ್ದೇಶನದಂತೆ ನ್ಯಾಯಾಲಯಕ್ಕೆ ನಿಗದಿತ ಅವಧಿಯೊಳಗೆ ಭಾಷಾ ಮಾಧ್ಯಮ ಕಲಿಕೆಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸದಿರುವ 400 ಖಾಸಗಿ 'ಕಂಗ್ಲೀಷ್' ಶಾಲೆಗಳ ಮಾನ್ಯತೆಯನ್ನು ರದ್ದುಗೊಳಿಸಲು ಉಚ್ಚ ನ್ಯಾಯಾಲಯವು ಸೂಚಿಸಿದ್ದು ಸರ್ಕಾರದ ಆಜ್ಞೆಗೆ ತಡೆ ನೀಡಿದ್ದ ಆದೇಶವನ್ನು ತೆರವುಗೊಳಿಸಿದೆ. ಖಾಸಗಿ ಶಿಕ್ಷಣ ಮಂಡಳಿ ಹಾಗೂ ಸರ್ಕಾರದ ನಡುವಿನ ಸಮರ ಇನ್ನೂ ತೀವ್ರಗೊಂಡಿದೆ. ಇದರ ಪರಿಣಾಮ ಪಾಲಕರು, ವಿದ್ಯಾರ್ಥಿಗಳ ಮೇಲಾಗುತ್ತಿದ್ದು ಆತಂಕಕಾರಿ ಸ್ಥಿತಿ ಸೃಷ್ಟಿಸಿದೆ.

ಭಾಷಾ ನೀತಿ ಅನುಸರಿಸಲು ಖಾಸಗಿ ಶಾಲೆಗಳ ಆಡಳಿತ ಮಂಡಳಿ ಸಿದ್ಧವಿಲ್ಲವೆಂಬುದನ್ನು ತೋರಿಸುತ್ತಿದ್ದಾರೆ. ಈ ಮಟ್ಟಕ್ಕೆ ಅವರು ಹೋಗಲು ಬೇಕಾಬಿಟ್ಟಿ ಬೆಳೆಯುವಂತೆ ನೀತಿ ಉಲ್ಲಂಘನೆಯಾಗಲೀ ಸರ್ಕಾರದ ಆಡಳಿತವೇ ಅವಕಾಶ ಕಲ್ಪಿಸಿದೆ. ವ್ಯಾಪಕ ಹಣಕಾಸಿನ ಭ್ರಷ್ಟಾಚಾರವೇ ಇದಕ್ಕೆಲ್ಲಾ ಕಾರಣ.

ಈಗ ಸರ್ಕಾರ ಪ್ರಾಮಾಣಿಕವಾಗಿ ಯತ್ನಿಸುತ್ತಿದೆಯೇ? ಸಚಿವರ ಆಗ್ರಹದಲ್ಲಿ ಕಳಕಳಿಯೆಷ್ಟು? ಭ್ರಷ್ಟಾಚಾರದ ಬಯಕೆಯನ್ನು ಈಡೇರಿಸುವಲ್ಲಿ ಖಾಸಗಿ ಶಾಲಾ ಆಡಳಿತವರ್ಗ ಸಿದ್ಧವಿಲ್ಲದಿರುವುದರಿಂದ ಈ ಸಂಘರ್ಷ ವಿರ್ಪಟ್ಟ ಸುದ್ದಿಗಳಿವೆ. ಇವರಲ್ಲಿ ಪೋಷಕರು, ವಿದ್ಯಾರ್ಥಿಗಳು ಹಾನಿಗೀಡಾಗುವವರು.

ಶೈಕ್ಷಣಿಕ ವರುಷ ಆರಂಭಗೊಂಡಿರುವಾಗಲೂ ಈ ಆತಂಕ ಡೋಲಾಯಮಾನ ಸ್ಥಿತಿ ಮುಂದುವರಿಯುವುದು ಸರಿಯಲ್ಲ. ಪಾಲಕರ ಬಯಕೆ ಮತ್ತು ಮಕ್ಕಳ ಭವಿಷ್ಯ ಎರಡನ್ನೂ ಉಪೇಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರ ಹಾಗೂ ಆಡಳಿತ ಮಂಡಳಿಗಳು ಜವಾಬ್ದಾರಿಯಿಂದ ವರ್ತಿಸಬೇಕು ಶೈಕ್ಷಣಿಕ ವರ್ಷ ತಿಳಿಸಬೇಕು.



ಸಿ.ಯತಿರಾಜು

1857: ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

ದೆಹಲಿ ತಲುಪಿದ ಸೈನಿಕ ಬಂಡಾಯ

ಮೀರತ್‌ನಲ್ಲಿ ಬಂಡಾಯವೆದ್ದ ಸೈನಿಕರು ನೇರವಾಗಿ ದೆಹಲಿ ತಲುಪಿದರು. ದೆಹಲಿಯ ತೆರಿಗೆ ಕೋಠಿಗೆ ಬೆಂಕಿ ಹಚ್ಚಿ ರಾಜ್‌ಘಾಟ್ ಮೂಲಕ ಕೆಂಪುಕೋಟೆಯನ್ನು ವಶಪಡಿಸಿಕೊಂಡರು. ಕಟ್ಟಕಡೆಯ ಮೊಘಲ್ ದೊರೆ 2 ಬಹದ್ದೂರ್ ಷಾನನ್ನು ಬಂಡಾಯದ ನಾಯಕತ್ವ ವಹಿಸಲು ಕೋರಲಾಯಿತು. ಸ್ವಭಾವತಃ ಕವಿಯಾದ ಆಡಳಿತದಲ್ಲಿ ನಿರಾಸಕ್ತಿ ಹೊಂದಿದ್ದ, 90 ವರ್ಷದ ವಯೋವೃದ್ಧ ಬಹಾದ್ದೂರ್ ಷಾ ಬ್ರಿಟಿಷರದಿಂದ 12 ಲಕ್ಷ ರೂ ನಿವೃತ್ತಿ ವೇತನ ಪಡೆಯುತ್ತಿದ್ದ. ಸೈನಿಕ ತರಬೇತಿಯಾಗಲಿ, ಯುದ್ಧದ ಅನುಭವವಾಗಲಿ ಇಲ್ಲದ ಬಹಾದ್ದೂರ್ ಷಾ ಸಿಪಾಯಿಗಳ ಮುಖಂಡನಾಗಿ ಬ್ರಿಟಿಷರ ವಿರೋಧಿಯಾಗಲು ಪ್ರಾರಂಭದಲ್ಲಿ ನಿರಾಕರಿಸಿದ. ಕ್ರಮೇಣ ದೆಹಲಿಯ ಕೆಂಪುಕೋಟೆಯ ತುಂಬಾ ಬಂಡಾಯ ಸೈನಿಕರು ತುಂಬಿ ಹೋದರು. ಷಾನನ್ನು ಬಲವಂತವಾಗಿ ಒಪ್ಪಿಸಿ ಹಿಂದೂಸ್ಥಾನದ ಶಹನ್ -ಈ-ಷಾ ಆಗಿ ಘೋಷಿಸಲಾಯಿತು. ಬಂಡೆದ್ದ ಹಿಂದೂ ಮತ್ತು ಮುಸ್ಲಿಂ ಸೈನಿಕರಿಗೆ ಒಬ್ಬ ಮುಸ್ಲಿಂ ಅರಸನನ್ನು ದೆಹಲಿ ಗದ್ದುಗೆ ಮೇಲೆ ಕೂರಿಸುವ ಮೂಲಕ ಕೋಮು ಸೌಹಾರ್ದತೆಯ ಒಂದು ಹೊಸ ಪರಂಪರೆ ಆರಂಭಗೊಂಡಿತು. ದೆಹಲಿಯ ರಾಜಕೀಯ ಪ್ರತಿನಿಧಿ ಸೈಮನ್ ಫ್ರೆಸರ್ ಹಾಗೂ ಇತರ ಆಂಗ್ಲ ಅಧಿಕಾರಿಗಳನ್ನು ಕೊಂದು ದೆಹಲಿಯನ್ನು ವಶಪಡಿಸಿಕೊಳ್ಳುವ ಮೂಲಕ ವಿದೇಶಿ ಆಡಳಿತವನ್ನು ಅಂತ್ಯಗೊಳಿಸುವ ಮೊಟ್ಟ ಮೊದಲ ದಿರೋಧಾತ್ತ ಹೋರಾಟ ಆರಂಭಗೊಂಡಿತು.



ರಾಜಕೀಯ ಸ್ವರೂಪ ಪಡೆದುಕೊಂಡ ಸೈನಿಕ ಬಂಡಾಯ

ದೆಹಲಿ ವಶಪಡಿಸಿಕೊಂಡ ಒಂದು ತಿಂಗಳೊಳಗಾಗಿ ಸೈನಿಕ ಬಂಡಾಯ ದೇಶದ ವಿವಿಧ ಭಾಗಗಳಿಗೆ ಕಾಳ್ಗಿಚ್ಚಿನಂತೆ ಹರಡಿ ಪೂರ್ಣ ಪ್ರಮಾಣದಲ್ಲಿ ರಾಜಕೀಯ ಹೋರಾಟವಾಗಿ ಮಾರ್ಪಾಟುಗೊಂಡಿತು. ಕಾನ್ಪುರ, ಲಕ್ನೋ, ಬನಾರಸ್, ಅಲಹಾಬಾದ್, ಬರೇಲಿ, ಜಗದೀಶ್‌ಪುರ್ ಮತ್ತು ಝೂನ್ಸಿಗಳು ಹತ್ತಿ ಉರಿಯಲಾರಂಭಿಸಿದವು. ಈ ಎಲ್ಲಾ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ಆಡಳಿತವನ್ನು ಪಲ್ಲಟಗೊಳಿಸಲಾಯಿತು. ಸೈನಿಕ ಪಡೆಗಳಲ್ಲಿ ನಾಯಕತ್ವ ನೀಡಬಲ್ಲ ಸೈನಿಕರ ಕೊರತೆಯಿಂದಾಗಿ ಬಂಡಾಯಗಾರರು ಹೆಚ್ಚು ಹೆಚ್ಚಾಗಿ ಬ್ರಿಟಿಷರಿಂದ ಪದಚ್ಯುತಗೊಂಡಿದ್ದ ಇಲ್ಲವೇ ದೂರತಳ್ಳಲ್ಪಟ್ಟ ಭಾರತೀಯ ಸಾಂಪ್ರಾದಾಯಿಕ ನಾಯಕರನ್ನು ಆಶ್ರಯಿಸಿದರು. ಪಾಳೇಗಾರರು, ಮಾಂಡಲಿಕರು, ಪ್ರಾಂತ್ಯಾಧಿಕಾರಿಗಳು, ಸುಲ್ತಾನರು, ನವಾಬರು ಬ್ರಿಟಿಷರಿಂದ ತಮಗಾದ ಅವಮಾನ ಮತ್ತು ನಷ್ಟಗಳಿಗೆ ಸೇಡು ತೀರಿಸಿಕೊಳ್ಳಲು ಇದೊಂದು ಸದಾವಕಾಶವೆಂದು ಭಾವಿಸಿ ಬಂಡಾಯದ ಭಾಗವಾಗಿ ಸ್ಥಳೀಯವಾಗಿ ವಿಸ್ತಾರಗೊಳ್ಳುತ್ತಾ ಹೋದ ಹೋರಾಟಗಳಲ್ಲಿ ಮುಂಚೂಣಿ ನಾಯಕರಾಗಿ ಕಂಗೊಳಿಸಿದರು.

ನಾನಾ ಸಾಹೇಬನ ಬಂಡಾಯ

ಕಾನ್ಪುರದಲ್ಲಿ ಕಡೆಯ ಪೇಶ್ವಾ 2ನೇ ಬಾಜಿರಾವ್‌ನ ದತ್ತು ಪುತ್ರ ನಾನಾಸಾಹೇಬ್ ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ಹೋರಾಟಕ್ಕೆ ಸೇರ್ಪಡೆಯಾದ. ಕಾನ್ಪುರದ ಖಜಾನೆ ಮತ್ತು ಶಸ್ತ್ರಾಸ್ತ್ರ ಕೋಠಿಗಳ ಮೇಲೆ ಬಂಡೆದ್ದ ಸಿಪಾಯಿಗಳು ದಾಳಿ ಮಾಡಿದಾಗ ನಾನಾ ಸಾಹೇಬ್ ಮತ್ತು ಅವನ ನಿಷ್ಠಾವಂತ ದಂಡನಾಯಕ ತಾಂತ್ಯಾ ಟೋಪಿ ಬಂಡಾಯಗಾರರ ಜೊತೆ ಸೇರಿಕೊಂಡು ಹೋರಾಡಿದರು. ಕಾನ್ಪುರದಲ್ಲಿ ಬ್ರಿಟಿಷರ ಅಪಾರ ಐಶ್ವರ್ಯ ಹಾಗೂ ಮದ್ದು ಗುಂಡುಗಳು ಬಂಡಾಯಗಾರರ ವಶವಾದವು. ಕುನ್ವರ್ ಸಿಂಗ್ ಮತ್ತು ನಾನಾ ಆರ್ಧಾದಲ್ಲಿನ ಬ್ರಿಟಿಷರ ರಕ್ಷಣಾ ನೆಲೆಯ ಮೇಲೆ ದಾಳಿ ಮಾಡಿದರು. ಅಲ್ಲಿ ಆಶ್ರಯ ಪಡೆದಿದ್ದ ಬ್ರಿಟಿಷರು ಶರಣಾಗತರಾಗಿ ಅವರನ್ನು ಸುರಕ್ಷಿತವಾಗಿ ಅಲಹಾಬಾದ್‌ಗೆ ತಲುಪಲು ಅವಕಾಶ ಮಾಡಿಕೊಡಬೇಕೆಂದು ಒಪ್ಪಂದವಾಯಿತು. ಜೂನ್ 27ರ ಬೆಳಿಗ್ಗೆ 40 ದೋಣಿಗಳಲ್ಲಿ ಸತಿ ಚೌರಾ ಘಾಟ್‌ನಿಂದ ಬ್ರಿಟಿಷರೇ ಅಲಹಾಬಾದ್‌ಗೆ ಪ್ರಯಾಣ ಪ್ರಾರಂಭಿಸಿದಾಗ ದೋಣಿಗಳಿಗೆ ಬೆಂಕಿ ತಗುಲಿ ಹಲವಾರು ಜನ ದೋಣಿಗಳಲ್ಲಿ ಸುಟ್ಟು ಹೋದರು. ಮತ್ತೆ ಹಲವಾರು ಹೆಂಗಸರು ಮಕ್ಕಳು ನದಿ ನೀರಿನಲ್ಲಿ ಮುಳುಗಿ ಕೊಚ್ಚಿ ಹೋದರು. ಇದು ಸಿಪಾಯಿದಂಗೆಯ ಅತ್ಯಂತ ದೊಡ್ಡ ದುರಂತಗಳಲ್ಲಿ ಒಂದಾಯಿತು. ಸತಿ ಚೌರಾಘಾಟ್‌ನ ದುರಂತದ ನಂತರ ನಾನಾ ಸಾಹೇಬ್ ಬಂಡಾಯವೆದ್ದ ಸಿಪಾಯಿಗಳ ದೊಡ್ಡ ನಾಯಕನಾಗಿ ರೂಪಿತವಾದ. ಜೂನ್ 30 ರಂದು ಅವನನ್ನು ಅತ್ಯಂತ ಅದ್ದೂರಿಯಿಂದ ಬಿತೂರ್ ಅರಮನೆಯಲ್ಲಿ ಪೇಶ್ವೆಯಾಗಿ ಪಟ್ಟ ಕಟ್ಟಲಾಯಿತು.



ಲಖನೌದಲ್ಲಿ ಬೇಗಂ ಹಜರತ್ ಮಹಲ್ ಅಧಿಕಾರ ವಹಿಸಿ ಕೊಂಡಳು. ಪದಚ್ಯುತಗೊಳಿಸಲ್ಪಟ್ಟಿದ್ದ ಔದ್‌ನ ನವಾಬನ ಸ್ಥಾನದಲ್ಲಿ ಬೇಗಂಳ ಮಗನಾದ ಬ್ರಿಜಿಸ್ ಕಾದಿರ್‌ನನ್ನು ನವಾಬನೆಂದು ಘೋಷಿಸಿ ಅಧಿಕಾರದ ಹುದ್ದೆಗಳನ್ನು ಹಿಂದೂಗಳು ಮತ್ತು ಮುಸ್ಲಿಮರು ಸಮಾನವಾಗಿ ಹಂಚಿಕೊಂಡು ಯಥಾ ಪ್ರಕಾರದ ಆಡಳಿತವನ್ನು ಸ್ಥಾಪಿಸಲಾಯಿತು. ನವಾಬನ ಪದಚ್ಯುತಿಯೊಂದಿಗೆ ಅಧಿಕಾರ ಕಳೆದುಕೊಂಡಿದ್ದ ಸಾಮಂತರು, ಆಸ್ಥಾನಿಕ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಹೊಸ ಆಡಳಿತವನ್ನು ಬೆಂಬಲಿಸಿದರು.

ಬರೇಲಿಯಲ್ಲಿ ರೊಹಿಲ್‌ಖಂಡ್ ಅರಸೊತ್ತಿಗೆ ವಂಶದವರಾದ ಖಾನ್ ಬಹಾದ್ದೂರ್‌ನನ್ನು ದಂಡನಾಯಕನನ್ನಾಗಿ ನೇಮಕ ಮಾಡಲಾಯಿತು. ಬ್ರಿಟಿಷರ ಪಿಂಚಣಿಯ ಕೃಪೆಯಲ್ಲಿದ್ದ ಖಾನ್ ಬಹಾದ್ದೂರ್ ಆರಂಭದಲ್ಲಿ ಉತ್ಸಾಹ ತೋರದಿದ್ದರೂ ಬಂಡಾಯ ತೀವ್ರಗೊಂಡಾಗ ಆಡಳಿತದ ಸೂತ್ರಗಳನ್ನು ಕೈಗೆತ್ತಿಕೊಂಡು 40,000 ಸೈನಿಕರ ಪಡೆಯನ್ನು ಕಟ್ಟಿ ಬ್ರಿಟಿಷರಿಗೆ ತೀವ್ರ ಪ್ರತಿರೋಧ ವನ್ನೊಡ್ಡಿದನು.

ಕುವ್ವರ್ ಸಿಂಗ್ ಬಂಡಾಯ

ಬಿಹಾರದಲ್ಲಿ ಜಗದೀಶ್‌ಪುರದ ಜಮೀನ್ದಾರ ಕುವ್ವರ್‌ಸಿಂಗ್ ಬಂಡಾಯಕ್ಕೆ ನೇತೃತ್ವ ನೀಡಿದ. 70 ವರ್ಷದ ಈ ಜಮೀನ್ದಾರನನ್ನು ಬ್ರಿಟಿಷರು ಪದಚ್ಯುತಗೊಳಿಸಿ ಅವನ ಆಸ್ತಿಪಾಸ್ತಿಯನ್ನು ವಶಪಡಿಸಿಕೊಂಡಿದ್ದರು. ಅವನು ಪದೇ ಪದೇ ಮಾಡಿಕೊಂಡ ಮನವಿಗಳು ಬ್ರಿಟಿಷರ ಕಿವಿಯ ಮೇಲೆ ಬಿದ್ದಿರಲಿಲ್ಲ. ದಿವಾಳಿಯ ಅಂಚಿನಲ್ಲಿದ್ದ ಕುವ್ವರ್‌ಸಿಂಗ್ ಬ್ರಿಟಿಷರ ಮೇಲೆ ಕತ್ತಿ ಮಸೆಯುತ್ತಿದ್ದ. ಬಂಡಾಯ ಅವನಿಗೆ ಅತ್ಯಂತ ಉತ್ತಮವಾದ ಅವಕಾಶವನ್ನೊದಗಿಸಿತು ಬಂಡಾಯದ ದಂತಕಥೆ ಝೂನ್ಸಿ ರಾಣಿ ಲಕ್ಷ್ಮಿಭಾಯಿಗೆ ಬ್ರಿಟಿಷರು ಘನಘೋರವಾದ ಅನ್ಯಾಯವನ್ನೆಸಗಿದ್ದರು. ಗವರ್ನರ್ ಜನರಲ್ ಲಾರ್ಡ್ ಡಾಲ್‌ಹೌಸಿ 'ದತ್ತು ಮಕ್ಕಳಿಗೆ ಹಕ್ಕಿಲ್ಲವೆಂದು' ಘೋಷಣೆ ಹೊರಡಿಸಿ ಲಕ್ಷ್ಮಿಭಾಯಿಯ ಮಗನನ್ನು ಸಿಂಹಾಸನಕ್ಕೆ ಉತ್ತರಾಧಿಕಾರಿ ಯಾಗುವುದನ್ನು ತಡೆದಿದ್ದನು. ಬ್ರಿಟಿಷರ ಈ ತೀರ್ಮಾನವನ್ನು ಬದಲಾಯಿಸಲು ರಾಣಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿ ಕೈ ಚೆಲ್ಲಿದ್ದಳು. ಅವಳು ಬ್ರಿಟಿಷರಿಗೆ ನೀಡಿದ ಮನವಿಗಳು ಯಾವ ಪ್ರಯೋಜನಕ್ಕೂ ಬಂದಿರಲಿಲ್ಲ. ತನ್ನೆಲ್ಲಾ ಪ್ರಯುತ್ನಗಳು ಫಲ ನೀಡದ್ದರಿಂದ ಭ್ರಮ ನಿರಸನಗೊಂಡ ರಾಣಿ ಬಂಡೆದ್ದ ಸಿಪಾಯಿಗಳೊಂದಿಗೆ ಸೇರಿಕೊಂಡು ತ್ಯಾತಾ ಟೋಪಿಯ ಸಹಾಯ ಪಡೆದು ಬ್ರಿಟಿಷರಿಗೆ ಬಲಿಷ್ಠ ಹೋರಾಟ ನೀಡಿದಳು.




ನಾನಾ ಸಾಹೇಬ್



ಝಾನ್ಸಿ ರಾಣಿ

ಬ್ರಿಟಿಷರ ವಿರುದ್ಧ ನಡೆದ ಈ ಸಶಸ್ತ್ರ ಬಂಡಾಯದಲ್ಲಿ ಕೇವಲ ಸೈನಿಕರು ಮತ್ತು ಬ್ರಿಟಿಷರಿಂದ ತೊಂದರೆ, ಪದಚ್ಯುತಿಯನ್ನನುಭವಿಸಿದರು ಮಾತ್ರ ಭಾಗವಹಿಸಲಿಲ್ಲ. ವಸಾಹತುಶಾಹಿ ಆಡಳಿತದಿಂದ, ಅಪಾರ ಕಷ್ಟನಷ್ಟಗಳನ್ನು ಅನುಭವಿಸಿದ ನಾಗರೀಕ ಜನಸಮೂಹ ಅತ್ಯಂತ ಪ್ರಮುಖವಾಗಿ ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದರು. ಔದ್ ಪ್ರಾಂತ್ಯದಲ್ಲಿ ಸುಮಾರು ಪ್ರತಿ ರೈತ ಕುಟುಂಬದಿಂದ ಬಂಗಾಳಿ ಸೇನೆಯಲ್ಲಿ ಒಬ್ಬ ಸದಸ್ಯನಾದರೂ ಸೇರಿರುತ್ತಿದ್ದ. ಹಾಗಾಗಿ ಬಂಗಾಳ ಸೇನೆಯ ಸೈನಿಕರೆಲ್ಲರೂ ಲೆನಿನ್‌ರ ಹೇಳಿಕೆಯಂತೆ 'ಸಮವಸ್ತ್ರದಲ್ಲಿದ್ದ ರೈತರಾಗಿದ್ದ' ಬಂಗಾಳ ಸೈನ್ಯಕ್ಕೆ ಸೇರುತ್ತಿದ್ದ ಸಿಪಾಯಿಗಳು ದೇಶದಲ್ಲೇ ಅತ್ಯಂತ ಹೆಚ್ಚು ತೆರಿಗೆ ನೀಡುತ್ತಿದ್ದ ಪ್ರದೇಶಗಳಿಂದ ಬಂದವರಾಗಿದ್ದರು. 1822 ರಿಂದ ಜಾರಿಯಲ್ಲಿದ್ದ ಮಹಲ್ವಾರಿ ಪದ್ಧತಿಯಿಂದಾಗಿ ರೈತರು ಮತ್ತು ಹಳ್ಳಿಗಳ ಜಮೀನ್ದಾರರು ಅತ್ಯಂತ ದುಬಾರಿಯಾದ ತೆರಿಗೆ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ವಿನಾಶಹೊಂದುವ ಹಂತವನ್ನು ತಲುಪಿದರು. ಬಂಗಾಳ ಸೈನ್ಯದಲ್ಲಿದ್ದ ಬ್ರಾಹ್ಮಣ ಮತ್ತು ಶೇಕ್ ಕುಟುಂಬಗಳು ಬ್ರಿಟಿಷ್ ಪೂರ್ವ ತೆರಿಗೆ ರಹಿತರವಾದ ಮಾಫಿ ಜಮೀನನ್ನು ಅನುಭವಿಸುತ್ತಿದ್ದರು. ಬ್ರಿಟಿಷರು ಈ ಜಮೀನುಗಳನ್ನು ವಶಪಡಿಸಿಕೊಂಡು ಅಲ್ಲಿ ಗೇಣಿ ಮಾಡುವ ರೈತರಿಂದ ಅಪಾರ ತೆರಿಗೆ ಸಂಗ್ರಹಿಸಲಾರಂಭಿಸಿದರು. ಔದ್ ಪ್ರಾಂತ್ಯವನ್ನು 1856ರಲ್ಲಿ ಬ್ರಿಟಿಷರು ವಶಪಡಿಸಿ ಕೊಂಡರು. ಈ ಪ್ರಾಂತ್ಯದಲ್ಲಿ ಜಮೀನ್ದಾರರಾಗಿದ್ದ 'ತಾಲ್ಲೋಕ್ ದಾರ್' ಗಳು ಅತ್ಯಂತ ಶೋಷಣಾ ಪೂರಿತವಾದ ಮಹಲ್ವಾರಿ ತೆರಿಗೆ ಪದ್ಧತಿಗೆ ಒಳಪಟ್ಟು ವಿನಾಶಕಾರಿ ಪರಿಸ್ಥಿತಿಯಲ್ಲಿದ್ದರು. ○



ತಂಬಾಕು ಸೇವನೆ ಮತ್ತು ಕಾರ್ಮಿಕರ ಸ್ಥಿತಿಗತಿ

ಕಳೆದ ವಾರವಷ್ಟೆ ವಿಶ್ವದಾದ್ಯಂತ 'ತಂಬಾಕು ನಿರಾಕರಿಸಿ' ದಿನಾಚರಣೆ ಆಚರಿಸಲಾಗಿದೆ. ಸುಮಾರು 400 ವರ್ಷಗಳ ಹಿಂದೆ ಪೋರ್ಚುಗೀಸರಿಂದ ಭಾರತಕ್ಕೆ ಪರಿಚಯಿಸಲ್ಪಟ್ಟ ಈ ತಂಬಾಕು ಪ್ರಸ್ತುತದಲ್ಲಿ ಭಾರತ ಮತ್ತು ಆಗ್ನೇಯಾ ಏಷ್ಯಾದಲ್ಲೇ ಅತಿ ದೊಡ್ಡ ಮಾರುಕಟ್ಟೆ ಹೊಂದಿದೆ. ಭಾರತದಲ್ಲಿ ಬೀಡಿ ಉದ್ಯಮವೇ ಅತಿದೊಡ್ಡ ತಂಬಾಕು ಉದ್ಯಮವೆನಿಸಿದೆ.

ವಿಶ್ವದಲ್ಲಿ ಸಂಭವಿಸುತ್ತಿರುವ ಸಾವುಗಳಿಗೆ ಅತಿ ದೊಡ್ಡ ಎರಡನೆ ಕಾರಣವೆಂದರೆ ತಂಬಾಕು ಸೇವನೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು ತನ್ನ ವರದಿಯಲ್ಲಿ ತಿಳಿಸಿದೆ. ಪ್ರಪಂಚದಾದ್ಯಂತ ವರ್ಷಕ್ಕೆ 5 ದಶಲಕ್ಷ ಸಾವುಗಳಿಗೆ ತಂಬಾಕು ಸೇವನೆಯು ಕಾರಣವಾಗಿದೆ. ತಂಬಾಕು ಸೇವನೆಯಿಂದ ಉಂಟಾಗುವ ರೋಗ ನಿರ್ವಹಣಾ ವೆಚ್ಚವೇ 2ಲಕ್ಷ ಕೋಟಿ ಡಾಲರ್ ಎಂದು 1994ರ ವರದಿಯಲ್ಲಿ ದಾಖಲಿಸಲಾಗಿದೆ. ಒಂದು ಆರೋಗ್ಯವಂತ ತರುಣ ಪೀಳಿಗೆಯನ್ನೇ ನಾಶಗೊಳಿಸಿ ದೇಶದ ಉತ್ಪಾದಕ ಶಕ್ತಿಯನ್ನು ತಂಬಾಕು ಸೇವನೆಯು ಚಿವುಟಿ ಹಾಕುತ್ತಿದೆ. ಬಡತನ ಮತ್ತು ತಂಬಾಕು ಸೇವನೆಯು ಒಂದಕ್ಕೊಂದು ಸಂಬಂಧವನ್ನು ಹೊಂದಿವೆ. ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರಗಳಂತಹ ಅತ್ಯವಶ್ಯತೆಗಾಗಿ ಮೀಸಲಾಗಿರಬೇಕಾದ ಆದಾಯದ ಪಾಲನ್ನು ತಂಬಾಕು ಸೇವನೆಯು ತಿಂದು ಹಾಕುತ್ತಿದೆ. ಅಮೇರಿಕಾದ ಇಂಡಿಯಾನಾ ರಾಜ್ಯದಲ್ಲಿ ಶೇ. 24ರಷ್ಟು ಗರ್ಭಿಣಿಯರು ಸಿಗರೇಟ್ ಸೇವನೆ ಮಾಡುತ್ತಾರಂತೆ!

ಆರೋಗ್ಯದ ಮೇಲಿನ ದುಷ್ಪರಿಣಾಮಗಳು

ಸಿಗರೇಟ್ ಹೊಗೆಯು ಸುಮಾರು 4,000 ರಾಸಾಯನಿಕ ವಸ್ತುಗಳನ್ನು ಒಳಗೊಂಡಿದ್ದು ಅದರಲ್ಲಿ ಇಂಗಾಲದ ಮಾನಾಕ್ಸೈಡ್, ಆರ್ಸೆನಿಕ್, ಸಯನೈಡ್, ಬೆಂಜೀನ್, ಫಾರ್ಮಾಲ್ಡಿಹೈಡ್, ಮೆಥನಾಲ್, ಇತ್ಯಾದಿಯಂತಹ 60ಕ್ಕೂ ಹೆಚ್ಚು ಕ್ಯಾನ್ಸರ್-ತರುವ ವಸ್ತುಗಳಿವೆ. ಹಲವು ಬಗೆಯ ಕ್ಯಾನ್ಸರ್ (ಬಾಯಿ ಕ್ಯಾನ್ಸರ್, ಗಂಟಲು ಕ್ಯಾನ್ಸರ್, ಇತ್ಯಾದಿ), ಉಸಿರಾಟ ತೊಂದರೆ, ಮತ್ತು

ಜನಶಕ್ತಿ ಕನ್ನಡ ವಾರಪತ್ರಿಕೆ

ನೀರು ಬೇಕು ನೀರು.......

ಚಿನ್ನದ ಗಣಿಯಲ್ಲಿ ಬರದ ಛಾಯೆ...?

ಚಿನ್ನದ ಗಣಿ ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ. ಕೋಲಾರ ನಗರದಲ್ಲಿ ಒಂದು ಕೊಡ ನೀರಿಗೆ 2-3 ರೂಪಾಯಿ ತೆರಬೇಕಿದೆ. 4-5 ಕಿ.ಮೀ. ದೂರದ ಅಂತರಗಂಗೆ ಬೆಟ್ಟ ಹತ್ತಿ ನೀರು ತರಲು ಜನ ಹೋಗುವುದು ಸಾಮಾನ್ಯವಾಗಿದೆ. ಒಂದು ಕಡೆ ಅಂತರ್ಜಲ ಬತ್ತಿ ಹೋಗಿದೆ. ಮತ್ತೊಂದೆಡೆ ಫ್ಲೋರೈಡ್ ಮತ್ತು ನೈಟ್ರೇಡ್‌ಯುಕ್ತ ನೀರು ಕುಡಿಯಲು ಯೋಗ್ಯವಲ್ಲದಿದ್ದರೂ ಬೇರೆ ದಾರಿ ಇಲ್ಲದೆ ಕುಡಿಯಲು ಬಳಸಿ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಸರ್ಕಾರವಾಗಲೀ, ನಗರಸಭೆ ಯಾಗಲೀ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಸಿಪಿಐ(ಎಂ) ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಜಿಲ್ಲೆಗೆ ಶಾಶ್ವತ ನೀರಾವರಿಗಾಗಿ ಹೋರಾಟಗಳನ್ನು ನಡೆಸಲಾಗಿದೆ.

ಕಾವೇರಿ ಮಡಿಲಲ್ಲಿ ಕುಡಿಯಲು ನೀರಿಲ್ಲ....!

ಕಾವೇರಿ ಮಡಿಲು ಮಂಡ್ಯದಲ್ಲಿ ಕುಡಿಯುವ ನೀರಿಗೆ ಆಹಾಹಾಕಾರ ಎಂದರೆ ನಂಬುತ್ತೀರಾ....? ಆದರೂ ಇದು ಸತ್ಯ. ಮಂಡ್ಯ ನಗರಸಭೆಗೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಉಲ್ಬಣಗೊಂಡಿದೆ. ನೀರಿರುವ ಇತರೆ ಪ್ರದೇಶಗಳಿಗೆ 1-2 ಕಿ.ಮೀ. ನಡೆದುಹೋಗಿ ನೀರು ತರಬೇಕು. ಮಂಡ್ಯ ನಗರಸಭೆ ಸಮಸ್ಯೆ ಬಗೆಹರಿಸುವಲ್ಲಿ ಯಾವುದೇ ಪ್ರಯತ್ನ ನಡೆಸಿಲ್ಲ ಎಂದು ಮಹಿಳಾ ಸಂಘಟನೆ ಮುಂದಾಳು ಕುಮಾರಿ ದೂರುತ್ತಾರೆ.

ಕೆಲವೆಡೆ ಮಳೆ ಬಿದ್ದಿದೆ. ಆದರೆ ಕುಡಿಯುವ ನೀರಿನ ಬವಣೆಯೇನೇನು ತಪ್ಪಿಲ್ಲ. ರಾಜ್ಯದಲ್ಲಿನ ಒಂದು ಚಿತ್ರ.



ನೆಲಗುದ್ದಿದರೆ ಜಲ ಬರುವ ಮಂಗಳೂರಲ್ಲಿ ನೀರಿಲ್ಲ....!

14 ಸಾವಿರ ಮಿಲಿ ಮೀಟರ್ ಮಳೆ ಬಿದ್ದರೂ ಕೂಡ ಮಂಗಳೂರು ಜನತೆ ಕುಡಿಯುವ ನೀರಿನ ಅಭಾವ ಎದುರಿಸುತ್ತಿದ್ದಾರೆ. ಅಂತರ್ಜಲ ಸಾಕಷ್ಟಿದ್ದರೂ ಬೋರ್‌ವೆಲ್ ಕೊರೆಯಲು ಮುಂದಾಗುತ್ತಿಲ್ಲ. ಈಗಿರುವ ಹಲವಾರು ಬೋರ್‌ವೆಲ್‌ಗಳು ಕೆಟ್ಟು ನಿಂತಿವೆಯಾದರೂ ಇಲ್ಲಿನ ಪಾಲಿಕೆ ದುರಸ್ತಿಗೆ ಮುಂದಾಗಿಲ್ಲ. ಇದರಲ್ಲಿ ಖಾಸಗಿ ನೀರು ಸರಬರಾಜುದಾರರು ಭಾರಿ ದೊಡ್ಡ ಲಾಭ ನಡೆಸಿದ್ದಾರೆ. ನೀರಿನ ಅಭಾವ ಸುಧಾರಿಸಿ ಲಾಭ ಮಾಡಿಕೊಳ್ಳಲು ಹವಣಿಸುತ್ತಿರುವ ಇವರಿಗೆ ಪಾಲಿಗೆ ನೀರೆರೆದು ಪೋಷಿಸುತ್ತಿದೆ.

ತುಂಗೆಯ ತಡಿಯಲ್ಲಿ ಹಾಹಾಕಾರ

ಏರು ಬಿಸಿಲ ಬಳ್ಳಾರಿಯಲ್ಲಿ ಕುಡಿಯುವ ನೀರಿನ ತೀವ್ರತೆ ಹೆಚ್ಚಾಗಿದೆ. ತುಂಗಭದ್ರ ನದಿ ಸಮೃದ್ಧವಾಗಿ ಹರಿದರೂ ಕೂಡ ಕುಡಿಯುವ ನೀರಿಗಾಗಿ ಹಾಹಾಕಾರ ಪಡುವಂತಾಗಿದೆ. 3-4 ದಿನಕ್ಕೊಮ್ಮೆ ತುಂಗಭದ್ರ ನೀರು ಕೊಳವೆಗಳಿಗೆ ಹರಿಯುತ್ತದೆ. ಬಿಟ್ಟರೆ ಉಳಿದ ದಿನಗಳಿಗೆ ಬಿಸಿ ಗಾಳಿ ಮಾತ್ರ ಹರಿದಾಡುತ್ತಿದೆ. ಬಹುತೇಕ ಆಲೋರ್‌ವೆಲ್‌ಗಳಲ್ಲಿ ನೀರು ಬತ್ತಿ ಹೋಗಿವೆ. ಕೆಲವು ಬೋರ್‌ವೆಲ್‌ಗಳು ಕೆಟ್ಟು ನಿಂತಿದೆ. ಇದರ ಲಾಭ ಪಡೆದ ಪ್ರೈವೇಟ್ ನೀರು ಪೂರೈಕೆದಾರರು ಬೀದಿ ಬೀದಿಗಳಲ್ಲಿ ಟ್ಯಾಂಕರ್ ಓಡಿಸುತ್ತಿದ್ದಾರೆ. ದುಬಾರಿ ಹಣ ತೆತ್ತು ನೀರು ಕುಡಿಯಬೇಕಿದೆ. ಹಲವು ಹೋರಾಟಗಳನ್ನು ನಡೆಸಿ ನಗರಸಭೆ ಮೇಲೆ ಒತ್ತಡ ಹೇರಿದ್ದಾಗ್ಯೂ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ.

ಭಿನ್ನವಾಗಿಲ್ಲ ರಾಯಚೂರು

ರಾಯಚೂರು ಜಿಲ್ಲೆಯಲ್ಲಿ ಬಹುತೇಕ ಕೊಳವೆ ಬಾವಿಗಳಲ್ಲಿ ಉಪ್ಪು ನೀರಿದ್ದು ಕುಡಿಯಲು ಯೋಗ್ಯವಿಲ್ಲದ್ದಾಗಿದೆ. ಬಹಳಷ್ಟು ಬೋರ್‌ವೆಲ್‌ಗಳಲ್ಲಿ ನೀರು ಬತ್ತಿ ಹೋಗಿದೆ. ಮೂರ್‍ನಾಲ್ಕು ಕಿ.ಮೀ. ದೂರ ನೀರು ತರಬೇಕಾದ ಪರಿಸ್ಥಿತಿ. ಜಿಲ್ಲೆಯ ಲಿಂಗಸೂಗ್ರಿನಲ್ಲಿ ತೀವ್ರ ತರವಾದ ಕುಡಿಯುವ ನೀರಿನ ಹಾಹಾಕಾರ ಉಂಟಾಗಿದೆ. ಆಗೊಮ್ಮೆ ಈಗೊಮ್ಮೆ ಟ್ಯಾಂಕರ್ ಮಾಲಕ ನೀರು ಪೂರೈಕೆ ಮಾಡಿ ಜಿಲ್ಲಾಡಳಿತ ಕೈ ತೊಳೆದುಕೊಂಡಿದೆ. ಆದರೆ ಇದು ಏನೇನೂ ಸಾಲದಾಗಿದೆ. ಕೊಳವೆ ಬಾವಿ ಕೊರೆಸುವುದರಲ್ಲಿ ಭಾರಿ ಅವ್ಯವಹಾರ ನಡೆಯುತ್ತಿದೆ. ಕೃಷ್ಣ ನದಿಯಿಂದ ನೀರು ಕೊಡಬೇಕೆನ್ನುವುದು ಇಲ್ಲಿನ ಜನತೆಯ ಬೇಡಿಕೆಯಾಗಿದೆ. ಆದರೆ ಸರ್ಕಾರ ಈ ಬಗ್ಗೆ ಯೋಚನೆ ಕೂಡ ಮಾಡುತ್ತಿಲ್ಲ. ಕುಡಿಯುವ ನೀರಿಗಾಗಿ ಪ್ರತಿಭಟನೆಗಳು ನಡೆಯುತ್ತಿವೆ.

ಕಲ್ಬುರ್ಗಿಯಲ್ಲಿ ಜಲಕ್ಷಾಮ

ಗುಲ್ಬರ್ಗದಲ್ಲಿ ಕುಡಿಯುವ ನೀರಿಗಾಗಿ ಜನತೆ ಪರದಾಡುವ ಸ್ಥಿತಿ ನಿರಂತರವಾಗಿದೆ. 5 ಲಕ್ಷಕ್ಕೂ



ಮೀರಿ ಜನಸಂಖ್ಯೆ ಇರುವ ಗುಲ್ಬರ್ಗ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಒಂದು. ಹೀಗಾಗಿ ಅಂತರ್ಜಲವೂ ಕೂಡ ತೀರ ಕಮ್ಮಿ. ಹೀಗಾಗಿ ಕುಡಿಯುವ ನೀರು ಭಾರಿ ದೊಡ್ಡ



ಸಮಸ್ಯೆಯಾಗಿರುವುದರ ಜೊತೆಗೆ ನೀರು ಮಾರಾಟಗಾರರಿಗೆ ಸುಗ್ಗಿಯೂ ಆಗಿದೆ. ಅಂದಾಜು ಗುಲ್ಬರ್ಗಕ್ಕೆ ಪ್ರತಿದಿನ 55 ಮಿಲಿಯನ್ (ದಶಲಕ್ಷ) ಲೀಟರ್ ನೀರು ಅಗತ್ಯವಿದೆ. ಆದರೆ ಈಗ ಕೇವಲ 25 ಮಿಲಿಯನ್ (ದಶಲಕ್ಷ) ಲೀಟರ್ ನೀರು ಪೂರೈಕೆಯಾಗುತ್ತಿದೆ. ಅಂದರೆ ಅರ್ಧಕ್ಕಿಂತ ಹೆಚ್ಚು ನೀರು ಅಭಾವವಾಗಿದೆ. ಹೀಗಾಗಿ ಈ ಅಭಾವವಾಗಿರುವ ನೀರನ್ನು ಖಾಸಗಿ ನೀರು ಪೂರೈಕೆದಾರರು ಭಾರಿ ದೊಡ್ಡ ವ್ಯಾಪಾರದಲ್ಲಿ ತೋರಿಸಿದ್ದಾರೆ. 1 ಟ್ಯಾಂಕರ್‌ಗೆ 125 ರಿಂದ 200 ರೂಪಾಯಿವರೆಗೆ ಮಾರಾಟ ಮಾಡುತ್ತಿದ್ದಾರೆ. ಈಗ ಪೂರೈಕೆ ಮಾಡುತ್ತಿರುವ 25 ದಶಲಕ್ಷ ಲೀಟರ್ ನೀರೂ ಕೂಡ 2 ದಿನ 3 ದಿನಕ್ಕೊಮ್ಮೆ ಮಾತ್ರ. ಅಂತರಾಷ್ಟ್ರೀಯ ಮಾನದಂಡದ ಪ್ರಕಾರ ಪ್ರತಿ ವ್ಯಕ್ತಿಗೆ ದಿನಕ್ಕೆ ಕನಿಷ್ಠ 135 ಲೀಟರ್ ನೀರು ಅಗತ್ಯವಿದೆ. ಆದರೆ ಗುಲ್ಬರ್ಗದಲ್ಲಿ ಮಾತ್ರವಲ್ಲ ರಾಜ್ಯದ ಯಾವ ಜಿಲ್ಲೆಯಲ್ಲಿ ಕೂಡ ಇತರ ನೀರು ಪೂರೈಕೆಯಾಗುತ್ತಿಲ್ಲ. ಈ ಪರಿ ನೀರಿನ ಅಭಾವ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಪ್ರತಿವರ್ಷ ನೀರು ಮಾರಾಟಗಾರರು ಒಟ್ಟಾಗಿ ಸೇರಿ ಮಾಡಿರುವ ಕುತಂತ್ರವಾಗಿದೆ. ಮೂರ್‍ನಾಲ್ಕು ಕಿ.ಮೀ. ಹೋಗಿ ಒಂದು ಕೊಡ ನೀರಿಗೆ 2 ರಿಂದ 3 ರೂಪಾಯಿ ಕೊಟ್ಟು ತರುವ ಪರಿಸ್ಥಿತಿ ಸಾಮಾನ್ಯವಾಗಿದೆ.

ವ್ಯಾಪಕ ಪ್ರತಿಭಟನೆ

ಈ ವಿಚಾರವಾಗಿ ಗುಲ್ಬರ್ಗ ಬಂದ್, ಹರತಾಳ, ರಸ್ತೆ ರೋಖೋ ಹೀಗೆ ಗುಲ್ಬರ್ಗ ಜನತೆ ವ್ಯಾಪಕ ಪ್ರತಿಭಟನೆ ನಡೆಸಿದ್ದಾಗ್ಯೂ ಜನಪ್ರತಿನಿಧಿಗಳಾಗಲೀ, ಜಿಲ್ಲಾಡಳಿತವಾಗಲೀ ಕಿಂಚಿತ್ತೂ ಗಮನ ಹರಿಸಿಲ್ಲ.

■ **ಲಿಂಗರಾಜು**

ಮುಖ್ಯಮಂತ್ರಿ ಮನೇನಲ್ಲಿ ನೀರಿಲ್ಲ ಅಂದ್ರೆ ಮುಖ್ಯಮಂತ್ರಿಗಳು ಇರ್‍ತಾರಾ?

- ಲಕ್ಷ್ಮೀದೇವಿ, ಲಗ್ಗೆರೆ, ಬೆಂಗಳೂರು

★

ಕುಡಿಯೋ ನೀರಿಗೆ ಕೋಟ್ಯಾಂತರ ರೂಪಾಯಿಗಳು ಕೊಟ್ಟಿರುವುದಾಗಿ ಸರ್ಕಾರ ಹೇಳ್ತಿದೆ. ಕೋಟಿ ಬಂದರೂ ಕೊಡನೀರೂ ಬರಲಿಲ್ಲ.

- ಮಹದೇವ.ಎ ಪೀಣ್ಯ ನಿವಾಸಿ

ಹೃದಯ-ಸಂಬಂಧಿ ರೋಗಗಳೂ ಸೇರಿದಂತೆ 20ಕ್ಕೂ ಹೆಚ್ಚು ತರಹದ ಅಪಾಯಕಾರಿ ರೋಗಗಳನ್ನು ಅದು ಉಂಟು ಮಾಡುತ್ತದೆ. ಅತೀವವಾಗಿ ಸಿಗರೇಟ್ ಸೇವನೆ ಮಾಡುವವರು ತಕ್ಷಣವೇ ಸೇವನೆಯನ್ನು ಬಿಡಲು ಸಹ ಆಗದಿರುವುದಕ್ಕೆ ತಂಬಾಕಿನಲ್ಲಿರುವ ನಿಕೋಟಿನ್ ಎಂಬ ವಸ್ತುವು ರಕ್ತದಲ್ಲಿ ಬೆರೆತು ಹೋಗಿರುವುದು ಒಂದು ಕಾರಣ. ತಕ್ಷಣವೇ ಸೇವನೆ ಬಿಟ್ಟಲ್ಲಿ ಮಾನಸಿಕ ಕ್ಷೋಭೆಗೀಡಾಗುವುದು', ಹೃದಯಬಡಿತ ನಿಧಾನಗೊಳ್ಳುವುದು, ಚಿಂತೆಗೀಡಾಗುವುದು, ನಿಕೋಟಿನ್‌ಗಾಗಿ ಹಂಬಲಿಸುವುದು ಇವೆಲ್ಲ ನಡವಳಿಕೆಗಳನ್ನು ಅಂಥವರಲ್ಲಿ ಕಾಣಬಹುದು. ನಿಕೋಟಿನ್‌ಗೆ ದೇಹದ ನರವ್ಯವಸ್ಥೆಯ ಮೇಲೆ ತೀವ್ರ ಪರಿಣಾಮ ಬೀರುವ ಶಕ್ತಿಯಿದೆ.

ತಂಬಾಕು ಉದ್ಯಮದ ಲಾಬಿ:

ತಂಬಾಕು ಉದ್ಯಮವು ತನ್ನ ಲಾಭದಾಸೆಗಾಗಿ ಜನರನ್ನು ಬಲಿಕೊಡುತ್ತಿದೆಯೆಂದು ವಿರೋಧಿಗಳು ಗಂಭೀರ ಆರೋಪ ಮಾಡುತ್ತಿದ್ದಾರೆ. ಈ ಉದ್ಯಮವು ದೇಶದ ಉತ್ಪಾದಕ ಶಕ್ತಿಯಾದ 15-25 ವಯೋಮಾನದ ತರುಣರನ್ನು ಈ ಚಟಕ್ಕೆ ದಾಸರನ್ನಾಗಿಸುತ್ತಿದೆ ಎನ್ನಲಾಗುತ್ತಿದೆ. ಅಮೇರಿಕಾದಲ್ಲಿ 1995ರಲ್ಲೇ ಸುಮಾರು 32 ಮಿಲಿಯನ್ ಡಾಲರ್‌ನಷ್ಟು ನಿಧಿಯನ್ನು ಚುನಾವಣೆಯಲ್ಲಿ ತನ್ನ ಪರ ಅಭ್ಯರ್ಥಿಗಳಿಗೆ ತಂಬಾಕು-ಪರ ನೀತಿ ರೂಪಿಸಲು ತಂಬಾಕು ಕಂಪನಿಗಳು ವ್ಯಯ ಮಾಡಿವೆಯೆಂದು ಹೇಳಲಾಗುತ್ತದೆ.

ತಂಬಾಕು ಉದ್ಯಮದಲ್ಲಿ ಉದ್ಯೋಗ ಸ್ಥಿತಿಗತಿ:

ವಿಶ್ವದಾದ್ಯಂತ ಅಂದಾಜು 10 ಕೋಟಿ ಜನ ತಂಬಾಕು ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದರೆ, ಅವರಲ್ಲಿ ಸುಮಾರು 12ಲಕ್ಷ ಜನ ತಂಬಾಕು ಉತ್ಪಾದನಾ ಕ್ಷೇತ್ರದಲ್ಲೂ, 4ಕೋಟಿ ಜನರು ತಂಬಾಕು ಬೇಸಾಯ ಮತ್ತು ಎಲೆ ಸಂಸ್ಕರಣೆಯಲ್ಲೂ ಹಾಗೂ ಭಾರತ ಮತ್ತು ಇಂಡೋನೇಷ್ಯಾಗಳಲ್ಲಿ 2ಕೋಟಿ ಜನರು ಮನೆಯಲ್ಲೇ ಕುಳಿತು ಬೀಡಿ ಮತ್ತು ಸಿಗರೇಟ್ ಸುತ್ತುವ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಧಾನ ನಿರ್ದೇಶಕರು ಹೇಳುವಂತೆ ? ತಂಬಾಕು ಕ್ಷೇತ್ರದಲ್ಲಿ ತೊಡಗಿರುವ ಕಾರ್ಮಿಕರಲ್ಲಿ ಬಹುತೇಕರು ಅತ್ಯಂತ ಕೆಳವರ್ಗದವರಾಗಿದ್ದು (ಅವರಲ್ಲಿ ಅಮೇರಿಕಾದಲ್ಲಿರುವ ವಲಸೆಗಾರರು, ಭಾರತದಲ್ಲಿರುವ ಮಹಿಳೆಯರು, ಮುಸ್ಲಿಂ ಅಲ್ಪಸಂಖ್ಯಾತ ಜನರು, ಪರಿಶಿಷ್ಟ/ಬಡಕಟ್ಟು ಜನರು, ಇಂಡೋನೇಷ್ಯಾದ ಮಹಿಳೆಯರು, ಆಫ್ರಿಕಾ, ಏಷ್ಯಾ ಮತ್ತು ಲ್ಯಾಟಿನ್ ಅಮೇರಿಕಾದ ಬಾಲಕಾರ್ಮಿಕರು, ಬ್ರೆಜಿಲ್‌ನಲ್ಲಿ ಸಾಲದಕೂಪಕ್ಕೆ ಸಿಲುಕಿರುವ ಬಡಕಾರ್ಮಿಕರು) ಅವರಿಗೆ ಕುಸಿಯುತ್ತಿರುವ ಉದ್ಯೋಗವಕಾಶಗಳು ಬಹಳ ಆತಂಕಕಾರಿಯಾದ ವಿಷಯವಾಗಿದೆ. ಆಧುನಿಕ ತಂತ್ರಜ್ಞಾನ ಬಳಕೆಯ ಪರಿಣಾಮದಿಂದಾಗಿ ತಂಬಾಕು ಕ್ಷೇತ್ರದಲ್ಲಿ ಉದ್ಯೋಗವಕಾಶಗಳು ಕಡಿಮೆಯಾಗುತ್ತಿವೆ. ಉದಾಹರಣೆಗೆ ಇಂಗ್ಲೆಂಡ್‌ನಲ್ಲಿ, 1998ರಲ್ಲಿ 1990ಕ್ಕಿಂತಲೂ ಶೇ. 3ರಷ್ಟು ಹೆಚ್ಚಿನ ಪ್ರಮಾಣದಲ್ಲಿ ತಂಬಾಕನ್ನು ಉತ್ಪಾದಿಸಿದರೂ ಶೇ. 75ರಷ್ಟು ಕಾರ್ಮಿಕರನ್ನು ಕಡಿತಗೊಳಿಸಲಾಗಿತ್ತು. ಈ ಮುಂಚೆ ನಿಮಿಷವೊಂದಕ್ಕೆ 4 ಸಿಗರೇಟ್‌ಗಳನ್ನು ಸುತ್ತುತ್ತಿದ್ದರೆ, 2000 ವರ್ಷದ ವೇಳೆಗೆ ಯಂತ್ರವೊಂದು ನಿಮಿಷವೊಂದಕ್ಕೆ 16,000 ಸಿಗರೇಟ್‌ಗಳನ್ನು ತಯಾರಿಸುತ್ತಿತ್ತು. ಇದರೊಂದಿಗೆ ಖಾಸಗೀಕರಣ, ದೊಡ್ಡ ಕಂಪನಿಗಳೊಂದಿಗೆ ಸಣ್ಣ ಕಂಪನಿಗಳ ವಿಲೀನ ಪ್ರಕ್ರಿಯೆ, ಹಲವು ಕಂಪನಿಗಳನ್ನು ಮುಚ್ಚಿಹಾಕಿರುವುದು, ಇತ್ಯಾದಿಗಳು ಉದ್ಯೋಗನಾಶಕ್ಕೆ ಕಾರಣವಾಗಿವೆ. ಉತ್ಪಾದನಾ ಕ್ಷೇತ್ರದ ಕಾರ್ಮಿಕರಿಗೆ ಪರವಾಗಿಲ್ಲವೆಂಬ ಸಂಬಳ ಸಿಕ್ಕರೂ ತಂಬಾಕು ಬೆಳೆಗಾರರು ಮತ್ತು ತಂಬಾಕು-ಗೃಹೋದ್ಯಮದಲ್ಲಿ ತೊಡಗಿರುವ ಕಾರ್ಮಿಕರಿಗೆ ಏನೇನೂ ಗೀಟುವುದಿಲ್ಲ.

ತಂಬಾಕು ಸೇವನೆಯಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮ ಮತ್ತು ಆ ಕ್ಷೇತ್ರದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಉತ್ತಮ ಗುಣಮಟ್ಟದ ಉದ್ಯೋಗ ಖಾತರಿ ಹಾಗೂ ಕೆಲಸ ಕಳೆದುಕೊಳ್ಳುವವರಿಗೆ ಪರ್ಯಾಯ ಉದ್ಯೋಗ - ಇವುಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಅತ್ಯಂತ ಜರೂರಾಗಿದೆ.

- ಕ್ಯಾನ್ಸರ್ ರೋಗಿ



ಪತ್ರಿಕೆ ಬಿಡುಗೆ ಮಾಡಿದ 'ಜನಶಕ್ತಿ'ಯೊಂದಿಗೆ ಕಾರ್ಯಕ್ರಮದ ಅತಿಥಿಗಳು. ಮೇ 27, 2007 ರಂದು ಜನಶಕ್ತಿ ಪತ್ರಿಕೆ ಬಿಡುಗಡೆಯಾಯಿತು.

ಸಂಭ್ರಮದ ಜನಶಕ್ತಿ ಬಿಡುಗಡೆ


ಆ ಭಾನುವಾರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಎದುರಿನ ಎ.ಡಿ.ಎ. ರಂಗಮಂದಿರದಲ್ಲಿ ಸಂಭಮವೋ ಸಂಭ್ರಮ. ಸಂಗಾತಿಗಳ ಸಡಗರ. ರಂಗಮಂದಿರದ ಮುಂದೆ ಬಣ್ಣ ಬಣ್ಣದ ತೋರಣ. ಭಾನುವಾರವಾದರೂ ಸಭಾಂಗಣ ಬೇಗನೇ ಪೂರಣ.

ಜನಶಕ್ತಿ ಕನ್ನಡ ವಾರಪತ್ರಿಕೆ ಬಿಡುಗಡೆಗೊಂಡಿತು. 'ಜನಶಕ್ತಿ' ಹೆಸರಿಗೆ ತಕ್ಕಂತೆಯೇ ಬಿಡುಗಡೆ ಸಮಾರಂಭ. ಶೋಷಿತ, ನೊಂದ, ಅನ್ಯಾಯಕ್ಕೆ ಗುರಿಯಾದ ವಿವಿಧ ಸಮುದಾಯಗಳ ಪ್ರತಿನಿಧಿಗಳು ಏಕಕಾಲಕ್ಕೆ ಪತ್ರಿಕೆ ಬಿಡುಗಡೆ ಮಾಡಿದರು.

ಕೆಲಸದ ವೇಳೆ ಕೈ ಬೆರಳುಗಳನ್ನು ಕಳೆದುಕೊಂಡರೂ ಮಾಲೀಕರಿಂದ ಹೊರದೂಡಲ್ಪಟ್ಟ ಬೆಂಗಳೂರಿನ ಮೆಟಲ್ ಕ್ಲೋಷರ್ಸ್ ಕಾರ್ಖಾನೆ ಕಾರ್ಮಿಕ ಹುಚ್ಚಣ್ಣ. ಸಾಲದಭಾದೆ ತಾಳದೇ ಆತ್ಮಹತ್ಯೆಗೀಡಾದ ಹೊಸಕೋಟೆ ತಾಲ್ಲೂಕು ಗೊಟ್ಟಿಪುರದ ರೈತ ಅರ್ಚಕರಾಮಯ್ಯ ಅವರ ಪತ್ನಿ ಶಾರದಮ್ಮ ಕಂಬಾಲಪಲ್ಲಿಯಲ್ಲಿ ಸಜೀವ ದಹನಕ್ಕೊಳಗಾದ ದಲಿತ ಕುಟುಂಬದ ಹಿರಿಯ ಗಂಗುಲಪ್ಪ, ಶೋಷಿತ ಬೀಡಿ ಕಾರ್ಮಿಕರನ್ನು ಸಂಘಟಿಸಿ ಹೋರಾಡುತ್ತಿರುವ ತುಮಕೂರಿನ ಅಲ್ಪಸಂಖ್ಯಾತ ಸಮುದಾಯದ ಮಹಿಳೆ ರಹೀಮಾತಾಜ್, ಅನಿಷ್ಟ ದೇವದಾಸಿ ಪದ್ಧತಿಗೆ ಬಾಲ್ಯದಲ್ಲಿಯೇ ಗುರಿಯಾದರೂ ದೇವದಾಸಿ ಪದ್ಧತಿಯ ವಿರುದ್ಧ ಹೋರಾಡುತ್ತಾ ಅವರನ್ನು ಸಂಘಟಿಸುತ್ತಿರುವ ಬಾಗಲಕೋಟೆಯ ಮುಧೋಳದ ಸಾವಿತ್ರಿಬಾಯಿ.... ಇವರೆಲ್ಲ ಪತ್ರಿಕೆ ಬಿಡುಗಡೆ ಮಾಡಿದರೆ ತನಗೆ ಈಗಾಗಲೇ ಮದುವೆಯಾಗಿದ್ದರೂ ತನ್ನನ್ನು ಮದುವೆಯಾಗಬೇಕೆಂದು ಒತ್ತಾಯಿಸಿದ ಪುರುಷನೊಬ್ಬನಿಂದ ಆ್ಯಸಿಡ್ ದಾಳಿಗೆ ಗುರಿಯಾದ ಬೆಂಗಳೂರಿನ ಯುವತಿ ಎನ್.ಸವಿತ ಸಮಾರಂಭಕ್ಕೆ ಸಾಕ್ಷಿಯಾದರು.

ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ. ಸೀತಾರಾಂ ಯೆಚೂರಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಯು.ಆರ್. ಅನಂತಮೂರ್ತಿ, ಉದಯವಾಣಿ ಪತ್ರಿಕೆಯ ಸಂಪಾದಕಿ ಡಾ: ಆರ್.ಪೂರ್ಣಿಮಾ, ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳು. ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್, ಪ್ರಕಾಶಕರು, ಸಮಾರಂಭದ ಅಧ್ಯಕ್ಷರಾದ ಜಿ.ಎನ್.ನಾಗರಾಜ್, ಸಂಪಾದಕ ಮಂಡಳಿಯ ಸದಸ್ಯರಾದ ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ನಿತ್ಯಾನಂದಸ್ವಾಮಿ, ಜಿ.ಸಿ.ಬಯ್ಯಾರೆಡ್ಡಿ, ಮಾರುತಿ ಮಾನ್ಪಡೆ, ಪತ್ರಿಕೆಗಳನ್ನು ಸ್ವೀಕರಿಸಿದರು.


ಅಭಿನಂದನೆ: ಅವರಿಗೆ 94 ವರ್ಷ ವಯಸ್ಸು, ಸ್ವಾತಂತ್ರ್ಯ ಹೋರಾಟಗಾರರು. ಪತ್ರಿಕೆಯೊಡನೆ ಅವರಿಗೆ ಅದೇನೋ ನಂಟು. ದೊಡ್ಡಬಳ್ಳಾಪುರದಲ್ಲಿ ಈ ವಯಸ್ಸಿನಲ್ಲೂ ಅವರು ಪತ್ರಿಕೆ ಹಂಚಲು ಮನೆ ಮನೆಗೆ ಹೋಗುತ್ತಾರೆ ಎಂದರೆ ಹಲವರಿಗೆ ಅಚ್ಚರಿ. ಹೌದು ಈ ಹಿರಿಯ ಸಂಗಾತಿಯ ಹೆಸರು ಕಾಂ:ಮುಗುವಾಳಪ್ಪ, ಹಣದ ವಿಷಯವೂ ಅಷ್ಟೇ ಅಚ್ಚುಕಟ್ಟು. ತಪ್ಪದೆ ಹಣ ಕಛೇರಿಗೆ ತಲುಪುತ್ತದೆ. ಇತ್ತ ಕೊಡಗಿನ ಸಿದ್ದಾಪುರದಲ್ಲಿ 8 ವಯಸ್ಸಿನ ಪೋರ, 10 ವಯಸ್ಸಿನ ಪೋರಿ, ಚೈತನ್ಯ ಚೇತನ ಅವರೂ ಪತ್ರಿಕೆ ಮಾರುತ್ತಾರೆ. ಭರತ್‌ಗೆ ಈ ರೀತಿ ಮಕ್ಕಳ ಬೆಂಬಲ. ಈ ಮೂವರಿಗೆ ಸಮಾರಂಭದಲ್ಲಿ ಸಂಗಾತಿ ಅಭಿನಂದನೆ ಪುಸ್ತಕಗಳ ಕೊಡುಗೆ.



"ಮಾಧ್ಯಮಗಳು ಜನರಿಂದ ದಿನೇ ದಿನೇ ದೂರವಾಗುತ್ತಿವೆ. 1996ರಲ್ಲಿ ಅಮೇರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್ ಭಾರತಕ್ಕೆ ಭೇಟಿ ಕೊಡುವ ಸಂದರ್ಭದಲ್ಲಿ ಕ್ಲಿಂಟನ್ ಜೊತೆ ಬರುವ ನಾಯಿ, ಆತ ಉಳಿಯುವ ಹೋಟೇಲ್, ಆತ ತಿನ್ನುವ ಆಹಾರ.. ಇಂತಹ ವಿಷಯಗಳ ಬಗೆಗೆ ಮುಖಪುಟಗಳಲ್ಲಿ ಪ್ರಕಟವಾಗುತ್ತಿತ್ತು. ಆದರೆ ಅದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ದಲಿತರ ಸಜೀವ ದಹನ, ದೇಶಾದ್ಯಂತ ರೈತರ ಆತ್ಮಹತ್ಯೆಗಳು ಸಂಭವಿಸುತ್ತಿದ್ದವು. ಈ ವಿಷಯಗಳು ಒಳಗಿನ ಪುಟಗಳಲ್ಲೆಲ್ಲೋ ಪ್ರಕಟವಾಗುತ್ತಿದ್ದವು.

ಕೇಂದ್ರ ಸರ್ಕಾರಕ್ಕೆ ಎಡಪಕ್ಷಗಳು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಬೆಂಬಲ ನೀಡುತ್ತಿವೆ. ಉದ್ಯೋಗ ಖಾತ್ರಿ ಯೋಜನೆ ಜಾರಿ, 10 ಕೋಟಿ ಅರಣ್ಯ ವಾಸಿಗಳಿಗೆ ಅದೂ ಭೂಮಿಯ ಹಕ್ಕು ನೀಡುವ ಕಾಯ್ದೆ, ದೇಶದಲ್ಲಿ ಖಾಸಗೀಕರಣದ ಪ್ರಕ್ರಿಯೆಯನ್ನು ಆರಂಭಿಸಿದ ಡಾ: ಮನಮೋಹನ್‌ಸಿಂಗ್‌ರೇ ಇಂದು ಲಾಭದಾಯಕ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮಾಡುವುದಿಲ್ಲ ಎಂದು ಹೇಳುವಂತಾಗಿರುವುದು... ಇವು ಎಡಪಕ್ಷಗಳ ಒತ್ತಡದಿಂದಾಗಿ ಹೊರತು, ಕಾಂಗ್ರೆಸ್ ಪಕ್ಷಕ್ಕೇನು ಮನಃ ಪರಿವರ್ತನೆ ಆಗಿಲ್ಲ. ಅದು ಜಾಗತೀಕರಣದ ಜಾಡಿನಲ್ಲಿಯೇ ಹೋಗಲು ಯತ್ನಿಸುತ್ತಿದೆ"

- ಸೀತಾರಾಂ ಯೆಚೂರಿ



ಭ್ರಮಾಲೋಕ ಒಡೆದು ಬರಲಿ

ಒಂದೊಮ್ಮೆ ಜನರ ಹಿತಾಸಕ್ತಿಗಳು, ಪತ್ರಿಕೋದ್ಯಮವು ಐಕ್ಯಸ್ಥಿತಿ, ಐಕ್ಯಸ್ಥಳ ಎಂಬಂತಿದದ್ದುದು ನಂತರ ಒಡೆದು, ಬಿಸಿನೆಸ್ ಆಗಿ ಬೆಳೆದು 20 ಪುಟ ಇದ್ದು ಅದರಲ್ಲಿ ಎಲ್ಲವನ್ನು ಮಾರಾಟ ಮಾಡುವ ಜಾಗವಾಗಿದೆ. ಪತ್ರಿಕೆಗಳಲ್ಲಿ ನೀಡುವುದನ್ನು ಜನ ಸತ್ಯ ಎಂದು ನಂಬುತ್ತಾರೆ. ಆದರೆ ಅದರಲ್ಲಿ ಎಷ್ಟೊಂದು ಸುಳ್ಳುಗಳಿರುತ್ತವೆ. ಎಷ್ಟೊಂದು ಹತ್ಯೆಗಳನ್ನು ತಿರುಚಿಕೊಡಲಾಗುತ್ತದೆ. ಜಾಹಿರಾತು ಕೊಡುವ ಶ್ರೀಮಂತರು-ಎಂಎನ್‌ಸಿ ಕಂಪನಿಗಳ ಮುಖವಾಣಿಯಾಗಿವೆ. 'ಜನಶಕ್ತಿ'ಯು ಜನತೆ ಭ್ರಮಾಲೋಕವನ್ನು ಒಡೆದು ಹೊರಬರಲು ಸಹಾಯ ಮಾಡಬೇಕು.

- ಜಿ.ಎನ್. ನಾಗರಾಜ್, ಪ್ರಕಾಶಕರು, ಸಮಾರಂಭದ ಅಧ್ಯಕ್ಷರು


"ನಾನು ಸಾಹಿತಿ ನಿರಂಜನರಿಂದ ತುಂಬಾ, ಪ್ರಭಾವಕ್ಕೆ ಒಳಗಾಗಿದ್ದೇನೆ. ಪತ್ರಿಕೆಗೆ 'ಜನಶಕ್ತಿ' ಎಂಬುದು ಒಂದು ಅದ್ಭುತವಾದ ಹೆಸರು.

ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಇದ್ದರೆ ಅವರಿಗೆ ಮತ ನೀಡುತ್ತೇನೆ. ಅವರಿಲ್ಲವಾದರೆ ಕಾಂಗ್ರೆಸ್ ಪಕ್ಷಕ್ಕೆ, ಜನತಾದಳಕ್ಕಂತು ಖಂಡಿತಾ ಅಲ್ಲ. ರಾಮಕೃಷ್ಣ ಹೆಗಡೆಯವರು ಇದ್ದಂತಹ ಸಂದರ್ಭದಲ್ಲಿ ಜನತಾದಳದ ಬಗ್ಗೆ ನಮಗೆ ಬಹಳ ಭ್ರಮೆಗಳಿದ್ದವು. ಕಮ್ಯುನಿಸ್ಟರು ಹೊರಗಿನಿಂದ ನಿಯಂತ್ರಿಸುತ್ತಿರುವುದರಿಂದ ಕೇಂದ್ರ ಯುಪಿಎ ಸರ್ಕಾರ ಕೆಲವಾದರೂ ಒಳ್ಳೆಯ ಕೆಲಸ ಮಾಡುತ್ತಿದೆ. ಕೋಮುವಾದಿಗಳು ಸೋತು ಚುನಾವಣೆಯಲ್ಲಿ ಕಮ್ಯುನಿಸ್ಟರ ಬಲ ಹೆಚ್ಚಿತು. ಕಮ್ಯುನಿಸ್ಟ್‌ರು ಕೇವಲ ಕೋಮುವಾದವನ್ನು ಮಾತ್ರ ವಿರೋಧಿಸುತ್ತಿಲ್ಲ, ಖಾಸಗೀಕರಣವನ್ನು ವಿರೋಧಿಸುತ್ತಿದ್ದಾರೆಂಬುದನ್ನು ಗಮನಿಸಬೇಕು.

ಜನಶಕ್ತಿಯು ರಾಜಕೀಯ, ಸಾಂಸ್ಕೃತಿಕ ವಿಷಯಗಳಲ್ಲಿ ಉತ್ತಮ ಕೆಲಸ ಮಾಡಲಿ. ದುಡ್ಡಿಲ್ಲದೇ ಚುನಾವಣೆ ಎದುರಿಸುತ್ತಿರುವವರು ಕಮ್ಯುನಿಸ್ಟರು ಮಾತ್ರ. ಕಮ್ಯುನಿಸ್ಟರಲ್ಲಿ ಭ್ರಷ್ಟಾಚಾರ ಇಲ್ಲ. ಬಿಜೆಪಿ, ಸಂಘ ಪರಿವಾರದವರು ಧರ್ಮದ ಬಗೆಗೆ ಮಾತನಾಡುತ್ತಾರೆ. ಆದರೆ ಅವರು ತುಂಬಾ ಇಮ್‌ಮೋರಲ್ (ಅನೈತಿಕ) ಆಗಿದ್ದಾರೆ. ಆದರೆ ಕಮ್ಯುನಿಸ್ಟರು ಧರ್ಮದ ಬಗೆಗೆ ಮಾತನಾಡದಿದ್ದರೂ ನೈತಿಕತೆ ಉಳಿಸಿಕೊಂಡಿದ್ದಾರೆ.

ಜನ ಸಾಮಾನ್ಯರಿಂದ, ದುಡಿಯುವ ಜನರಿಂದ ಪತ್ರಿಕೆ ಬಿಡುಗಡೆಯಾಗಿದೆ. ಈ ಸಾಂಕೇತಿಕತೆ ನಿಜವಾಗಲಿ.

- ಡಾ. ಯು.ಆರ್.ಅನಂತಮೂರ್ತಿ



ಮಾಧ್ಯಮವೊಂದು ಉದ್ದಿಮೆಯಾಗಿರುವಾಗ

"ಜನಶಕ್ತಿಗೆ 60 ವರ್ಷಗಳ ದೊಡ್ಡ ಪರಂಪರೆ ಇದೆ. ನಿರಂಜನರ ಹೆಸರಿನ ಕುಳಕುಂದ ಶಿವರಾಯ ಪತ್ರಿಕೋದ್ಯಮದ ಮೂಸೆಯಲ್ಲಿ ಬೆಂದು ದೊಡ್ಡ ಸಾಹಿತಿಯಾಗಿ ಬೆಳೆದರು.

ನಾನು ಪತ್ರಿಕೋದ್ಯಮದ ಅಕ್ಷರಾಭ್ಯಾಸ ಆರಂಭಿಸಿದ್ದೆ 'ಐಕ್ಯರಂಗ' ಪತ್ರಿಕೆಯ ಮೂಲಕ, ಬೇರೆ ಬೇರೆ ಜಿಲ್ಲೆಗಳಿಂದ ಬರುತ್ತಿದ್ದ ವರದಿಗಳನ್ನು ಎಡಿಟ್ ಮಾಡುತ್ತಲೇ ನಾನು ಪತ್ರಿಕೋದ್ಯಮದ ಪಾಠಗಳನ್ನು ಕಲಿತೆ. ನಾನು ಅದನ್ನೆಂದು ಮರೆಯಲು ಸಾಧ್ಯವಿಲ್ಲ. ಹೆಮ್ಮೆಯಿಂದ ಕೃತಜ್ಞತೆಯಿಂದ ನಾನು ಅದನ್ನು ನೆನೆಯುತ್ತೇನೆ. ಪತ್ರಿಕೋದ್ಯಮವು ಸ್ವಾತಂತ್ರ್ಯ ಚಳುವಳಿಯ ಪರಮ ಆದರ್ಶಗಳ ಜೊತೆಗೆ ಇತ್ತು. ತುಳಿತಕ್ಕೊಳಗಾದವರ ದನಿಯಾಗಿತ್ತು. ಬಾಲ್ಯ ವಿವಾಹಕ್ಕೆ, ಸತಿಗೆ ವಿರೋಧ, ವಿಧವಾ ವಿವಾಹ, ದಲಿತ ವಿಮೋಚನೆ ಆದ್ಯತೆಗಳಾಗಿದ್ದವು.

1990ರ ನಂತರ ಪತ್ರಿಕೋದ್ಯಮವನ್ನು ಬೇರೆ ಬೇರೆ ಶಕ್ತಿಗಳು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿವೆ. ಪತ್ರಿಕೋದ್ಯಮ 'ನ್ಯೂಸ್ ಬಿಸಿನೆಸ್' ಆಗಿದೆ. ಇವತ್ತು ಪತ್ರಿಕೆಯ ಆದ್ಯತೆಗಳನ್ನು ನಿರ್ಧರಿಸುವವರು ಪತ್ರಿಕೆಯನ್ನು ನಿಯಂತ್ರಿಸುವವರು ಆ ಪತ್ರಿಕೆಯ ಸಂಪಾದಕ ಮಂಡಳಿ ಅಲ್ಲ. ಆಡಳಿತ ವರ್ಗವೂ ಅಲ್ಲ, ಮಾಲಿಕರಲ್ಲ. ಓದುಗರಂತೂ ಅಲ್ಲವೇ ಅಲ್ಲ. ಮಾರ್ಕೆಟಿಂಗ್ ವಿಭಾಗ ಪತ್ರಿಕೆಯನ್ನು ನಿಯಂತ್ರಿಸುತ್ತಿದೆ. ಪತ್ರಿಕಾ ಮಾಧ್ಯಮ ಒಂದು ಉದ್ದಿಮೆಯಾಗಿದೆ. ಅಂಕಣಗಳು 'ಮಾರ್ಕೆಟೇಬಲ್ ಸ್ಪೇಸ್ - ಮಾರಾಟ ಮಾಡಬಲ್ಲ ಜಾಗ'ಗಳಾಗಿವೆ. ಮಾರುಕಟ್ಟೆ ಶಕ್ತಿಗಳು ನಿಯಂತ್ರಣ ಸಾಧಿಸಲು ಪಣತೊಟ್ಟಿರುವಾಗ ತಲ್ಲಣ, ಗೊಂದಲಗಳ ನಡುವೆ ಕೆಲಸ ಮಾಡುವಂತಾಗಿದೆ.



ಮಾಧ್ಯಮಗಳ ಮೇಲೆ ಕೋಮುವಾದಿ ಶಕ್ತಿಗಳು ಹಿಡಿತ ಸಾಧಿಸಲು ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಿವೆ. ಕೇಸರೀಕರಣಕ್ಕೆ ಪ್ರಯತ್ನ ಮಾಡುತ್ತಿವೆ. ಅಂತರ್ ಜಾತೀಯ ಮದುವೆ ಬಗೆಗೆ ಪ್ರಕಟಿಸಿದ ಪತ್ರಿಕೆ ಚಾನೆಲ್ ಮೇಲೆ ದಾಳಿ ನಡೆಯುತ್ತಿವೆ. ಜನಶಕ್ತಿಯಂತಹ ಪತ್ರಿಕೆಗಳು ಮೈನ್ ಸ್ಟ್ರೀಮ್ ಪತ್ರಿಕೆಗಳಿಗೆ ಸುಳಿವು, ಸ್ಪಷ್ಟನೆ ಕೊಡಲು ಸಾಧ್ಯ. ಸಂಕೋಚ ಪಡುವುದು ಬೇಡ.

- ಆರ್.ಪೂರ್ಣಿಮಾ

ಜಾಗತೀಕರಣ, ಉದಾರೀಕರಣದ ನೀತಿಗಳಿಂದ ಕಂಗೆಟ್ಟಿದ್ದ ಕೇರಳದ ಜನತೆ ನಿರೀಕ್ಷೆಯಂತೆ ಒಂದು ವರ್ಷದ ಎಲ್‌ಡಿಎಫ್ ಸರ್ಕಾರ ಭಿನ್ನಮಾರ್ಗದಲ್ಲಿ ಹೊರಟಿದೆ

ಕೇರಳದ ಎಲ್‌ಡಿಎಫ್ ಸರ್ಕಾರದ ಒಂದು ವರ್ಷದ ಸಾಧನೆ

ಅಭಿವೃದ್ಧಿಯ ಪರ್ಯಾಯ ಹಾದಿ

ವರ್ಗರಾಜಕೀಯದ ಕೈಮೇಲಾದರೆ ಜನಪರ ಅಭಿವೃದ್ಧಿ ಸಾಧ್ಯ ಎನ್ನುವುದಕ್ಕೆ ಉದಾಹರಣೆ ಎನ್ನುತ್ತಾರೆ ಆರ್ಥಿಕ ತಜ್ಞರು

ಅಭಿವೃದ್ಧಿಯು ರಾಜಕೀಯವನ್ನು ಮೀರಿ ನಿಲ್ಲಬೇಕು ಎಂಬುದು ಈಗ ಎಲ್ಲೆಲ್ಲೂ ಕೇಳಬರುತ್ತಿರುವ ರಾಗ. ಅಂದರೆ ಯಾವುದೇ ಸರಕಾರ ಬರಲಿ, ಆಳುವ ಪಕ್ಷದ ಸಿದ್ಧಾಂತ ಏನೇ ಇರಲಿ, ಅದು ಅನುಸರಿಸಬೇಕಾದ ಆರ್ಥಿಕ ನೀತಿ ಮಾತ್ರ ಒಂದೇ, ಅದು ಭಿನ್ನವಾಗಿರಲು ಸಾಧ್ಯವಿಲ್ಲ ಎಂಬುದೇ ಇದರ ಅರ್ಥ. ಯಾವುದು ಆ ಆರ್ಥಿಕ ನೀತಿ? ಅವರ ಪ್ರಕಾರ ಈಗ ಎಲ್ಲೆಲ್ಲೂ ರಾರಾಜಿಸುತ್ತಿರುವ ನವ-ಉದಾರೀಕರಣ ನೀತಿಗಳು, ಎಲ್.ಪಿ.ಜಿ ನೀತಿಗಳು!

ಆದರೆ ಹೀಗಾಗಬೇಕಿಲ್ಲ ಎನ್ನುತ್ತಾರೆ ಪ್ರಖ್ಯಾತ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ


(ಎಲ್‌ಡಿಎಫ್) ಸರಕಾರದ ಕಳೆದ ಒಂದು ವರ್ಷದ ಸಾಧನೆಗಳು ಇದಕ್ಕೆ ಉದಾಹರಣೆ ಎನ್ನುತ್ತಾರೆ ಅವರು. ಅವರ ಪ್ರಕಾರ ಎಲ್‌ಡಿಎಫ್ ಸರಕಾರ ಹಿಂದಿನ ಯುಡಿಎಫ್ ಸರಕಾರದ, ಅಷ್ಟೇ ಅಲ್ಲ, ಇತರ ಹೆಚ್ಚಿನ ರಾಜ್ಯ ಸರಕಾರಗಳ ಜಾಡಿನಲ್ಲಿ ಸಾಗದೆ, ಒಂದು ಸಂಪೂರ್ಣ ಭಿನ್ನವಾದ ದಾರಿಯಲ್ಲಿ ಸಾಗಿದೆ, ಯಶಸ್ವಿಯೂ ಆಗಿದೆ.

ಎಲ್‌ಡಿಎಫ್ ಸರಕಾರದ ಮೂರು ನಿಲುವುಗಳು ಒಂದು ಪರ್ಯಾಯ ದಾರಿಯನ್ನು ತೋರಿಸಿವೆ ಎಂದು ಅವರು ವಿವರಿಸುತ್ತಾರೆ.

ಮೊದಲನೆಯದಾಗಿ, 'ರೈತರ ಉತ್ಪಾದನೆ'ಯನ್ನು ರಕ್ಷಿಸಲು, ಕಾಪಾಡಲು ಮತ್ತು ಪೋಷಿಸಲು ಕೃಷಿಕ ಸಾಲ ಪರಿಹಾರ ಆಯೋಗದ ನೇಮಕ ಹಾಗೂ ಭತ್ತಕ್ಕೆ ಕನಿಷ್ಟ ಬೆಲೆ ನಿಗದಿ. ಎರಡನೆಯದಾಗಿ, ಖಾಸಗಿ ವಲಯ ಸರಕಾರದ ಶರತ್ತುಗಳಿಗೆ ಅನುಗುಣವಾಗಿ ವರ್ತಿಸುವಂತೆ ಮಾಡಿ ರಾಜ್ಯ ಸರಕಾರದ ಸ್ವಾಯತ್ತತೆಯನ್ನು ಕಾದುಕೊಂಡ ಕ್ರಮ. ಹಾಗೂ ಮೂರನೆಯದಾಗಿ, ಸಂಪನ್ಮೂಲ ಶೇಖರಣೆ ಮತ್ತು ಅಭಿವೃದ್ಧಿ ಖರ್ಚುಗಳನ್ನು ಇಳಿಸಿದ ಹಿಂದಿನ ಯುಡಿಎಫ್ ಸರಕಾರದ ಹಣಕಾಸು ನೀತಿಯನ್ನು ಸಂಪೂರ್ಣವಾಗಿ ಬದಲಿಸಿ ಶಿಕ್ಷಣ, ಆರೋಗ್ಯ ಮುಂತಾದ ಸಾರ್ವಜನಿಕ ಖರ್ಚುಗಳ ಹೆಚ್ಚಳಕ್ಕೆ ಹೆಚ್ಚಿನ ಸಂಪನ್ಮೂಲ ಸಂಗ್ರಹಣೆ.

ಕೃಷಿ ಬಿಕ್ಕಟ್ಟಿನ ಪರಿಹಾರಕ್ಕೆ ಪರ್ಯಾಯ ಮಾರ್ಗ

ಕೃಷಿ ಬಿಕ್ಕಟ್ಟಿಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ನವ-ಉದಾರವಾದಿ ಪರಿಹಾರವೆಂದರೆ ಸಹಕಾರಿ ಮೊದಲಾದ ಸಾಂಸ್ಥಿಕ ಸಾಲಗಳ ಬಡ್ಡಿ ಪಾವತಿಯಲ್ಲಿ ರೈತರಿಗೆ ಸ್ವಲ್ಪ ಪರಿಹಾರ ನೀಡುವ ಪ್ರಕಟಣೆ ಮತ್ತು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವತ್ತಲೇ ಗಮನ. ಅಂದರೆ ಕೃಷಿ ಉತ್ಪಾದನೆಯಲ್ಲಿ ಕಂಪನಿಗಳಿಗೆ ಪಾತ್ರ, ಗುತ್ತಿಗೆ ಕೃಷಿ, ಇದಕ್ಕೆ ಭೂಸುಧಾರಣೆಗಳನ್ನು ತಿರುವುಮುರುವುಗೊಳಿಸುವುದು, ಇನ್ನೊಂದೆಡೆ ಕೃಷಿ ಮಾರುಕಟ್ಟೆಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರವೇಶ. ಈ ಎಲ್ಲಾ ಕ್ರಮಗಳು ಕೃಷಿಯನ್ನು ಅವಲಂಬಿಸಿರುವ ಜನಗಳ ಪರಿಸ್ಥಿತಿಗಳನ್ನು ಸುಧಾರಿಸುವ ಬದಲು ಅವರನ್ನು ಕೃಷಿಯಿಂದ ಹೊರದಬ್ಬುತ್ತದೆ, ಬದಲಿಗೆ ಕೃಷಿಯೇತರ ಉದ್ಯೋಗಗಳನ್ನೂ ಒದಗಿಸಿಲ್ಲ ಎಂಬುದೀಗ ಅನುಭವ ಸಿದ್ಧ ಮಾತು. ಕೇರಳದ ಎಲ್‌ಡಿಎಫ್ ಸರಕಾರ ಮೇಲೆ ಹೇಳಿದ 'ಕಾರ್ಪೊರೇಟ್ ಉತ್ಪಾದನೆ'ಯ ಬದಲು ಉತ್ಪಾದನೆ ಮತ್ತು ಬಳಕೆಯನ್ನು ಬೇರೆ-ಬೇರೆಯಾಗಿ ಕಾಣದ 'ರೈತ ಉತ್ಪಾದನೆ'ಯನ್ನು ರಕ್ಷಿಸುವ ಕ್ರಮಕ್ಕೆ ಮುಂದಾಯಿತು.



ಮೇಲೆ ಹೇಳಿದ ಕೃಷಿಕರ ಸಾಲ ಪರಿಹಾರ ಆಯೋಗ ರೈತರಿಗೆ ಸಾಲ ಪರಿಹಾರ ಒದಗಿಸಲು ಸಾಲ ನೀಡಿದ ಸಂಸ್ಥೆಗಳೊಡನೆ ಮಾತುಕತೆ ನಡೆಸುತ್ತದಷ್ಟೆ ಅಲ್ಲ, ಖಾಸಗೀ ಲೇವಾದೇವಿಗಾರರಿಗೆ ನೀಡಬೇಕಾದ ಸಾಲಗಳಲ್ಲಿಯೂ ಮಧ್ಯಸ್ಥಿಕೆ ವಹಿಸುತ್ತದೆ, ಹಾಗೂ ದಟ್ಟ ದರಿದ್ರರಾಗಿರುವ ರೈತರ ಸಾಲವನ್ನು ಸರಕಾರ ವಹಿಸಿಕೊಳ್ಳುವ ಬಗ್ಗೆಯೂ ಶಿಫಾರಸು ಮಾಡುತ್ತದೆ. ಈ ಆಯೋಗದ ನೇಮಕ ಸ್ವತಂತ್ರ ಭಾರತದಲ್ಲೇ ಮೊದಲು ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್. ಸ್ವಾತಂತ್ರ್ಯದ ಮೊದಲು ಪಂಜಾಬಿನ ಛೋಟೂರಾಂ ಸರಕಾರ ಹಾಗೂ ಬಂಗಾಲದ ಫಜ್ಲುಲ್ ಹಕ್ ಸರಕಾರ ಸಂಕಟಗ್ರಸ್ತ ರೈತರಿಗೆ ಪರಿಹಾರ ಒದಗಿಸಲು ಇಂತಹ ವ್ಯವಸ್ಥೆ ಮಾಡಿತ್ತಂತೆ.

ರೈತರನ್ನು ಕುರಿತಂತೆ ಎಲ್ ಡಿ ಎಫ್ ಸರಕಾರದ ಇನ್ನೊಂದು ಕ್ರಮವೆಂದರೆ ಒಂದು ಕೆ.ಜಿ.ಭತ್ತಕ್ಕೆ ರೂ.8.50 ರ ಗ್ಯಾರಂಟಿ ಬೆಲೆ. ಇದರಿಂದ ರಾಜ್ಯದಲ್ಲಿ ಭತ್ತದ ಉತ್ಪಾದನೆ 30ಶೇ. ಹೆಚ್ಚುವ ನಿರೀಕ್ಷೆಯಿದೆ.

'ಸ್ಮಾರ್ಟ್‌ಸಿಟಿ' ವ್ಯವಹಾರ

ಹಿಂದಿನ ಯುಡಿಎಫ್ ಸರಕಾರ ದುಬೈನ ಟೆಕೊಂ ಎಂಬ ಗುಂಪಿನೊಂದಿಗೆ ಕೇರಳದಲ್ಲಿ ಒಂದು ತಂತ್ರಜ್ಞಾನ ಪ್ರದೇಶ 'ಸ್ಮಾರ್ಟ್‌ಸಿಟಿ' ನಿರ್ಮಾಣದ ಬಗ್ಗೆ ಒಪ್ಪಂದ ಮಾಡಿಕೊಂಡಿತ್ತು. ಇದರಲ್ಲಿ ರಾಜ್ಯದ ಜನತೆಯ ಹಿತಾಸಕ್ತಿಗಳಿಗೆ ವಿರುದ್ಧವಾದ ಅಂಶಗಳಿದ್ದವು ಎಂದು ಬಹಳಷ್ಟು ಪ್ರತಿಭಟನೆಗಳು ಬಂದಿದ್ದವು. ಎಲ್‌ಡಿಎಫ್ ಸರಕಾರ ಈ ವ್ಯವಹಾರದ ಮರು ಮಾತುಕತೆ ನಡೆಸಿ ಇಂತಹ ಅಂಶಗಳನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದೆ. ಟೆಕೋಂ ಗುಂಪು ಈ ಮರು ಮಾತುಕತೆಗಳ ಸಮಯದಲ್ಲಿ ಅವುಗಳನ್ನು ಮುರಿಯುವ ಬೆದರಿಕೆಗಳನ್ನು ಹಾಕಿದ್ದರೂ ಕೊನೆಗೆ ಎಲ್‌ಡಿಎಫ್‌ನ ಶರತ್ತುಗಳಿಗೆ ಒಪ್ಪಿಕೊಂಡಿತು ಎಂಬುದು ಗಮನಾರ್ಹ. ಸ್ಮಾರ್ಟ್‌ಸಿಟಿ ನಿರ್ಮಿಸುವ ಕಂಪನಿಯಲ್ಲಿ ರಾಜ್ಯ ಸರಕಾರದ 26ಶೇ. ಇಕ್ವಿಟಿ ಇರುತ್ತದೆಂಬ ಶರತ್ತಿಗೆ ಒಪ್ಪಿಗೆ ಅಭೂತಪೂರ್ವ ಎನ್ನುವ ಪ್ರೊ. ಪಟ್ನಾಯಕ್ ಉದಾರೀಕರಣ-ಖಾಸಗೀಕರಣ- ಜಾಗತೀಕರಣದ ಪರಿಸರದಲ್ಲಿ ಬಂಡವಾಳಶಾಹಿಗಳಿಗೆ 'ಸರಿಯಾದ ಸಂಕೇತ'ಗಳನ್ನು ನೀಡಲು ರಾಜ್ಯ ಸರಕಾರಗಳು ಬೆನ್ನು ಬಗ್ಗಿಸಿ ಸ್ಪರ್ಧೆ ನಡೆಸುತ್ತಿರುವಾಗ ಒಂದು ರಾಜ್ಯ ಸರಕಾರ ಇಂತಹ ಶರತ್ತಿಗೆ ಒಪ್ಪಿಗೆ ಪಡೆದದ್ದು ಖಾಸಗಿ ವಲಯಕ್ಕೆ ಎದುರಾಗಿ ರಾಜ್ಯ ಸರಕಾರದ ಸ್ವಾಯತ್ತತೆಯನ್ನು ಉಳಿಸಿಕೊಳ್ಳುವ, ಆ ಮೂಲಕ ಜನತೆಗೆ ಜವಾಬ್ದಾರರಾಗಿರುವ ಒಂದು ಕ್ರಮ ಎಂದು ವಿಶ್ಲೇಷಿಸುತ್ತಾರೆ. ಮುನ್ನಾರಿನಲ್ಲಿ ಅಕ್ರಮ ರೆಸೋರ್ಟ್‌ಗಳ ಮೇಲೆ ಕ್ರಮವೂ ಇದಕ್ಕೆ ಒಂದು ಉದಾಹರಣೆ.

ತೆರಿಗೆ ಪ್ರಮಾಣವನ್ನು ಇಳಿಸುವುದು, ಅದಕ್ಕೆ ಅನುಗುಣವಾಗಿ ಸರಕಾರ ಶಿಕ್ಷಣ, ಆರೋಗ್ಯ ಮುಂತಾದ ಸಾರ್ವಜನಿಕ ಖರ್ಚುಗಳನ್ನು

ಇಳಿಸುವುದು ಹಾಗೂ ಇವಕ್ಕೆ ಜನ ಬೆಲೆ ತೆರುವಂತೆ ಮಾಡುವುದು ಆರ್ಥಿಕಕ್ಕೆ ಒಳ್ಳೆಯದು ಎಂಬುದು ಉದಾರೀಕರಣವಾದಿಗಳ ಒಂದು ದೊಡ್ಡ ನಂಬಿಕೆ, ಮೂಢನಂಬಿಕೆಯೆನ್ನ ಬಹುದಾದಷ್ಟು. ಈ ನಂಬಿಕೆಗೆ ಬದ್ಧವಾದ ಯುಡಿಎಫ್ ಸರಕಾರ, ಅದರ ಜತೆಗೇ 'ಹಣಕಾಸು ಜವಾಬ್ದಾರಿ ಕಾನೂನು' ಪಾಸು ಮಾಡಿ ಸರಕಾರದ ಹಣಕಾಸು ಕೊರತೆ 2ಶೇ. ಮೀರಬಾರದು ಎಂದು ವಿಧಿಸಿತು. ಇದರಿಂದಾಗಿ ಒಂದೆಡೆ ಹಿಂದಿನ ಐದು ವರ್ಷಗಳಲ್ಲಿ ಕೇರಳದಲ್ಲಿ ಸಂಪನ್ಮೂಲ ಸಂಗ್ರಹ ಸತತವಾಗಿ ಇಳಿಮುಖವಾದರೆ, ಇನ್ನೊಂದೆಡೆ, ಶಿಕ್ಷಣ,ಆರೋಗ್ಯ ಮುಂತಾದವುಗಳ ಮೇಲೆ ಖರ್ಚುಗಳ ಪ್ರಮಾಣವೂ ಈ ಹಣಕಾಸು ಕೊರತೆಯ ಮೇಲಿನ ಮಿತಿಯಿಂದಾಗಿ ಇಳಿಮುಖವಾಯಿತು. ಸಹಜವಾಗಿ ಇದು ತಟ್ಟಿದ್ದು ಶಿಕ್ಷಣ ಮತ್ತು ಆರೋಗ್ಯ ವಲಯವನ್ನು. ಎಲ್‌ಡಿಎಫ್ ಸರಕಾರ ಈ ಪರಿಸ್ಥಿತಿಯನ್ನು ಬದಲಿಸಿತು. 2007-08ರ ಬಜೆಟ್ಟಿನಲ್ಲಿ ಸಂಪನ್ಮೂಲ ಸಂಗ್ರಹವನ್ನು ಹೆಚ್ಚಿಸಲಾಯಿತು.

ಒಂದೇ ವರ್ಷದಲ್ಲಿ ಇಂತಹ ಬದಲಾವಣೆಗಳನ್ನು ತರಲು ಸಾಧ್ಯವಾಗಿದ್ದರೂ ಎಲ್‌ಡಿಎಫ್ ಸರಕಾರ ಸಂತೃಪ್ತ ಮನೋಭಾವ ತಾಳುವಂತಿಲ್ಲ ಎಂದೂ ಪ್ರೊ. ಪಟ್ನಾಯಕ್ ಎಚ್ಚರಿಸುತ್ತಾರೆ. ಮಾಡಿದ್ದನ್ನೆಲ್ಲಾ ಬಿಗಡಾಯಿಸುವುದು ಈಗ ಸಮಾನ್ಯ ಸಂಗತಿಯಾಗುತ್ತಿದೆ. ಈ ಪರ್ಯಾಯ ನಿಲುವನ್ನು ಸಹಿಸದ ಶಕ್ತಿಗಳು ಸೂಕ್ತ ಸಮಯ ಬರಲೆಂದು ಕಾಯುತ್ತಿರುತ್ತಾರೆ, ತಮ್ಮ 'ಅಭಿವೃದ್ಧಿ ಅಜೆಂಡಾ'ವನ್ನು ಹೇರುತ್ತಾರೆ, 'ಹೆಮ್ಮೆಯ ಪ್ರಾಜೆಕ್ಟ್'ಗಳ ಆಮಿಷವೊಡ್ಡುತ್ತಾರೆ. ಈ ಬಗ್ಗೆ ಎಚ್ಚರದಿಂದಿರಬೇಕು. ಏನೇ ಆಗಲಿ, ಪರ್ಯಾಯ ದಾರಿಗಳಿವೆ, ಆದರೆ ಅದಕ್ಕೆ ರಾಜಕೀಯ ಅಂದರೆ ವರ್ಗರಾಜಕೀಯದ ಕೈಮೇಲಾಗಬೇಕು ಎಂಬುದನ್ನು ಕೇರಳದ ಎಡ ಪ್ರಜಾಪ್ರಭುತ್ವ ರಂಗದ ಸರಕಾರ ತೋರಿಸಿಕೊಟ್ಟಿದೆ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಆಂಧ್ರದಲ್ಲಿ ಭೂಮಿ ಹೋರಾಟ

ಬಡವರಿಗೆ ಉಚಿತ ನಿವೇಶನಕ್ಕಾಗಿ ತೀವ್ರ ಹೋರಾಟ ನಡೆದಿದೆ. ಸರ್ಕಾರದ ದಬ್ಬಾಳಿಕೆಯೂ ಹೆಚ್ಚಿದೆ


ಆಂಧ್ರಪ್ರದೇಶ ಕೃಷಿ ಕಾರ್ಮಿಕರ ಸಂಘಟನೆ ನೇತೃತ್ವದಲ್ಲಿ ಸಿಪಿಐ(ಎಂ) ಬೆಂಬಲದೊಂದಿಗೆ ಸುಮಾರು 195 ಸಾಮೂಹಿಕ ಸಂಘಟನೆಗಳು ನಿವೇಶನ ರಹಿತ ಬಡವರು ಮನೆ ಕಟ್ಟಿಕೊಳ್ಳಲು ನಿವೇಶನ ನೀಡಬೇಕೆಂದು ಒತ್ತಾಯಿಸಿ ಮೇ 19 ರಿಂದ ರಾಜ್ಯಾದ್ಯಂತ ಪ್ರತಿಭಟನೆ ಆರಂಭಿಸಿದವು. ಲಾಠಿ ಚಾರ್ಜ್, ಬಂಧನ, ಸುಳ್ಳು ಮೊಕದ್ದಮೆ ದಾಖಲಿಸಿದ್ದನ್ನೂ ಚಳುವಳಿಗಾರರು ಲೆಕ್ಕಿಸದೆ, ಹೋರಾಟವನ್ನು ಸಮರಧೀರವಾಗಿ ಮುಂದುವರೆಸಿದರು.

ಹಲವಾರು ಪ್ರದೇಶಗಳಲ್ಲಿ ಬಡವರು ಸರ್ಕಾರಿ ಭೂಮಿಯನ್ನು ಆಕ್ರಮಿಸಿದರು. ಅಲ್ಲೇ ಗುಡಿಸಲು ನಿರ್ಮಿಸಿ ಜೀವನ ಆರಂಭಿಸಿದರು. ಗುಡಿಸಲುಗಳಿಗೆ ಬೆಂಕಿ ಹಚ್ಚಿ ಬಡವರನ್ನು ತೆರವುಗೊಳಿಸುವುದರೊಂದಿಗೆ ಸಿಪಿಎಂ ನಾಯಕರು ಮತ್ತು ಬಡವರ ಮೇಲೆ ಮೊಕದ್ದಮೆ ದಾಖಲಿಸಲಾಯಿತು.

ಇದೀಗ ನಿವೇಶನ ನೀಡಲು ಒತ್ತಾಯಿಸಿ ಆಂಧ್ರ ಪ್ರದೇಶದಲ್ಲಿ ಹೋರಾಟ ನಡೆಸುತ್ತಿರುವವರ ಮೇಲೆ ದಿನೇ ದಿನೇ ಪೋಲೀಸ್ ದೌರ್ಜನ್ಯ ಹೆಚ್ಚಾಗುತ್ತಿದೆ. ಸಿಪಿಐ(ಎಂ) ಕಾರ್ಯಕರ್ತರು ಹಾಗೂ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರ ಮೇಲೆ ಪ್ರತಿದಿನ ಲಾಠಿ ಚಾರ್ಜ್, ಬಂಧನ, ಸುಳ್ಳು ಮೊಕದ್ದಮೆ ದಾಖಲಿಸಿ ಜೈಲಿಗೆ ತಳ್ಳುವುದು ನಡೆಯುತ್ತಿದೆ.

ಸಿಪಿಎಂ ಮತ್ತು ಸಾಮೂಹಿಕ ಸಂಘಟನೆ ಕಾರ್ಯಕರ್ತರು ಹಾಗೂ ಇತರರ ವಿರುದ್ಧ ಎರಡು ಸಾವಿರ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಜೈಲಿಗೆ ತಳ್ಳಿದ 952 ಮಂದಿಯಲ್ಲಿ 332 ಮಂದಿ ಇನ್ನೂ ಜೈಲಿನಲ್ಲಿದ್ದಾರೆ. ಸಿಪಿಎಂ ರಾಜ್ಯ ಕಾರ್ಯದರ್ಶಿ ಬಿ.ವಿ. ರಾಘವುಲು ವಿರುದ್ಧ ಜಾಮೀನು ರಹಿತ ಮೊಕದ್ದಮೆ ದಾಖಲಿಸಲಾಗಿದೆ. ರಂಗಾರೆಡ್ಡಿ ಮತ್ತು ನಲಗೊಂಡ ಜಿಲ್ಲೆಗಳ ಕಾರ್ಯದರ್ಶಿಗಳಾದ ಜಿ.ನರಸಿಂಹಾರೆಡ್ಡಿ ಮತ್ತು ನಂದ್ಯಾಲ ನರಸಿಂಹಾರೆಡ್ಡಿ ಹಲವಾರು ದಿನ ಜೈಲಿನಲ್ಲಿ ಇದ್ದರು. ವಿಜಯವಾಡ ನಗರ ಸಿಪಿಎಂ ಕಾರ್ಯದರ್ಶಿ ಬಾಬುರಾವ್ ಪೋಲೀಸ್ ಕಸ್ಟಡಿಯಲ್ಲಿದ್ದಾರೆ. ಅದೇ ರೀತಿ ಗಂಗಾವರಂ ಬಂದರು ಪ್ರದೇಶದ ನಿವಾಸಿಗಳನ್ನು ತೆರವುಗೊಳಿಸಿದ್ದರ ವಿರುದ್ಧ ಹೋರಾಟ ನಡೆಸಿದ ವಿಶಾಖಪಟ್ಟಣ ಜಿಲ್ಲಾ ಕಾರ್ಯದರ್ಶಿ ನರಸಿಂಗರಾವ್‌ರನ್ನು ಸಹ ಬಂಧನದಲ್ಲಿರಿಸಲಾಗಿದೆ. ತೋಟಪಲ್ಲಿ ಡ್ಯಾಂ ನಿರ್ಮಾಣಕ್ಕೆ ಸಂಬಂಧಿಸಿ ಅಲ್ಲಿದ್ದ ಜನರನ್ನು ತೆರವುಗೊಳಿಸಿದ್ದರ ವಿರುದ್ಧ ಚಳುವಳಿ ನಡೆಸಿದ ಸಿಪಿಎಂ ಶಾಸಕ ಕೆ.ಲಕ್ಷ್ಮಣ ಮೂರ್ತಿರವರನ್ನು ಬಂಧನದಲ್ಲಿರಿಸಲಾಗಿದೆ.

ಪುಟ 13 ಕ್ಕೆ



ಕಾಳು ಇದೆ ಕೂಳಿಗಿಲ್ಲ

ಪಡಿತರ ವಿಚಾರದಲ್ಲಿ ಕೇಂದ್ರ - ರಾಜ್ಯ ಸರ್ಕಾರಗಳ ನೀತಿಗಳ ಒಟ್ಟು ಪರಿಣಾಮವಾಗಿ ಜನತೆ ಕಂಗಾಲಾಗಿದ್ದಾರೆ. ಸಿಗುತ್ತಿದ್ದ ಚೂರುಪಾರು ಆಹಾರವೂ ಕನಸಿನ ಗಂಟಾಗುತ್ತಿದೆ.

ನಿತ್ಯಾನಂದಸ್ವಾಮಿ



ರೇಷನ್ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿರುವ ಕೇಂಧ್ರದ ಯು.ಪಿ.ಎ. ಸರ್ಕಾರದ ಹಾಗೂ ರಾಜ್ಯದ ಕೆ.ಡಿ.ಎಫ್. ಸರ್ಕಾರದ ನೀತಿಗಳ ಬದಲಾವಣೆಗಾಗಿ ವ್ಯಾಪಕ ಹೋರಾಟ ಅತ್ಯಗತ್ಯವಾಗಿದೆ. ಮೊಟ್ಟ ಮೊದಲನೆಯದಾಗಿ ಕೇಂದ್ರ ಸರ್ಕಾರದ ಆಹಾರ ನೀತಿ ಬದಲಾಗಬೇಕು. 'ಮಾರುಕಟ್ಟೆ ಬೆಲೆಗಳನ್ನು ನಿಯಂತ್ರಿಸಲು ಮತ್ತು ಆಹಾರದ ಭದ್ರತೆಯನ್ನು ಖಾತ್ರಿಪಡಿಸಲು ಸಾರ್ವಜನಿಕ ಪಡಿತರ (ರೇಷನ್) ಪದ್ಧತಿಯು ಅತ್ಯಂತ ಮಹತ್ವದ ಸಾಧನವಾಗಿದೆ' ಎಂದು ಯೋಜನಾ ಆಯೋಗವು ತನ್ನ 2006-07 ರ ವಾರ್ಷಿಕ ಯೋಜನೆಯಲ್ಲಿ ಸ್ಪಷ್ಟಪಡಿಸಿದೆ. ಆದರೆ ಕೇಂದ್ರ ಸರ್ಕಾರ ಆಹಾರ ಧಾನ್ಯಗಳ ಖಾಸಗಿ ಖರೀದಿಗೆ ಹೆಚ್ಚೆಚ್ಚು ಪ್ರೋತ್ಸಾಹ ಕೊಡುವ ಮೂಲಕ ಸಾರ್ವಜನಿಕ ಪಡಿತರ ಪದ್ಧತಿಯ ಆಧಾರ ಸ್ತಂಭವನ್ನೇ ದುರ್ಬಲಗೊಳಿಸುತ್ತಿದೆ.

ಆಹಾರ ಧಾನ್ಯಗಳ ಖರೀದಿಗೆ ಖಾಸಗಿ ಕಂಪನಿಗಳಿಗೆ ಅವಕಾಶ ನೀಡುವ ಬದಲಾಗಿ ಸರ್ಕಾರವೇ ಖರೀದಿ ಮಾಡಿರುವುದರಿಂದ ಎರಡು ರೀತಿಯ ಪ್ರಯೋಜನವಿದೆ. ಮೊದಲನೆಯದಾಗಿ ಅದು ರೈತರ ಹಿತವನ್ನು ಕಾಪಾಡುತ್ತದೆ. ವೈಜ್ಞಾನಿಕವಾದ ಬೆಂಬಲ ಬೆಲೆಗಳನ್ನು ನಿಗದಿಪಡಿಸಿ ಸರ್ಕಾರವೇ ಆ ಬೆಲೆಗೆ ಆಹಾರ ಧಾನ್ಯಗಳನ್ನು ಖರೀದಿ ಮಾಡಿದರೆ, ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಬರುವವರೆಗೆ ಕಾಯಲು ಸಾಧ್ಯವಾಗದ ರೈತರು, ವಿಶೇಷವಾಗಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಲಾಭಕೋರ ವ್ಯಾಪಾರಸ್ಥರಿಗೆ ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡಿ ನಷ್ಟಕ್ಕೆ ಒಳಗಾಗುವುದನ್ನು ತಡೆಯಬಹುದು. ಎರಡನೇಯದಾಗಿ ಮತ್ತು ಅತಿ ಮುಖ್ಯವಾಗಿ ಸರ್ಕಾರವೇ ಆಹಾರ ಧಾನ್ಯಗಳನ್ನು ಖರೀದಿ ಮಾಡುವುದರಿಂದ ಸಾರ್ವಜನಿಕ ರೇಷನ್ ವ್ಯವಸ್ಥೆಗೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ಈ ಎರಡೂ ಉದ್ದೇಶಗಳು ಪರಸ್ಪರ ಪೂರಕವಾಗಿವೆ. ಆದರೆ ಸರ್ಕಾರ, ಖಾಸಗಿ ಕಂಪನಿಗಳಿಂದ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂದು ಹೇಳಿ ರೈತರನ್ನು ಮತ್ತು ಸಾಮಾನ್ಯ ಗ್ರಾಹಕರನ್ನು ಪರಸ್ಪರ ಎತ್ತಿ ಕಟ್ಟುತ್ತಿದೆ ಮಾತ್ರವಲ್ಲ ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗುವಂತೆ ಮಾಡುವ ಮತ್ತು ರೇಷನ್ ಪದ್ಧತಿಯನ್ನು ಅವಲಂಬಿಸಿರುವ ಸಾಮಾನ್ಯ ಜನರಿಗೆ ರಿಯಾಯಿತಿ ದರಗಳಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದೆ.

ಸಬ್ಸಿಡಿ ಕಡಿತ :

ಖಾಸಗಿ ಖರೀದಿಗೆ ಪ್ರೋತ್ಸಾಹ ನೀಡುತ್ತಿರುವ ಕೃಷಿ ಮಂತ್ರಿ ಶರದ್ ಪವಾರ್ ಹಾಗೂ ಆಹಾರ ಸಬ್ಸಿಡಿ ಕಡಿತಕ್ಕೆ ಪಟ್ಟು ಹಿಡಿದಿರುವ ಹಣಕಾಸು ಮಂತ್ರಿ ಚಿದಂಬರಂ ಅವರ ಒಳಗುಟ್ಟು ಒಂದೇ ಆಗಿದೆ. ಎಡಪಕ್ಷಗಳ ಬಲವಾದ ಪ್ರತಿರೋಧ ಇಲ್ಲದೆ ಹೋಗಿದ್ದರೆ ಕಳೆದ ಜನವರಿಯಲ್ಲೇ ಆಹಾರ ಧಾನ್ಯಗಳ ಬೆಲೆಗಳನ್ನು ಏರಿಸಲಾಗುತ್ತಿತ್ತು. ಬೆಲೆ ಏರಿಕೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದ್ದರೂ ಆಹಾರ ಸಬ್ಸಿಡಿಯನ್ನು ಕಡಿತ ಮಾಡಲು ಆಹಾರ ಧಾನ್ಯಗಳ ಖರೀದಿಯ ಪ್ರಮಾಣವನ್ನೇ ಕಡಿತ ಮಾಡಲಾಗುತ್ತಿದೆ.

ಹೀಗೆ ಇಂದು ಕನಿಷ್ಠ ಬೆಂಬಲ ಬೆಲೆ ಕಳೆದ ಎರಡು ವರ್ಷಗಳಿಗಿಂತ ಶೇ.40 ರಷ್ಟು ಹೆಚ್ಚಾಗಿದ್ದರೂ 2007-08 ರ ಸಾಲಿಗೆ ಸರ್ಕಾರ ಒದಗಿಸಿರುವ ಆಹಾರ ಸಬ್ಸಿಡಿ 2005-06 ರಲ್ಲಿ ಒದಗಿಸಿದ ಸಬ್ಸಿಡಿಗಿಂತ 600 ಕೋಟಿ ರೂ.ಕಡಿಮೆಯಾಗಿದೆ. ಒಟ್ಟು ಆಂತರಿಕ ಉತ್ಪಾದನೆ ಶೇ.8.5ರಷ್ಟು ಅಧಿಕವಾಗಿದೆ ಎಂದು ಹೇಳಲಾಗುತ್ತಿದ್ದರೂ, ಒಟ್ಟು ಆಂತರಿಕ ಉತ್ಪಾದನೆಯ ಶೇ.0.83ನ್ನು 2005-06 ರಲ್ಲಿ ಆಹಾರ ಸಬ್ಸಿಡಿಯಾಗಿ ಒದಗಿಸಿದನ್ನು 2006-07ರಲ್ಲಿ ಶೇ.0.66ಕ್ಕೆ ಇಳಿಸಲಾಗಿದ್ದು 2007-08 ರಲ್ಲಿ ಇನ್ನೂ ಕೆಳಗೆ ಇಳಿಸಲಾಗಿದೆ.

ಪ್ರಮಾಣದ ಕಡಿತ :

ಆಹಾರ ಸಬ್ಸಿಡಿಯ ಕಡಿತದಿಂದಾಗಿ ಸಾರ್ವಜನಿಕ ರೇಷನ್ ವ್ಯವಸ್ಥೆಗೆ ಮತ್ತು ಸಂಪೂರ್ಣ ಗ್ರಾಮೀಣ ಉದ್ಯೋಗ ಯೋಜನೆ, ಶಾಲಾ ಮಕ್ಕಳ ಮಧ್ಯಾಹ್ನದ ಊಟದ ಯೋಜನೆ ಮುಂತಾದ ಕೇಂದ್ರ ಸರ್ಕಾರದ ಯೋಜನೆಗಳಿಗಾಗಿ ಒದಗಿಸಲಾಗುತ್ತಿದ್ದ ಆಹಾರ ಧಾನ್ಯಗಳ ಪ್ರಮಾಣದಲ್ಲಿ ಬಾರಿ ಕಡಿತ ಉಂಟಾಗಿದೆ.

2003-04 ರಲ್ಲಿ ಒಟ್ಟು ಬಿಪಿಎಲ್ ಕುಟುಂಬಗಳಿಗೆ ವರ್ಷಕ್ಕೆ 22.5 ಮಿಲಿಯ ಟನ್ ಆಹಾರಧಾನ್ಯಗಳನ್ನು ಒದಗಿಸ ಲಾಗಿತ್ತು. 2004-05 ರಲ್ಲಿ ಅದನ್ನು 19 ಮಿಲಿಯ ಟನ್‌ಗೆ ಇಳಿಸಲಾಯಿತು. 2006-07 ರ ಮೊದಲ 9 ತಿಂಗಳುಗಳಿಗೆ ಕೇವಲ 15 ಮಿಲಿಯ ಟನ್ ಮಾತ್ರ ಒದಗಿಸಲಾಯಿತು.

ಅಂತ್ಯೋದಯ ಯೋಜನೆಯ ಅಡಿಯಲ್ಲಿ ಒಟ್ಟು 2.5 ಕೋಟಿ ಕುಟುಂಬಗಳನ್ನು ಗುರುತಿಸಲಾಗಿದೆ. ಈ ಕುಟುಂಬಗಳಿಗೆ ತಿಂಗಳಿಗೆ ನಿಗದಿಯಾಗಿರುವ 35 ಕಿ.ಗ್ರಾಂ. ಆಹಾರ ಧಾನ್ಯಗಳನ್ನು ಒದಗಿಸಲು ಒಟ್ಟು 11 ಮಿಲಿಯ ಟನ್ ಆಹಾರಧಾನ್ಯಗಳು ಬೇಕಾಗುತ್ತದೆ. ಆದರೆ 2005-06 ರಲ್ಲಿ ಕೇವಲ 8.5 ಮಿಲಿಯ ಟನ್ ಆಹಾರ ಧಾನ್ಯಗಳನ್ನು ಮಾತ್ರ ಒದಗಿಸಲಾಯಿತು. 2006-07 ರ ಮೊದಲ 9 ತಿಂಗಳುಗಳಿಗೆ ಕೇವಲ 7.7 ಮಿಲಿಯ ಟನ್ ಮಾತ್ರ.

'ದೋಷಪೂರಿತ ಟಾರ್ಗೆಟ್'

ರೇಷನ್ ವ್ಯವಸ್ಥೆಯಲ್ಲಿ 'ಟಾರ್ಗೆಟೆಡ್' ಪದ್ಧತಿ ಮುಖ್ಯ ದೋಷವಾಗಿದೆ. ಟಾರ್ಗೆಟೆಡ್ ಪದ್ಧತಿಯ ಅಡಿಯಲ್ಲಿ ಬಡತನ ರೇಖೆ ಕೆಳಗಿನವರನ್ನು ಗುರುತಿಸುವ ಪದ್ಧತಿಯೂ ದೋಷ ಪೂರ್ಣವಾಗಿದೆ. ಬಡತನ ರೇಖೆಯ ಪ್ರಸಕ್ತ ವ್ಯಾಖ್ಯೆಯ ಪ್ರಕಾರ ತಿಂಗಳಿಗೆ 327 ರೂ.ಗಿಂತ ಹೆಚ್ಚು ಆದಾಯ ಇರುವವರು ಬಡವರಲ್ಲ. ಈ ಅಳತೆಗೋಲಿಗೆ ಅನುಗುಣವಾಗಿ ದೇಶದಲ್ಲಿ ಒಟ್ಟು 6 ಕೋಟಿ ಜನ ಬಡತನ ರೇಖೆ ಕೆಳಗೆ ಇದ್ದಾರೆ ಎಂದು ಹೇಳಲಾಗುತ್ತದೆ. ತಿಂಗಳಿಗೆ 327 ರೂ.ಕ್ಕಿಂತ ಕಡಿಮೆ ಆದಾಯ ಇರುವ 6 ಕೋಟಿ ಕುಟುಂಬಗಳು ಭಾರತದಲ್ಲಿ ಇವೆ ಎಂಬುದೇ ಆಘಾತಕಾರಿ ವಿಷಯ. ಅಲ್ಲದೆ, ಬಡತನವನ್ನು ಅಳೆಯುವ ಈ ವಿಧಾನವೇ ದೋಷಪೂರ್ಣವಾಗಿದೆ. ಈ 6 ಕೋಟಿ ಕುಟುಂಬಗಳನ್ನು 'ಟಾರ್ಗೆಟ್' ಮಾಡಿ ಅವರಿಗೆ ಮಾತ್ರ ಬಿಪಿಎಲ್ ರೇಷನ್ ಕಾರ್ಡ್ ಕೊಟ್ಟರೆ ಸಾಕು ಎನ್ನುವ ಸರ್ಕಾರದ ಧೋರಣೆ ಅತ್ಯಂತ ಅಸಂಬದ್ಧವಾಗಿದೆ.



ಈಗಿಲ್ಲ ಇಷ್ಟೂ ಕಾಳು - ದುಸ್ತರವಾಗಿದೆ ಬಡವರ ಬಾಳು

ತಮಿಳುನಾಡು ಮತ್ತು ಕೇರಳ ಮಾದರಿ

ಕೇಂದ್ರ ಸರ್ಕಾರದ ಈ ನೀತಿಗಳಿಗೆ ವಿರುದ್ಧವಾಗಿ ತಮಿಳುನಾಡು ಮತ್ತು ಕೇರಳ ಸರ್ಕಾರಗಳು ತಮ್ಮ ಇತಿಮಿತಿಗಳ ಅಡಿಯಲ್ಲಿ ಜನರ ಆಹಾರದ ಹಕ್ಕನ್ನು ರಕ್ಷಿಸಲು ಕೈಗೊಂಡ ಕ್ರಮಗಳು ಗಮನಾರ್ಹವಾಗಿವೆ.

ತಮಿಳುನಾಡು ಸರ್ಕಾರವು ಎಲ್ಲ ರೇಷನ್‌ಕಾರ್ಡ್‌ದಾರರಿಗೆ ಅಕ್ಕಿಯನ್ನು ಒಂದು ಕಿ.ಗ್ರಾಂ.ಗೆ 2 ರೂ. ದರದಲ್ಲಿ ಒದಗಿಸುತ್ತಿರುವುದು ಇಡೀ ದೇಶದಲ್ಲೇ ಪ್ರಥಮ. ಇತ್ತೀಚೆಗೆ ಅಲ್ಲಿ ಬೆಲೆ ಏರಿಕೆಗೆ ಪರಿಹಾರ ಒದಗಿಸುವ ಉದ್ದೇಶದಿಂದ ಬೇಳೆಕಾಳು ಮತ್ತು ಅಡಿಗೆ ಎಣ್ಣೆಯನ್ನು ಸಹ ಪಡಿತರ ಪದ್ಧತಿಯೊಳಗೆ ಸೇರಿಸಲಾಗಿದೆ.

ಕೇರಳದಲ್ಲಿ ಪ್ರತಿಯೊಂದು ರೇಷನ್ ಕಾರ್ಡಿಗೆ ತಿಂಗಳಿಗೆ 25 ಕಿ.ಗ್ರಾಂ ಅಕ್ಕಿಯನ್ನು 3 ರೂ. ದರದಲ್ಲಿ ಒದಗಿಸಲಾಗುತ್ತದೆ. ಇದಲ್ಲದೆ ಸುಮಾರು 6000 ನ್ಯಾಯ ಬೆಲೆ ಅಂಗಡಿಗಳಲ್ಲಿ ಬೇಳೆಕಾಳು, ಮಸಾಲೆ, ಅಡಿಗೆ ಎಣ್ಣೆ, ಸಾಬೂನು, ಬೆಂಕಿಪೆಟ್ಟಿಗೆ, ಉಪ್ಪು ಮೊದಲಾದ 46 ಬಗೆಯ ಅಗತ್ಯ ವಸ್ತುಗಳನ್ನು ಕಡಿಮೆ ಬೆಲೆಗಳಲ್ಲಿ ಒದಗಿಸಲಾಗುತ್ತಿದೆ. ಉದಾಹರಣೆಗೆ ಉದ್ದಿನ ಬೇಳೆ ಮಾರುಕಟ್ಟೆಯಲ್ಲಿ ಕಿ.ಗ್ರಾಂಗೆ 57 ರೂ.ದರದಲ್ಲಿ ಸಿಗುತ್ತಿದ್ದರೆ, ನ್ಯಾಯಬೆಲೆ ಅಂಗಡಿಗಳಲ್ಲಿ ಅದು 42 ರೂ. ದರದಲ್ಲಿ ಸಿಗುತ್ತದೆ. ಮಾರುಕಟ್ಟೆಯಲ್ಲಿ ಅಕ್ಕಿ ಕಿ.ಗ್ರಾಂಗೆ 15 ರಿಂದ 16 ರೂ. ದರದಲ್ಲಿ ಸಿಗುತ್ತಿದ್ದರೆ ನ್ಯಾಯಬೆಲೆ ಅಂಗಡಿಗಳಲ್ಲಿ ಅದು ರೂ.11 ಕ್ಕೆ ಸಿಗುತ್ತದೆ.

ಕರ್ನಾಟಕದಲ್ಲಿ :

ಪ್ರತಿಯೊಂದು ಬಿಪಿಎಲ್ ರೇಷನ್‌ಕಾರ್ಡಿಗೆ ತಿಂಗಳಿಗೆ 20 ಕೆ.ಜಿ. ಅಕ್ಕಿ ಮತ್ತು 5 ಕೆ.ಜಿ. ಗೋಧಿಯನ್ನು ಕ್ರಮವಾಗಿ 3 ರೂ ಮತ್ತು 2 ರೂ. ದರದಲ್ಲಿ ಒದಗಿಸುವುದನ್ನು 2004ರಲ್ಲಿ ಆರಂಭಿಸಲಾಯಿತು. ಆ ವರ್ಷ ಆಯವ್ಯಯದಲ್ಲಿ ಆಹಾರ ಸಬ್ಸಿಡಿಗಾಗಿ 300 ಕೋಟಿ ರೂ.ಗಳನ್ನು ಮೀಸಲಿಡಲಾಯಿತು. ಆದರೆ ನಂತರದ ಎರಡು ವರ್ಷಗಳಲ್ಲಿ ಬಿಪಿಎಲ್ ಕುಟುಂಬಗಳನ್ನು ಹೊಸದಾಗಿ ಗುರುತಿಸುವ ನೆಪದಲ್ಲಿ ಇಡೀ ರೇಷನ್ ವ್ಯವಸ್ಥೆಯನ್ನೇ ಅಸ್ತವ್ಯಸ್ತಗೊಳಿಸಲಾಯಿತು. ಲಕ್ಷಾಂತರ ಬಡ ಕುಟುಂಬಗಳಿಗೆ ಬಿಪಿಎಲ್ ರೇಷನ್‌ಕಾರ್ಡುಗಳನ್ನು ನಿರಾಕರಿಸ ಲಾಯಿತು. ಇದರಿಂದಾಗಿ ರಾಜ್ಯಾದ್ಯಂತ ಹಾಹಾಕಾರ ಉಂಟಾಯಿತು. ಪರಿಣಾಮವಾಗಿ ಬಿಪಿಎಲ್ ಕಾರ್ಡ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸ

ಬಿಜಾಪುರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮೇ 24 ರಂದು ಪಡಿತರ ಸಮಸ್ಯೆ ವಿರುದ್ಧ ನಡೆಸಿದ ಬೃಹತ್ ಪ್ರತಿಭಟನೆ - ತಹಶೀಲ್ದಾರರ ಕಛೇರಿಗೆ ಮುತ್ತಿಗೆ ಹಾಕಿದ ಚಿತ್ರ



ಲಾಯಿತು. ಲಕ್ಷಾಂತರ ಅರ್ಜಿಗಳು ಸ್ವೀಕೃತವಾದವು. ಬೆಂಗಳೂರಿನಂತಹ ಕೆಲವು ಜಿಲ್ಲೆಗಳಲ್ಲಿ ಅರ್ಜಿಗಳನ್ನು ಸ್ವೀಕರಿಸುವ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ.

ರೇಷನ್ ಕಾರ್ಡುಗಳಿಗಾಗಿ ಬಂದಿರುವ ಅರ್ಜಿಗಳನ್ನು ಇತ್ಯರ್ಥ ಮಾಡುವ ಬದಲಾಗಿ ಯೂನಿಟ್ ಆಧಾರದ ರೇಷನ್ ಪದ್ಧತಿಯನ್ನು ಅಳವಡಿಸಲು ಸರ್ಕಾರ ಮುಂದಾಯಿತು. ಯೂನಿಟ್ ಪದ್ಧತಿಗೆ ಅನುಗುಣವಾಗಿ ಬಿ.ಪಿ.ಎಲ್. ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೆ ತಿಂಗಳಿಗೆ 4 ಕೆ.ಜಿ. ಅಕ್ಕಿ ಮತ್ತು 1 ಕೆ.ಜಿ. ಗೋಧಿಯನ್ನು 20 ಕೆ.ಜಿ. ಮಿತಿಗೆ ಒಳಪಟ್ಟು ವಿತರಿಸಲು ಆರಂಭಿಸಲಾಯಿತು.

ಒಬ್ಬನಿಗೆ ತಿಂಗಳಿಗೆ 5 ಕೆ.ಜಿ. ಅಕ್ಕಿ ಗೋಧಿ ಒದಗಿಸುವುದೆಂದರೆ ದಿನಕ್ಕೆ ಕೇವಲ 170 ಗ್ರಾಂ ಮಾತ್ರ ! ಇದು ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವ ಕೈದಿಗೆ ಒಂದು ಊಟಕ್ಕೆ ಒದಗಿಸುವ ಪ್ರಮಾಣಕ್ಕಿಂತ ಕಡಿಮೆ.

ಗ್ರಾಮ ವಾಸ್ತವ್ಯ ಮಾಡಿ ಬಡವರ ಕಷ್ಟಗಳನ್ನು ಅರ್ಥಮಾಡಿಕೊಳ್ಳುತ್ತೇನೆ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ರೇಷನ್ ವ್ಯವಸ್ಥೆಯಿಂದ ವಂಚಿತರಾದ ಕಡು ಬಡವರ ಗೋಳು ಗಮನಕ್ಕೆ ಬಾರದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಇಂತಹ ಕಪಟತನವನ್ನು ಬಯಲಿಗೆಳೆದು ಸರ್ಕಾರದ ಜನವಿರೋಧಿ ಆಹಾರ ನೀತಿಗಳನ್ನು ಬದಲಾಯಿಸಲು ಪ್ರಬಲವಾದ ಜನ ಚಳುವಳಿಯೊಂದೇ ಮಾರ್ಗ. ○

ಮಂಡ್ಯ : ರೇಷನ್ ಗೋಳು



ಮಾರ್ಚ್ 26 ರೇಷನ್‌ಗಾಗಿ, ರೇಷನ್‌ಕಾರ್ಡ್‌ಗಾಗಿ ಮಂಡ್ಯ ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ



ಪೊಲೀಸರ ರಾಕ್ಷಸಿ ದಾಳಿಯಲ್ಲಿ ಮೈಯೆಲ್ಲಾ ಬಾಸುಂಡೆ ಬಂದಿರುವ ಟಿ.ಎಲ್.ಕೃಷ್ಣೇಗೌಡ

"ಎಲ್ಲಿ ಎಟುಕುತ್ತೆ, ಈ ತರ ರೇಷನ್ ಕೊಟ್ರರೆ ನಾವ್ ಬದುಕಕ್ಕಾಗಲ್ಲ. ನಾವು ಬದುಕಬೇಕೋ ಸಾಯ್ ಬೋಕೋ ತಿಳಿತಾ ಇಲ್ಲ. ಹಿಂದೆ 20 ಕೆ.ಜಿ. ಅಕ್ಕಿ ಕೊಡ್ತಾ ಇದ್ರು, ಹೆಂಗೋ ನಾಲ್ಕು ದಿನ ಕೂಲಿಗೆ ಹೋದ್ರು ಜೀವನ ಮಾಡ್ಕೋ ತಿದ್ದೋ. ಈಗ ಹಂಗಿಲ್ಲ. ಈಗ ನಾವು ದಿನಾ ಕೂಲಿ ಹುಡುಕ್‌ಬೇಕು. ಕೂಲೀನೂ ಸಿಗಲ್ಲ. ಇವ್ರ್ ಕೊಡೋ ನಾಲ್ಕು ಕೆ.ಜಿ. ಗಂಜೀಗೂ ಸಾಕಾಗಲ್ಲ. ಗಂಜಿ ಕಾಯಸ್ಕೊಂಡ್ರೆ ತಳವೇ ಸೀದೋಗುತ್ತೆ ನಾವು ಬದುಕಾದಾದರೂ ಹೆಂಗೇ"

ಅಕ್ಕಮ್ಮ
ಕೂಲಿಕಾರ್ಮಿಕಳು, ಸಿದ್ದೇಗೌಡನ ಕೊಪ್ಪಲು, ಬಸರಾಳು ಹೋಬಳಿ, ಮಂಡ್ಯ ಜಿಲ್ಲೆ



"ಇವರು ನಮಗೆಲ್ಲಾ ಕಡಿಮೆ ಕೊಟ್ಟು ಮೂಟೆಗಟ್ಲೆ ಅಕ್ಕಿ ಆಚೆ ಕಳುಸ್ತರೆ ತಿಂಗ್ಲಲ್ಲಿ ಎರಡೇ ದಿನ ಕೊಡದು. ಆಮೇಲೆ ಕೇಳುದ್ರೆ ಇಲ್ಲಾ ಮುಗಿದೋಯ್ತು ಅಂತರೆ ನಾವು ಏನ್ ಮಾಡ್ಬೆಕು?

ಚಂದ್ರಮ್ಮ, ಮಂಡ್ಯ, ತಮಿಳ್ ಕಾಲೋನಿ,

★

"ನನ್ನ ಗಂಡನ್ನ ಕಳಕೊಂಡು ನಾಲ್ಕು ವರ್ಷ ಆಗಿದೆ. ನನ್ನೆರಡು ಮಕ್ಕಳ ಜೊತೆ ಜೀವನ ಮಾಡ್ಬೇಕು. ನನಗೆ ಕೊಡೋದು ನಾಲಕ್ ಕೆ.ಜಿ. ಮಕ್ಕಳಿಬ್ರು, ಒಬ್ಬನ್ ಹೆಸ್ರು ಕಾರ್ಡಲ್ ಬಿಟ್ಹೋಗಿದೆ. ನಮಗೆ ಎಂಟು ಕೆ.ಜಿ.ನಲ್ಲಿ ತಿಂಗಳೆಲ್ಲಾ ಜೀವ್ನ ಮಾಡಕ್ಕಾಗುತ್ತ? ಓಟು ಹಾಕಿಸ್ಕೊಂಡೋದೋರು ಮತ್ತೆ ತಿರುಗಿ ನೋಡಿಲ್ಲ.".

ಸುಮಿತ್ರಾ, ನಂದಳ್ಳಿ, ಮಂಡ್ಯ ಜಿಲ್ಲೆ

★

'ನಾವಿರೋದು ಆರು ಮಕ್ಕಳು ಗಂಡ ಹೆಂಡತಿ ಒಟ್ಟು 8 ಜನ ನನ್ನ ಗಂಡ ಪ್ಲಾಸ್ಟಿಕ್ ಡಬ್ಬ ಮಾರದು. ದಿನವೆಲ್ಲಾ ಯಾಪಾರ ಮಾಡಿದ್ರೂ 30-40 ದುಡಿಯಕ್ಕಾಗಲ್ಲ. ಇಂಗಿರುವಾಗ ನಮಗೆ ಬಿಪಿಎಲ್ ಕಾರ್ಡ್ ಕಿತ್ತುಕೊಂಡು ಎಪಿಎಲ್ ಕಾರ್ಡ್ ಕೊಟ್ಟಿದ್ದಾರೆ. ಅದಕ್ಕೆ 2 ಲೀಟರು ಸೀಮೆಎಣ್ಣೆ ಕೊಡ್ತಾರೆ. ನಾವು ಹೊಟ್ಟೆಗೆ ಅಕ್ಕಿ ಇಲ್ದೆ. ಸೀಮೆಎಣ್ಣೆ ಹುಯ್ಕೊಳಕ್ಕಾಗತ್ತ? ಎಪಿಎಲ್‌ಕಾರ್ಡ್ ಅಂತ ರೇಷನ್ನೇ ಕೊಡ್ತಾ ಇಲ್ಲ."

ರಜಿಯಾಬಾನು, ಬೀಡಿ ಕಾಲೋನಿ, ಮಂಡ್ಯ ನಗರ

ಬೆಂಗಳೂರಿನಲ್ಲಿ ರೇಷನ್ ಪಡಿಪಾಟಲು

"ನಮ್ಮನೇಲಿ 7 ಜನ ಇದೀವಿ. ಸ್ಕೂಲಿಗೋಗುವ ನಾಕು ಮಕ್ಳವೆ. ಇಬ್ಬರು ಕೂಲಿ ಕೆಲಸಕ್ಕೋಯ್ತರೆ. ಮೊದ್ಲು 20 ಕೆ.ಜಿ. ಅಕ್ಕಿ ಕೊಡ್ತಾ ಇದ್ರು. ಓದ್ ತಿಂಗ್ಳು 15 ಕೆ.ಜಿ. ಅಕ್ಕಿ ಕೊಟ್ರು. ಈ ತಿಂಗಳು ಬರಿ 8 ಕೆ.ಜಿ. ಮಾತ್ರ ಅಕ್ಕಿ ಕೊಡ್ತಾವ್ರೆ. ಹಿಂಗಾದ್ರೆ ನಾವ್ ಏನ್ ಉಣ್ಣಾದು.

ತಿಂಗಳಿಗೆ ಅರ್ಧ ಕೆ.ಜಿ. ಸಕ್ಕರೆ, 2 ಕೆ.ಜಿ. ಗೋದಿ ಕೊಡ್ತಾರೆ. ಅದನ್ನು ತಗೊಂಡು ಏನ್ ಮಾಡಾದು! ಕಾಲ್ ಕೆ.ಜಿ. ಸಕ್ಕರೆ ತಗೊಂಡ್ರೆ ಅಂಗಡೀಲಿ 5-6 ರೂಪಾಯಿ ತಗೋತಾರೆ'.

ರಂಗಮ್ಮ
ಚಿಕ್ಕಗೊಲ್ಲರ ಹಟ್ಟಿ ನಿವಾಸಿ, ಮಾಗಡಿರಸ್ತೆ, ಬೆಂಗಳೂರು.

★

"ಸಕ್ಕರೆ, ಒಂದು ತಿಂಗಳು ಬರುತ್ತೆ, ಒಂದೊಂದು ತಿಂಗಳು ಬರೋದೆ ಇಲ್ಲ. ಬೇರೆ ಡಿಪೋಗಳಲ್ಲಿ ಪಾಮ್ ಆಯಿಲ್ ಕೊಡ್ತಾರೆ, ಆದರೆ ನಮ್ ಡಿಪೋದಲ್ಲಿ ಎಣ್ಣೆ ಕೊಡೋದೆ ಇಲ್ಲ".

ಲತಾ
ಮನೆಗೆಲಸ ಮಾಡಿ ಬದುಕು ನಡೆಸುತ್ತಿರುವ ಮಹಿಳೆ, ಚಿಕ್ಕಗೊಲ್ಲರ ಹಟ್ಟಿ

★

"ರೇಷನ್ ಅಂಗಡಿ ಯಾವಾಗಲೂ ತಗೆಯಲ್ಲ. ತಿಂಗಳಲ್ಲಿ ರೇಷನ್ ಬಂದಾಗ 3 ದಿನ ತೆಗೀತಾರೆ ಆ ಮೇಲೆ ಬಾಗಿಲು ಮುಚ್ ಬುಡ್ತಾರೆ".

ಲಕ್ಷ್ಮಮ್ಮ
ಕೂಲಿ ಕೆಲಸ ಮಾಡುವವರು

★

ಒಂದು ರೇಷನ್ ಅಂಗಡಿ ಅವಸ್ಥೆ

ಮಾಗಡಿ ರಸ್ತೆಯ ಚಿಕ್ಕಗೊಲ್ಲರಹಟ್ಟಿ ಬಸ್ ನಿಲ್ದಾಣದಲ್ಲಿ ಬೆಳಿಗ್ಗೆಯೇ ಜನ ಪರಿಷೆ. ಬಸ್ ಹತ್ತಲು ಅಲ್ಲ. ಅಪರೂಪಕ್ಕೆ ತೆರೆದಿರುವ ರೇಷನ್ (ನ್ಯಾಯ ಬೆಲೆ)ಅಂಗಡಿಯಲ್ಲಿ ರೇಷನ್ ತೆಗೆದುಕೊಳ್ಳಲು ಧಾವಂತ. ತೆರೆದ ಅಂಗಡಿ ಮುಚ್ಚಿದರೆ ಮತ್ತೆ ಎಂದು ತೆರೆಯುವುದೊ ಗೊತ್ತಿಲ್ಲ. ಜನರ ಗುಂಪಿನ ನಡುವೆ ತೂರಿಕೊಂಡು ಒಳಗೆ ಹೋದರೆ ರೇಷನ್ ಡಿಪೋ ಮಾಲಕಿ ಹೇಳಿದ್ದಿಷ್ಟು.

'ನಾವು ಎಲ್ಲ ಕಾರ್ಡುದಾರರಿಗೂ 8 ಕೆ.ಜಿ. ಅಕ್ಕಿ, ಅರ್ಧ ಕೆ.ಜಿ. ಸಕ್ಕರೆ ಮಾತ್ರ ಕೊಡುತ್ತಿರುವುದು ನಿಜ. ಈ ಸಾರಿ ನಮಗೆ ಬರೇ 550 ಬಿಪಿಎಲ್ ಕಾರ್ಡ್‌ಗಳಿಗೆ ಕೊಡಲು ಮಾತ್ರ ರೇಷನ್ ಬಂದಿದೆ. ಎಪಿಎಲ್ ಕಾರ್ಡುಗಳಿಗೆ ರೇಷನ್ ಬಂದಿಲ್ಲ. ಸ್ಥಳೀಯ ಮುಖಂಡರ ನಿರ್ದೇಶನದಂತೆ ಎಲ್ಲ ಕಾರ್ಡಿಗೂ ಹಂಚುತ್ತಿದ್ದೇವೆ. ○

ಕುಂದಾಪುರ : ರೇಷನ್ ಕೋತಾ, ಕಾರ್ಡೂ ಇಲ್ಲ

ಕುಂದಾಪುರ ತಾಲ್ಲೂಕಿನಲ್ಲಿ ಒಟ್ಟು 78,513 ಪಡಿತರ ಚೀಟಿ ವಿತರಿಸಲ್ಪಟ್ಟಿದ್ದು. ಅನ್ನಪೂರ್ಣ 122, ಅಂತ್ಯೋದಯ 6,860, ಅಕ್ಷಯ 46,524 ಹಾಗೂ ಎಪಿಎಲ್ ಕಾರ್ಡುಗಳು 25,007, ಅಕ್ಷಯ ಪಡಿತರ ಚೀಟಿ ನೊಂದಾವಣೆಯಲ್ಲಿ ಸರಕಾರದ ಮಿತಿಗಿಂತ ಹೆಚ್ಚು ನೊಂದಾಯಿಸಿರುವ ದರಿಂದ ಇದೀಗ ಹೆಚ್ಚುವರಿ ನೊಂದಾಯಿತ ಪಡಿತರ ಚೀಟಿಯನ್ನು ರದ್ದುಪಡಿಸಿ ಎಪಿಎಲ್ ಗೆ ಏರಿಸಲಾಗಿದೆ. ಹಿಂದಿನ ಸಮೀಕ್ಷೆಯ ಬಗ್ಗೆ ಅಸಂಖ್ಯ ದೂರುಗಳು ಆಗಮಿಸಿದ್ದು ಈ ಬಗ್ಗೆ ಮರು ಸಮೀಕ್ಷೆಗಳು ನಡೆದು ತಪ್ಪುಗಳನ್ನು ಸರಿಪಡಿಸುವ ಪ್ರಯತ್ನ ನಡೆಯುತ್ತಿದೆಯಂತೆ!

ಪಡಿತರ ಚೀಟಿಗಳಿಗೆ ಪಡಿತರ ವಸ್ತು ವಿತರಿಸುವ ಜವಾಬ್ದಾರಿ ಕುಂದಾಪುರ ಟಿ.ಎ.ಪಿ. ಸಿ.ಎಂ.ಎಸ್. ವಹಿಸಿಕೊಂಡಿದ್ದು ತಿಂಗಳ 3ನೇ ವಾರದಲ್ಲಿ ನ್ಯಾಯ ಬೆಲೆ ಅಂಗಡಿಗಳಿಗೆ ವಿತರಿಸುತ್ತದೆ. ಕುಂದಾಪುರದ 106 ಪಡಿತರ ವಿತರಣೆ (105 ವಿವಿಧ ಸಹಕಾರ ಸಂಘಗಳ ನಿಯಂತ್ರಣದಲ್ಲಿದೆ) ಅಂಗಡಿಗಳು ತಿಂಗಳ ಅಂತ್ಯದವರೆಗೆ ವಿತರಣೆ ನಡೆಸುತ್ತದೆ. ಆದರೆ ಸರ್ಕಾರದ ನಿಗದಿತ ವೇಳಾ ಪಟ್ಟಿಯಂತಲ್ಲ. ಬ್ಯಾಂಕ್ ವೇಳಾಪಟ್ಟಿಯಂತೆ ಸುಮಾರು 10 ದಿನ ವಿತರಣೆ ಇರುವುದರಿಂದ ವಿತರಣೆಯಲ್ಲಿ ತೀರಾ ತೊಡಕು ಕಾಣಿಸುವುದಿಲ್ಲ. ಈಗಂತೂ ಪಡಿತರ ದೊರೆಯುವ ಚೀಟಿಗಳ ಸಂಖ್ಯೆ ಕಡಿಮೆಯೇ ಆಗಿದೆ. ಪಡಿತರ ಪಡೆಯುವಾಗ ಒಂದೇ ಬಾರಿ ಪಡೆಯಬೇಕಾಗಿದೆ. ಇತ್ತೀಚಿನ ತಿಂಗಳಲ್ಲಿ ತಾಲ್ಲೂಕಿನಲ್ಲಿ ವಿತರಿಸುವ ಆಹಾರ ಪ್ರಮಾಣದಲ್ಲಿ ಇಳಿಕೆ ಕಂಡು ಬರುತ್ತಿದೆ. ಕಳೆದ 2 ತಿಂಗಳಲ್ಲಿ ಸುಮಾರು 150 ಟನ್ ಪಡಿತರ ವಸ್ತು ಇಳಿಕೆ ಕಂಡಿದೆ. ಯೂನಿಟ್ ಮಾದರಿ ಜಾರಿಗೆ ತಂದಿದ್ದರ ಪರಿಣಾಮ ಇದು. ಎ.ಪಿ.ಎಲ್.ಗೆ ಯಾವುದೇ ಪಡಿತರ ನೀಡುತ್ತಿಲ್ಲ. ಅಂದರೆ ತೀರಾ ಕೆಳವರ್ಗದವರಿಗೆ ಹಾಗೂ ಕೆಳ ಮಧ್ಯಮ ವರ್ಗದವರಿಗೆ ವಿತರಿಸುತ್ತಿದ್ದ ಪಡಿತರದಲ್ಲಿ ಈ ಮಟ್ಟದ ಕಡಿತ, ಸರ್ಕಾರದ ಅವೈಜ್ಞಾನಿಕ ಮಾನದಂಡದಿಂದಾಗಿ ತೀರಾ ಬಡವರೂ ಕೂಡ ಎ.ಪಿ.ಎಲ್. ಎಂದು ಪರಿಗಣಿಸುವಂತಾಗಿದೆ.


ಎ.ಪಿ.ಎಲ್.(ಗ್ಯಾಸ್ ರಹಿತ) ಕಾರ್ಡುಗಳಿಗೆ ಸೀಮೆಎಣ್ಣೆ ನೀಡದಿರುವುದು ತೀರಾ ಆಕ್ರೋಶಕ್ಕೊಳಗಾದ ವಿಷಯ. ಅತೀ ಶ್ರೀಮಂತರ ಮನೆ ಹೊರತುಪಡಿಸಿದ್ದಲ್ಲಿ ಎಲ್ಲಾ ಮನೆಗಳಲ್ಲೂ ವಿದ್ಯುತ್ ಕೈಕೊಟ್ಟಾಗ ಬೆಳಕಿಗಾಗಿ ಸೀಮೆಎಣ್ಣೆ ದೀಪ ಅನಿವಾರ್ಯ. ಇನ್ನು ಹಲವು ಕಾರಣಗಳಿಗಾಗಿ ಸೀಮೆಎಣ್ಣೆ ಮನೆಯಲ್ಲಿ ಇರತಕ್ಕ ವಸ್ತು. ಆದರೆ ಚೀಟಿಗೆ ಕನಿಷ್ಠ ಸೀಮೆಎಣ್ಣೆ ವಿತರಿಸದಿರುವುದು ತೀರಾ ಅನ್ಯಾಯವಾಗಿದೆ.

ಕುಂದಾಪುರ ಭಾಗದಲ್ಲಿ ಶೇ.95 ಮಂದಿ ಕುಚ್ಚಿಗೆ ಅಕ್ಕಿ ಬಳಸುವವರು. ಆದರೆ ಪಡಿತರದಲ್ಲಿ ಬೆಳ್ತಿಗೆ ಅಕ್ಕಿ ಮಾತ್ರ ನೀಡಲಾಗುತ್ತಿದೆ. ಯೂನಿಟ್ ಮಾದರಿ ತಂದ ಮೇಲೆ ಜನ ಸಾಮಾನ್ಯರಲ್ಲಿ ತೀರಾ ಆಕ್ರೋಶ ಕಂಡು ಬರುತ್ತಿದೆ. ಹಿಂದೆ ಸಮೀಕ್ಷೆ ಮಾಡುವಾಗ ಬಿಪಿಎಲ್ ಶೇ 60 ಮಿತಿ ಎಂದು ನಿಗದಪಡಿಸದೆ ಬಿಪಿಎಲ್ ಪಡಿತರ ಶೇ.80 ರಷ್ಟು ನೊಂದಾಯಿಸಲ್ಪಟ್ಟಿತು. ಇದೀಗ ಶೇ.60 ರ ಮಿತಿಗಾಗಿ ಪುನರ್ ಸಮೀಕ್ಷೆ ನಡೆಸುವಾಗ ಹಾಗೂ ಪಡಿತರ ವಸ್ತುಗಳನ್ನು ನೀಡಲು ನಿರಾಕರಿಸುವಾಗ ಅಂಗಡಿ ಎದುರು ಸಂಘರ್ಷ ಏರ್ಪಡುತ್ತಿದೆ. ಸರ್ಕಾರ ಅಸಂಖ್ಯಾತ ತಪ್ಪುಗಳ ನ್ನೊಳಗೊಂಡ ತಾತ್ಕಾಲಿಕ ಚೀಟಿಯೇ ಇನ್ನೂ ಪೂರ್ತಿ ವಿತರಣೆ ಮಾಡಿಲ್ಲ. ಅಧಿಕೃತ ಕಾರ್ಡಿನ ವಿತರಣೆ ಭವಿಷ್ಯದ ಮಾತಾಯಿತು.

■ **ಬಿ. ಚಂದ್ರಶೇಖರ್**

ಜನಶಕ್ತಿ ಕನ್ನಡ ವಾರಪತ್ರಿಕೆ

ಜೂನ್ 10, 2007



■ ಕೆ.ನೀಲಾ

ಕಣ್ಣೀರು ಕಿಡಿಯಾಗಿ

ಅದು ಡಿಸೆಂಬರ್ ತಿಂಗಳ ಉಗ್ರ ಚಳಿ. ನಾವು ಸಂಗಾತಿಗಳೆಲ್ಲ ಆದೊಂದು ರಾತ್ರಿ ಕಾಳ ಕತ್ತಲೆಯನ್ನು ಸೀಳುತ್ತಾ ಕಡಕೋಳ ಎಂಬ ಊರಿನ ರಾತ್ರಿ ಜಾತ್ರೆಗೆ ಹೊರಟೆವು

ಆ ಜಾತ್ರೆಗೆ ಅವತ್ತು ನಾವು ಹುಚ್ಚಿದ್ದು ಅಲ್ಲಿಗೆ ಧಾವಿಸಿದ್ದು ತತ್ವಪದಗಳನ್ನು ಕೇಳಲು. ಎದೆ ತುಂಬಿ ಹಾಡುವ ಕೇಳುಗರ ಮನ ತಟ್ಟಿ ಹರಿಯುವ ತತ್ವಪದಗಳ ಹಳೆಯ ದಾಟಿ ಹುಡುಕಿ ಬಂದಿದ್ದೆವು. ಏಕತಾರಿ ಟೀಂವ್‌ಗುಟ್ಟಿಸುತ ಹಾಡಿನ ಭಾವಕ್ಕೆ ತಕ್ಕಂತೆ ಮೈದೂಗುತ ಪ್ರತಿ ಪದದೊಳಗೊಂದು ಲೋಕ ಕಟ್ಟಿ ನಮ್ಮ ಕೈ ಹಿಡಿದೊಯ್ದು ವಿಹರಿಸುವ ಕಗ್ಗಹಳ್ಳಿಯ ಹಾಡುಗರು ಅಪ್ಪಟ ರೈತರೇ ಸರಿ. ಅವರ ಹಾಡಿಗೆ ನಾವು ಕಿವಿಯಾಗುವ ಆ ಹೊತ್ತು ಅದೊಂದು ಧ್ಯಾನಸ್ಥ ಸ್ಥಿತಿ. ಲೋಕದ ದಂದುಗ. ಒಣ ಹಮ್ಮಿನ ವ್ಯವಹಾರ, ಹುಚ್ಚು ಭ್ರಮೆ ಹುಟ್ಟಿಸುವ ಸಿರಿ ಸಂಪತ್ತು ಅಧಿಕಾರ, ಹೀಗೆ ಎಲ್ಲವನ್ನು ಕಿರು ಬೆರಳಿನಿಂದ ತಳ್ಳಿ ಹಾಕುವ ಹಾಡೊಳಗಿನ ಮಾಂತ್ರಿಕ ನಮ್ಮನ್ನು ಮಂತ್ರ ಮುಗ್ಧಗೊಳಿಸಿದ್ದು ಹೌದು.

‘ಅಕ್ಕಾವರೇ ಯಾವಾಗ ಬಂದ್ರಿ? ನಮಸ್ಕಾರ’ ಎಲ್ಲೋ ಕೇಳಿದ ದನಿ. ಸುತ್ತೆಲ್ಲ ಕಣ್ಣ ದಿಟ್ಟಿ ಚೆಲ್ಲಿ ಹುಡುಕಾಡಿದೆ. ‘ನಾನರೀ.....ಗುರುತು ಹಿಡಿಲಿಲ್ಲೇನು? ಸಂಗೀತಾ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ರೀ...’ 28-30 ಹರೆಯದ ಸಂಗೀತಾ ಪಕ್ಕದಲ್ಲೇ ನಿಂತು ಹುಡುಕಾಡಿ ನನ್ನ ಮುಂಗೈ ಹಿಡಿದು ಅಲ್ಲಲ್ಲಿ ಅಂಗಡಿಗಳ ಮುಂದೆ ಥಳಥಳ ಬೆಳಗು ಚೆಲ್ಲುವ ಕಂದೀಲು ದೀಪದಂತೆ ಫಳ್ಳೆಂದು ನಕ್ಕಳು. ಅವಳ ಕಣ್ಣ ಕಾಂತಿ ಹಾಲ್ಬೆಂಗಳಂತೆ ಹರಡಿತ್ತು. ವರ್ಷಾನುಗಟ್ಟಲೇ ಮಾಯವಾಗಿದ್ದ ನಗುವನ್ನು ಹೈರಾಣಾಗಿ ಹಿಡಿದು ತಂದು ಕಾಪಿಟ್ಟುಕೊಂಡಂತಿದ್ದಳು. ಯಾವ ಬೆಲೆಗೂ ಮುಗ್ಧ ಸ್ನಿಗ್ಧ ನಿರ್ಭಯದ ನಗು ಮಾರಿಕೊಳ್ಳಲು ಸಿದ್ದವಿಲ್ಲದ ಮನಃಸ್ಥಿತಿ ಹೊಂದಿದಂತಿದ್ದಳು. ಕುತ್ತಿಗೆ ಪಕ್ಕದ ಎಲುಬುಗಳು ಎದ್ದು ಕಾಣುವಂತಿದ್ದರೂ ಎಷ್ಟೋ ಸುಧಾರಿಸಿರುವಳು.

ಜೊತೆ ಬಂದವರು ಮರೆಯಾದ ಆತಂಕ ಹೆಜ್ಜೆಯಿಡುವಾಗಲೇ ಮಾತಿಗೆ ಸಿಕ್ಕ ಸಂಗೀತ ಯಾಕೋ ತೀರ ಆಪ್ತ ಭಾವನೆ ಹುಟ್ಟು ಹಾಕಿದಳು. ಯಾಕೆ ಗೊತ್ತಿಲ್ಲ. ನಾನು ಇನ್ನೊಮ್ಮೆ ಅವಳ ಕತೆ. ಕೇಳಬೇಕೆನಿಸಿತು. ಎಳೆ ಬಾಲೆಯ ಮೇಲೆ ಈ ಹೊಲಸು ಮನಸಿನ ಜನ ಮಾಡಿದ ದ್ರೋಹ ನೆನೆದರೆ ರೋಷ ಹೆಡೆ ಎತ್ತಿ ಪೂತ್ಕರಿಸುತ್ತದೆ.

ಹಳ್ಳಿಯೊಂದರ ನೂರಾರು ಗುಡಿಸಲಿನಲ್ಲಿ ನಡುವೆ ತುಸುವೇ ಎತ್ತರದ ಮಣ್ಣಿನ ಗೋಡೆಗಳ ಎರಡು ಕೋಣೆಯ ಮನೆಯಲ್ಲಿ ಸಂಗೀತಾ ಸರ ಸರನೇ ಬೆಳೆದು ಕಲ್ಬುರ್ಗಿಯ ಹಾದಿ ತುಳಿದು ಕಾಲೇಜು ಮೆಟ್ಟಿಲೇರಿ ಡಿಗ್ರಿ ಮುಗಿಸಿದ್ದು ಯಾರಾದರೂ ಹುಬ್ಬೇರಿಸುವಂಥದ್ದೆ. ಇಂವನೇ ನಿನ್ನಪ್ಪ ಎಂದು ಅಪ್ಪ ಹೇಳಿದ್ದು ಮೆದುಳಿಗೆ ಬಂದು ಹೃದಯಕ್ಕಿಳಿವ ಮುನ್ನವೇ ಹಿರಿ ವಯಸ್ಸಿನ ಅಪ್ಪ ಮಣ್ಣು ಸೇರಿದ್ದ. ಆಗಷ್ಟೇ ಹರೆಯ ಡಿಕ್ಕಿ ಹೊಡೆದು ಹೈರಾಣದಂತಿದದ ಅವ್ವ ಇದ್ದಕ್ಕಿದ್ದಂತೆ ಮುದಿಕಳೆಗೆ ಒಡ್ಡಿಕೊಂಡಿದ್ದಳು. ಕತ್ತಲೆಯೊಂದಿಗೆ ಕದನ ಹೂಡಿದ ಅವ್ವನ ನಿಟ್ಟುಸಿರು ಎಲ್ಲಿಂದಲೋ ನುಗ್ಗುವ ಗಾಳಿಯೊಳಗೆ ಲೀನವಾಗುತ್ತಿತ್ತು. ತನ್ನೆಲ್ಲ ಬಯಕೆ ಭಾವನೆಗಳನ್ನು ಎದೆಯ ಪಾತಾಳಕ್ಕೆ ತಳ್ಳಿ ಏಕೈಕ ಮಗಳು ಸಂಗೀತಾಳನ್ನು ಶ್ಯಾಣೆ, ಪೋರಿಯಾಗೇ ಬೆಳೆಸಿದಳು. ಹಾಗಾಗಿಯೇ ಹಳ್ಳಿಯೊಳಗೆ ಧೂಳು ಹರಡುತ್ತಾ, ಕುಂಟುತ್ತ ಬರುವ ಕೆಂಪು ಬಸ್ಸಿನಲ್ಲಿ ಸುಗ್ಗಿ ಮಹಿಳೆಯರಿಗೆ ಮೀಸಲಿರುವ ಸೀಟಿನ ಮೇಲೆ ಸುಂತವರಿಗೆ ತಿಳಿ ಹೇಳಿಯೋ ಗದರಿಯೋ ಅಂತೂ ಸೀಟು ಗಿಟ್ಟಿಸಿಕೊಂಡು ಓಡಾಡಿದ ಛಲವಂತಿ.

ಸಂಗೀತಾ ಶ್ಯಾಣೆ ಆಗಿದ್ದು ಅವ್ವನಿಗೆ ಗೊತ್ತಾಗುವ ಮುನ್ನವೇ ಊರ ಸಂಗನಗೌಡರಿಗೆ ಮೊದಲು ಗೊತ್ತಾಗಿದ್ದು. ಗ್ರಾಮ ಪಂಚಾಯತ್ ಚುನಾವಣೆ ಎಂಬುವುದು ಘೋಷಣೆಯಾಗಿ ರಾಜಕಾರಣದ ಮಾತುಗಳು ಪ್ರತಿ ಮನೆಯಂಗಳಗಳಲ್ಲಿ ಅಳ್ಳಿಯಂತೆ ಚಟಪಟನೆ ಸಿಡಿಯುತ್ತಿದ್ದವು. ಸೋಲು ಗೆಲುವಿನ ಲೆಕ್ಕಾಚಾರಗಳು, ಯಾರು ಯಾರದೋ ಸೊಂಟ ಮುರಿಯಲು ಜಮಾನಾ ಜಪ್ತಿಗೊಳಿಸಲು ನಡೆದ ಹುನ್ನಾರಗಳು ಪೊರೆ ಕಳಚಿದ ಹಾವಂತೆ ಹರಿದಾಡುತ್ತಿದ್ದವು. ಯಾವ ಹೊತ್ತಲ್ಲಾದರೂ ಯಾರ ಮನೆಯಲ್ಲಾದರೂ ಹಾವು ಕಾಣಿಸಿಕೊಂಡು ಹೆಡೆಯಾಡಿಸುತ್ತಿತ್ತು.


ಕಳೆದೆರಡು ಚುನಾವಣೆಯಲ್ಲಿ ತನ್ನ ಪರ ಅಭ್ಯರ್ಥಿಯನ್ನು ಸೋಲಿಸಿದ ಕೆಳಗಿನ ಗಲ್ಲಿಯ ರಾಮಣ್ಣ ಮತ್ತು ತನ್ನ ಪಕ್ಕಕೂತೇ ತನ್ನ ಅನೇಕ ಧೋರಣೆಗಳನ್ನು ತಳ್ಳಿ ಹಾಕುವ ಗದಗೆಪ್ಪನ ಸೊಕ್ಕನ್ನು ಏಕಕಾಲಕ್ಕೆ ಮುರಿಯಲು ಅದ್ಭುತ ಯೋಜನೆ ಹಾಕಿದ ಸಂಗನಗೌಡರು, ಇದ್ದಕ್ಕಿದ್ದಂತೆ ಒಂದು ಬೆಳ್ಳಂಬೆಳಗು ಸಂಗೀತಾ ಮನೆಯಂಗಳದಲ್ಲಿ ಪ್ರತ್ಯಕ್ಷರಾದರು.

ನಯ ನಾಜೂಕಿನ ಮಾತುಗಳನ್ನು ಸವೆಸಿಯೇ ಮೀಸೆ ಬೆಳ್ಳಗಾಗಿಸಿಕೊಂಡ ಸಂಗನ ಗೌಡರಿಗೆ ಸಂಗೀತಾಳನ್ನು ಮತ್ತವಳ ಮುಗ್ಧೆ ತಾಯಿಯನ್ನು ತನ್ನಿಚ್ಛೆಯ ಹಾದಿಯ ಪಯಣಿ ಗರಾಗಿಸುವುದು ಕಷ್ಟವಾಗಲಿಲ್ಲ. ಒಂದಿಷ್ಟು ಆದರ್ಶ ಒಂದಿಷ್ಟು ಜಾಣತನ ಇರುವ ಸಂಗೀತಾಗೂ ಈ ಚುನಾವಣೆ ಯಲ್ಲಿ ಒಂದು ಪ್ರಯೋಗ ಮಾಡುವ ಮನಸ್ಸಾಯ್ತು.

ಪ್ರತಿ ಮನೆ ಮನೆಗೆ ಭೇಟಿಕೊಟ್ಟು ಮತದಾರರ ಮನಸ್ಸಿನ ಕದ ತಟ್ಟಿ ಮಾತಾಡುವುದರೊಂದಿಗೆ ಪಾದರಸದಂತೆ ಓಡಾಡಿದ ಸಂಗೀತಾ ಗ್ರಾಮ ಪಂಚಾಯ್ತಿಗೆ ಸದಸ್ಯಳಾಗಿಯೇ ಬಿಟ್ಟಳು. ಮತ ಯಾಚಿಸುವಾಗ ಜನರ ಹಸಿವಿನ ಸಂಕಟಗಳು ಬೆನ್ನಟ್ಟಿ ಕಾಡಿದ್ದಕ್ಕೆ ತನ್ನ ಅಧಿಕಾರದ ಅವಧಿಯಲ್ಲಿ ಏನಾದರೂ ಮಾಡುವ ಕನಸು ಹೆಣೆದಳು. ದುಡಿದು ಹೈರಾಣದ ಎಲುಬುಗಳ ಗೂಡಲ್ಲಿ ಬದುಕಿನಾಸರೆಯ ಬತ್ತಿ ಬೆಳಗುವಂತಾಗಿಸಲು ಆಲೋಚಿಸಿದಳು.

ಸಂಗನ ಗೌಡರಿಗೆ ತನ್ನ ಕ್ಯಾಂಡಿಡೇಟ್ ಆಯ್ಕೆಯಾಗಿ ರಾಮಣ್ಣ ಸೋತಿದ್ದು ಹಿಡಿಸಲಾರದ ಹಿಗ್ಗಾಗಿತ್ತು. ಮೀಸಲಾತಿಯ ಪಟ್ಟಿಯ ಪ್ರಕಾರ ಸಂಗೀತಾ ಅಧ್ಯಕ್ಷ ಗಿರಿಗೆ ಸ್ಪರ್ಧಿಸಿದಳು. ಬಹುಮತ ದಿಂದ ಆಯ್ಕೆಯೂ ಆದಳು. ಈಗ ಮಾತ್ರ ಯಾಕೋ ಗೌಡರಿಗೆ ಸಣ್ಣ ಕಸಿವಿಸಿಯಿಟ್ಟಿತು. ಸಂಗೀತಾ ಹಿಂದಿರುಗಿ ನೋಡುವ ಪ್ರಶ್ನೆಯೇ ಇರಲಿಲ್ಲ.

ಗ್ರಾಮ ಸಭೆಗಳಾಗಿಯೇ ಫಲಾನುಭವಿಗಳನ್ನು ಆರಿಸುವುದು. ಸರಕಾರಿ ಸವಲತ್ತುಗಳ ಪಟ್ಟಿ ತರಿಸುವುದು ಅಂತೆಲ್ಲ ದಿನ ಬೆಳಗಾದರೆ ಜನರ ಅಹವಾಲು ಕೇಳುವಲ್ಲಿ ಸಂಗೀತಾ ಮಗ್ನಳಾದಳು. ‘ಹಳ್ಳಿ ಮಂದಿಗೆ ಏಟ್ ಮಾಡಿದರೂ ತೃಪ್ತಿ ಇರಲ್ಲ. ಊರಿಗೆ ಮಾಡಿದ ಉಪಕಾರ ಇಲ್ಲ ಅಂತ ಸಂಗನ ಗೌಡರು ಸಂಗೀತಾಳಿಗೆ ತಿಳಿ ಹೇಳುತ್ತಾ ತನ್ನ ಕೈಯಾಗಿನ ಬಡಿಗೆ ಮಾಡಿಕೊಳ್ಳಲು ಶತ ಪ್ರಯತ್ನ ಮಾಡುತ್ತಿದ್ದರು. ಬರು ಬರುತ್ತಾ ಯಾಕೋ ಗೌಡರ ಕಿರಿಕಿರಿ ಜಾಸ್ತಿಯೆನಿಸಿ ಸ್ವಾಭಿಮಾನಿ ಸಂಗೀತಾ ತನ್ನ ಪಾಡಿಗೆ ತಾನು ಪಂಚಾಯ್ತಿ ಚಟುವಟಿಕೆಯಲ್ಲಿ ಮಗ್ನಳಾದಳು. ತಾ ಬೆಳೆಸಿದ ಹಕ್ಕಿ ತನ್ನನ್ನೇ ಕುಕ್ಕಿದಂತೆ ಭಾಸಗೊಂಡ ಸಂಗನಗೌಡರು ತಮ್ಮ ನಿಪುಣ ರಾಜಕಾರಣದ ದಾಳ ಉರುಳಿಸ ತೊಡಗಿದರು. ರಾತ್ರಿ ಹೊತ್ತಿನ ನಶೆಯ ಲೋಕಕ್ಕೆ ಉಳಿದ ಗ್ರಾಮ ಪಂಚಾಯತ್ ಸದಸ್ಯರನ್ನು ಸೆಳೆದರು. ಎಂಜಲು ಚೆಲ್ಲಿ, ಸವಿ ಮಾತನಾಡಿ ಅವರ ಮೆದುಳಿಗೆ ಮಂಕು ಬೂದಿ ಎರಚಿದರು. ಹೇಗಾದರೂ ಮಾಡಿ ‘ತಲಿ ಮ್ಯಾಲಿನ ಮಾಂಸ ಆರಲಾರದ, ಮಳಕಾಲ ಕೆಳಗ ಬುದ್ಧಿ ಇರೆ ಹೆಣ್ ಪೋರಿಗೆ ಮೂಲಿಗಿ ಕೂಡಿಸಬೇಕು’ ಅನ್ನುವ ಛಲ ಹೊತ್ತರು. ಈಗಾಗಲೇ ಗೆದ್ದ ಮೊದಲಿಗೆ ಅಧ್ಯಕ್ಷಳಾಗಿದ್ದಕ್ಕೆ ಹೊಟ್ಟೆ ಉರಿ ಹೊತ್ತ ಸದಸ್ಯರಿಗೆ ಈಗ ಗೌಡರ ಬಾಹ್ಯ ಬೆಂಬಲದಿಂದ ವಿಚಿತ್ರ ಖುಷಿ ಅನುಭವಿಸಿದರು. ‘ಹೆಂಗ್ಸೂರು ಎಲ್ಲಿರಬೇಕೋ ಅಲ್ಲೇ ಇರಬೇಕು. ರಾಜಕಾರಣ ಅಂದ್ರ ರೊಟ್ಟಿ ಮಾಡದಂಗ ಅಲ್ಲ...’ ಅನ್ನುವ ಮಾತುಗಳು ಪಂಚಾಯ್ತಿ ಸಭೆಗಳಲ್ಲಿ ಹಾರಾಡತೊಡಗಿದವು. ಪ್ರತಿ ಸಭೆಗಳು ಕಿರಿಕಿರಿಯ ಸವಾಲುಗಳಾಗ ತೊಡಗಿದವು. ಪಂಚಾಯ್ತಿ ಕಾರ್ಯದರ್ಶಿಯ ಠಿಕಾಣಾ ಗೌಡರ ಮನಿಯಾಗ ತೊಡಗಿತು. ಒಂದೇ ಒಂದು ಅಭಿವೃದ್ಧಿ ಕೆಲಸವಾಗದಂತೆ ಸದಸ್ಯರು ಅಡ್ಡಿ ಮಾಡತೊಡಗಿ ದರು. ಎಷ್ಟೆ ಹಿಮ್ಮತ್ತಿನಿಂದ ಮುನ್ನುಗ್ಗಿದರೂ ಹದ್ದುಗಳಂತೆ. ಎರಗುವ ಹುನ್ನಾರಗಳಿಗೆ ಕುತಂತ್ರಗಳಿಗೆ ಸಂಗೀತಾ ತತ್ತರಿಸಿ ಹೋದಳು. ಸುಳ್ಳು ಬಿಲ್ಲುಗಳು ಸೃಷ್ಟಿಯಾಗಿ ಲಕ್ಷಗಟ್ಟಲೇ ರೊಕ್ಕ ನುಂಗಿದಳೇ ಅಧ್ಯಕ್ಷಳು ಎಂಬ ಹಣೆ ಪಟ್ಟಿ ಬರುವಾಗ ಸಂಗೀತಾ ಅಕ್ಷರಶಃ ಹುಚ್ಚಿಯಾಗಿದ್ದಳು. ಸುಳ್ಳು ಆರೋಪಗಳನ್ನು ತಳ್ಳಿ ಹಾಕಲು ಸಿಟ್ಟೆದ್ದು ಕೂಗಾಡಿದ ದಿನ ಅವಳು ಮಾನಸಿಕ



ಒತ್ತಡಕ್ಕೆ ಒಳಗಾಗಿ ತಲೆಸುತ್ತಿ ಬಿದ್ದಳು.

ಇದ್ದೊಬ್ಬ ಮಗಳು ಬ್ಯಾಡಂದರೂ ರಾಜಕೀಯಕ್ಕಿಳಿದು ಈ ನಮೂನೆ ಹಾಳಾಗುವ ಪರಿಗೆ ಸಂಗೀತಾ ತಾಯಿ ಎದೆ ಒಡೆದು ಹೋದಳು. ‘ಮಗಳೇ ಕೂಲಿ ಮಾಡಿ ಹೊಟ್ಟೆ ತುಂಬ ಸ್ಕೋಮಾರಿ. ಈ ಊರ ದಂಧೆ ಬ್ಯಾಡ..’ ಅಂತ ಗೋಗರೆದಳು.

ಕನಿಷ್ಟ ಒಂದು ವರ್ಷದ ತನದ ಮಾತಿಲ್ಲದ ಹುಚ್ಚಿಯಂತಾಗಿ ಹೊರಸಿನ ಮೇಲೆ ಮಲಗಿದ ಸಂಗೀತಾ ಯಾರಾದರೂ ರಾಜಕೀಯದ ಮಾತನಾಡಿದರೇ ಸಾಕು ಕಲ್ಲು ಹೊಡೆಯಲು ಬೆನ್ನಟ್ಟುತ್ತಿದ್ದಳು. ಇಪ್ಪತ್ತು ರೂಪಾಯಿಯ ಕೂಲಿಗೆ ದಿನವೆಲ್ಲಾ ದುಡಿದ ಅವಳವ್ವ ಮಗಳನ್ನು ತಬ್ಬಿಕೊಂಡು ಕಲ್ಬುರ್ಗಿ ಬೆಂಗಳೂರು ಅಂತೆಲ್ಲ ಧಾವಿಸಿದಳು. ಕಡೆಗೂ ಆರೋಗ್ಯ ಸುಧಾರಿಸಿ ನೆಮ್ಮದಿಯ ನಿಟ್ಟುಸಿರು ಬಿಟ್ಟಳು. ಸಾವಿನ ಬಾಗಿಲು ತಟ್ಟಿ ಬಂದ ಸಂಗೀತಾ ಹಿಂದಿನ ಎಲ್ಲ ಕ್ರಿಯಾಶೀಲತೆಯನ್ನು ಕಳಚಿಕೊಂಡು ಮೌನದ ಗೌರಿಯಾದಳು. ಎಷ್ಟೋ ತಿಂಗಳುಗಳು ನಗುವಿಲ್ಲದೆ ಸರಿದು ಹೋಗಿದ್ದವು.....

ಸಂಗೀತಾ ನನ್ನ ಕೈ ಹಿಡಿದು ನಿಂತಿದ್ದಳು. ಅವಳ ಕಣ್ಣ ಹೊಳಪು ಮೆದುಳ ಚುರುಕು, ಎದೆಯ ರಾಗ, ಇಲ್ಲವಾಗಿಸಿದ ಕ್ರೂರ ಶಕ್ತಿಗಳ ಬಗ್ಗೆ ಮನಸ್ಸು ಹೇಸಿತು. ಪ್ರಜಾಪ್ರಭುತ್ವದ ಪರದೆಯೊಳಗಿನ ಪಾಳೇಗಾರಿ ಮೌಲ್ಯಗಳು ನಾಶವಾಗದ ಹೊರತು ನೈಜ ಪ್ರಜಾಪ್ರಭುತ್ವವೂ ದೊರೆಯದು. ಪಾಳೇಗಾರಿ ಪಳಿಯುಳಿಕೆಯೊಂದಿಗೆ ಕೈ ಜೋಡಿಸಿ ಹೊರಟ ಪಯಣ ಗುಡಿ ಸೇದು. ಮಾತ್ರ ಅಲ್ಲ. ಸಂಗ್ಗೀತಾಳಂಥವರನ್ನು ಮತ್ತೆ ಮತ್ತೆ ಪೀಡಿಸುತ್ತದೆ. ಬಲಿ ಕೇಳುತ್ತಾರೆ.

ಈ ಬಲಿಯು ಪಟ್ಟಿಯಲ್ಲಿ ಅಸಂಖ್ಯಾತ ಮಹಿಳೆಯರು, ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕಿನ ಮಂಜುಳ (ತಾಲ್ಲೂಕು ಪಂಚಾಯತ್ ಅಧ್ಯಕ್ಷ) ತನ್ನದೇ ಪಕ್ಷದವರು. ಕೊಡುವ ಮಾನಸಿಕ ಹಿಂಸೆಗೆ ರೋಸಿ ಪತ್ರ ಬರೆದಿಟ್ಟು ನೇಣಿಗೆ ಶರಣಾದದ್ದು ಕ್ರೂರ ವ್ಯಂಗ್ಯವಲ್ಲದೆ ಮತ್ತೇನು...? ಶಾಸಕನ ಕಿರುಕುಳ ಅಪಮಾನಕ್ಕೆ ನೊಂದು ಆತ್ಮಹತ್ಯೆಗೆ ಯತ್ನಿಸಿದ ಅಂಗನವಾಡಿ ಕಾರ್ಯಕರ್ತೆ ಪದ್ಮಾ ಎಸ್.ಡಿ.ಎಂ.ಸಿ. ಅಧ್ಯಕ್ಷರು ಕೊಡುವ ಅಮಾನವೀಯ ಕಿರಕಿರಿಗೆ ಬೇಸತ್ತು ಸತ್ತೇ ಹೋದ ಶಿಕ್ಷಕಿ ಪ್ರೇಮಾ, ಒಂದೇ ಎರಡೇ ಸಮಾಜದ ಕಾರ್ಯ ಚಟುವಟಿಕೆಯೊಂದಿಗೆ ಕೈ ಜೋಡಿಸಿ ದುಡಿಯುವ ಮಹಿಳೆಯರ ಸ್ಥಿತಿಗತಿಯ ಬಗ್ಗೆ ಅಧ್ಯಯನ ಮಾಡಿದರೆ ಕಣ್ಣ ಕುಣಿಯಲ್ಲಿ ವೇದನೆಯ ಹನಿ ಮುಡುಗಟ್ಟುತ್ತದೆ. ಮೆದುಳ ಮೂಲೆಯಲ್ಲಿ ಪ್ರತಿಭಟನೆಯ ಕಿಚ್ಚು ಲಿಗಿ ಲಿಗಿ ಎನ್ನುತ್ತದೆ. ಅಸಂಖ್ಯಾತ ಬಲಿಗಳು ಅಸಂಖ್ಯಾತ ಹೋರಾಟಗಳು, ಎಣೆಯಿಲ್ಲದ ತ್ಯಾಗದಿಂದಲೇ ಚರಿತ್ರೆ ಅಭಿವೃದ್ಧಿ ನಡೆದು ಬಂದಿದೆ. ಮತ್ತೆ ಮತ್ತೆ ಸಂಘರ್ಷದ ಅಲೆಗಳು ಅಪ್ಪಳಿಸಿ ಸಾಧನೆಯ ಹಾದಿ ಹಸನಾಗಿದೆ. ಹಕ್ಕುಗಳ ದಿಕ್ಕು ತೆರೆದಿದೆ.

ನಾನು ಬಹಳ ಹೊತ್ತು ಸಂಗೀತಾಳೊಂದಿಗೆ ಮಾತಾಡಿದೆ. ದುಡಿಯುವ ಜನತೆಯ ಪರವಾದ ರಾಜಕಾರಣ ಮಾಡಲು ಒಂದು ಬಲಿಷ್ಠ ಸಂಘಟಿತ ಶಕ್ತಿಯ ಜರೂರಿ ಕುರಿತು ಹೇಳಿದೆ. ಸೋಲೆಂಬುದು ಗೆಲುವಿನ ಮೆಟ್ಟಿಲಾಗಲೇಬೇಕಲ್ಲ. ಒಂಟಿಯಾಗಿದ್ದ ಸಂಗೀತಾಳನ್ನು ಹಿಮ್ಮೆಟ್ಟಿಸುವುದು ಸುಲಭವಾಗಿರ ಬಹುದು. ಜನ ಸಮೂಹದೊಂದಿಗಿನ ವ್ಯಕ್ತಿಯನ್ನು ...? ಸೈದ್ಧಾಂತಿಕ ಬದ್ಧತೆಯ ವ್ಯಕ್ತಿಯನ್ನು ಹೇಗೆ ಹಿಮ್ಮೆಟ್ಟಿಸುವರು...? ದೀರ್ಘ ಚರ್ಚೆಯ ತರುವಾಯ ಸಂಗೀತಾ, ನಾನೇ ಅಚ್ಚರಿಪಡುವಷ್ಟು ಚೇತರಿಸಿಕೊಂಡು, ‘ಅಕ್ಕರೇ, ನಿಮ್ಮಂಥ ಸಂಘದೋರು ಮೊದಲೇ ಸಿಕ್ಕಿದರ ನಾನ್ಯಾಕ ಹುಚ್ಚಿಯಾಗ್ತಿದ್ದೇ....? ಈಗನೂ ನಾವನ್ ಹಿಂಜರ್ಯಾಂಗಿಲ್ಲರೀ..... ನಮ್ಮೂರಾಗ ಸಂಘ ಕಟ್ತೇನಿ ನೀವು ಬರಬೇಕ್ರಿ.... ನಾ ಸೋಲಾ ಹೆಣ್ಣು ಮಗಳಲ್ಲ ಅಂತ ಸಾಬೂತು ಮಾಡ್ತೀನ್ರಿ....’ ಅಂತ ಛಲದಿಂದ ಮಾತಾಡಿದ ಸಂಗೀತಾಳ ಕಣ್ಣಲ್ಲಿ ಬೆಳಗಿನ ಜಾವದ ಬೆಳ್ಳಿ ಚುಕ್ಕಿಯಂಥ ಬೆಳಕು ಪುನಃ ಮಿನುಗತೊಡಗಿತು.

○

ಪಶ್ಚಿಮ ಬಂಗಾಳ ಎಡರಂಗಕ್ಕೆ 30 ವರ್ಷಗಳು ಆಚರಣೆಗೆ ಸಿದ್ಧತೆ

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರಕ್ಕೆ ಜೂನ್ ತಿಂಗಳಲ್ಲಿ 30 ವರ್ಷಗಳು ತುಂಬುತ್ತಿರುವ ಸಂದರ್ಭಾಚರಣೆಯನ್ನು ಆಚರಿಸಲು ನಿರ್ಧರಿಸಲಾಗಿದೆ. ಮತ್ತು ದೇಶದಾದ್ಯಂತ ಸರ್ಕಾರದ ಮಹತ್ವದ ಸಾಧನೆಗಳನ್ನು ಪ್ರಚುರಪಡಿಸಲಾಗುವುದು.

ಹಾಸನದಲ್ಲಿ ಪೊಲೀಸ್ ದರ್ಬಾರ್ ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್!

ಹಾಸನ ನಗರ ಪೊಲೀಸರು ಕಾರಣವಿಲ್ಲದೆ ವಿದ್ಯಾರ್ಥಿಗಳ ಮೇಲೆ ಮುಗಿಬಿದ್ದಿದ್ದಾರೆ. ಅಸಮರ್ಪಕ ಬಸ್‌ಪಾಸ್ ವಿತರಣೆಯನ್ನು ಪ್ರಶ್ನಿಸಿದ್ದನ್ನೇ ನೆಪವಾಗಿಟ್ಟುಕೊಂಡು ವಿದ್ಯಾರ್ಥಿಗಳನ್ನು ಬಸ್‌ನಿಲ್ದಾಣದಲ್ಲಿ ಅಟ್ಟಾಡಿಸಿಕೊಂಡು ಬಡಿದು ಪೌರುಷ ಮೆರೆದಿದ್ದಾರೆ ಹಾಸನ ಪೊಲೀಸರು.



ಎಸ್‌ಐ ಯೋಗೇಶ್ ದಾಳಿಗೆ ಜನ ದಿಕ್ಕಾಪಾಲು



ಮಂಜುನಾಥ್‌ರನ್ನು ಎಳೆದೊಯ್ಯುತ್ತಿರುವ ಯೋಗೇಶ್



ಲಿಂಗರಾಜು ಮೇಲೆ ಹಿಂದಿನಿಂದ ಅಮಾನುಷ ಹಲ್ಲೆ

ಆಗಿದ್ದಿಷ್ಟೇ, ಹಾಸನ ನಗರದಲ್ಲಿ ಸುಮಾರು 6000 ನವೀಕೃತ ಬಸ್‌ಪಾಸ್‌ಗಳನ್ನು ವಿತರಿಸಬೇಕಾದ ಸಾರಿಗೆ ಸಂಸ್ಥೆ ಹೆಚ್ಚುವರಿ ಕೌಂಟರ್‌ಗಳನ್ನು ತೆರೆಯದೇ ಒಂದೇ ಕೌಂಟರ್‌ನಲ್ಲಿ ವಿತರಿಸುತ್ತಿತ್ತು. ವಿದ್ಯಾರ್ಥಿಗಳು ಬೆಳಿಗ್ಗೆಯಿಂದ ಸಂಜೆಯವರೆಗೂ ಸಾಲಿನಲ್ಲಿ ನಿಂತು ಬಸವಳಿದು ಹೋಗುತ್ತಿದ್ದರು. ಇದು ಸಾಲದೆಂದು ಲ್ಯಾಮಿನೇಶನ್ ಚಾರ್ಜ್ ಎಂದು ಹೇಳಿ 20 ರೂಪಾಯಿಗಳನ್ನು ಹೆಚ್ಚುವರಿಯಾಗಿ ವಸೂಲು ಮಾಡುತಿತ್ತು. ಅದೂ ಯಂತ್ರ ಕೆಟ್ಟಿದೆಯೆಂದು ಹೇಳಿ ಲ್ಯಾಮಿನೇಷ್ ಆಗದ ಪಾಸ್‌ಗಳನ್ನೇ ವಿತರಿಸುತ್ತಿತ್ತು!. ಸರ್ಕಾರವೇ ಎಲ್ಲವನ್ನೂ ಸೇರಿಸಿ ಒಂದು ದರವನ್ನು ನಿಗದಿ ಮಾಡಿದ್ದರೂ ಹಾಸನ ಸಾರಿಗೆ ಸಂಸ್ಥೆ ಮಾತ್ರ 'ಎಕ್ಸ್‌ಟ್ರಾ ಕವಾಯಿ'ಗೆ ಇಳಿದಿದೆ - ಕಣ್ಣಮುಂದೆಯೇ ಲಕ್ಷಾಂತರ ರೂಪಾಯಿ ಲೂಟಿ!

ಮೇ 2 ರಂದು ಸಂಜೆಗೆ ಕೌಂಟರ್ ಮುಚ್ಚಿ, ಪಾಸ್ ವಿತರಣೆ ಮುಗಿಯಿತು ಎಂದ ಸಾರಿಗೆ ಸಂಸ್ಥೆ ಮೇಲೆ ಸಹಜವಾಗೇ ವಿದ್ಯಾರ್ಥಿಗಳು ಸಿಟ್ಟಿಗೆದ್ದಿದ್ದಾರೆ. ಪಾಸ್ ಸಿಗದ ಸಾಕಷ್ಟು ವಿದ್ಯಾರ್ಥಿಗಳು ಆತಂಕಕ್ಕೀಡಾಗಿ ಸ್ಥಳದಲ್ಲಿಯೇ ಪ್ರತಿಭಟನೆ ಆರಂಭಿಸಿದ್ದಾರೆ. ಮೇಲಧಿಕಾರಿಗಳು ಬಂದು ಸೂಕ್ತ ಭರವಸೆ ನೀಡುವವರೆಗೂ ಜಾಗ ಬಿಟ್ಟು ಕದಲುವುದಿಲ್ಲವೆಂದು ಪಟ್ಟು ಹಿಡಿದಿದ್ದಾರೆ. ಅಷ್ಟೊತ್ತಿಗಾಗಲೇ ವಿಷಯ ತಿಳಿದ ಸಬ್‌ಇನ್ಸ್‌ಪೆಕ್ಟರ್ ಡಿ.ಯೋಗೇಶ್ ದಾಂಧಲೆಕೋರರನ್ನು ಮಟ್ಟಹಾಕುವ ವೀರಾಧಿವೀರನಂತೆ ಪೋಜು ಕೊಡುತ್ತಾ ತನ್ನ ದಂಡಿನೊಂದಿಗೆ ಆಗಮಿಸಿದ್ದಾನೆ. ಸಾರಿಗೆ ಸಂಸ್ಥೆ ಮತ್ತು ವಿದ್ಯಾರ್ಥಿಗಳ ನಡುವಿನ ಸಮಸ್ಯೆಗೆ ಈತ ವಿನಾಕಾರಣ ಮೂಗು ತೂರಿಸಿದ್ದಾನೆ.

ಸಾರಿಗೆ ಅಧಿಕಾರಿಗಳು ಪಾಸ್‌ಗಳನ್ನು ಸಮರ್ಪಕವಾಗಿ ವಿತರಿಸುವುದಾಗಿ ಭರವಸೆ ನೀಡಿದ ಮೇಲೆ ವಿದ್ಯಾರ್ಥಿಗಳು ತಮ್ಮಪಾಡಿಗೆ ತಾವು ಚದುರಿ ಹೋಗುತ್ತಿದ್ದಾಗ, ತನ್ನ ಪೌರುಷದ ಪರಿಚಯ ಯಾರಿಗೂ ಆಗಲೇ ಇಲ್ಲವೆಂದು ಭಾವಿಸಿದ ಡಿ.ಯೋಗೇಶ್ ತಾನೇ ಲಾಠಿ ಹಿಡಿದು ವಿದ್ಯಾರ್ಥಿಗಳ ಮೇಲೇರಿ ಹೋಗಿದ್ದಾನೆ. ಎಲ್ಲವೂ ಮುಗಿಯಿತೆಂದು ಲಾಠಿ ಬಗಲಲಿಟ್ಟು ವಿರಮಿಸುತ್ತಿದ್ದ ಪೊಲೀಸ್‌ಪಡೆ ತಮ್ಮ 'ದಂಡ'ನಾಯಕನ 'ದರ್ಬಾರ್' ನೋಡಿ ಅವರೂ ಲಾಠಿ ಬೀಸತೊಡಗಿದ್ದಾರೆ. ಘಟನೆಗೆ ಸಂಬಂಧವೇ ಇಲ್ಲದವರಿಗೂ ಬಡಿದಿದ್ದಾರೆ. ಎಸ್‌ಐ ಯೋಗೇಶ್ ಅಂತೂ ಲಾಂಗ್ ಹಿಡಿದ ರೌಡಿಯಂತೆ ನಿಲ್ದಾಣದ ತುಂಬಾ ಠಳಾಯಿಸುತ್ತಾ ವಿದ್ಯಾರ್ಥಿಗಳಿಗಿರಲಿ, ಸಾರ್ವಜನಿಕನ್ನೂ ಬೆಸ್ತು ಬೀಳಿಸಿದ್ದಾನೆ ಈ ಭೂಪ! ಇಂತಹವನಿಗೆ ನಮ್ಮ ಘನ ಸರ್ಕಾರ ಮುಖ್ಯಮಂತ್ರಿ ಪದಕ ಬೇರೆ ನೀಡಿ ಸನ್ಮಾನಿಸಿದೆ!

ವಿಷಯ ತಿಳಿದು ಎಸ್‌ಎಫ್‌ಐ ಮುಖಂಡರಾದ ಮಂಜುನಾಥ ಮತ್ತು ಲಿಂಗರಾಜು ಸಮಸ್ಯೆ ಏನೆಂದು ವಿಚಾರಿಸಲು ನಿಲ್ದಾಣಕ್ಕೆ ಆಗಮಿಸಿದ್ದಾರೆ. ವಿದ್ಯಾರ್ಥಿಗಳ ಬಗ್ಗೆ ನೈಜ ಕಾಳಜಿಯೊಂದಿರುವ



ಪೊಲೀಸರಿಂದ ತೀವ್ರ ಹಲ್ಲೆಗೊಳಗಾಗಿರುವ ಎಸ್‌ಎಫ್‌ಐ ಮುಖಂಡರಾದ ಲಿಂಗರಾಜು ಮತ್ತು ಮಂಜುನಾಥ್

ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ. ಹಾಸನದಲ್ಲಿ ವಿದ್ಯಾರ್ಥಿಗಳ ಪರವಾಗಿ ಹಲವಾರು ಬಾರಿ ದನಿಯೆತ್ತಿದ್ದ ಎಸ್‌ಎಫ್‌ಐ ಜಿಲ್ಲಾಡಳಿತ ಮತ್ತು ಪೊಲೀಸರ ಕೆಂಗಣ್ಣಿಗೆ ಗುರಿಯಾಗಿತ್ತು. ಇದೇ ಸಂದರ್ಭವನ್ನು ಕಾಯುತ್ತಿದ್ದವರಂತೆ ಡಿ.ಯೋಗೇಶ್ ಮತ್ತು ಅವರ ಸಿಬ್ಬಂದಿ ಮಂಜುನಾಥ್ ಮತ್ತು ಲಿಂಗರಾಜುರವರನ್ನು ಸುತ್ತುವರಿದು ಅವರಿಗೆ ಮಾತನಾಡಲೂ ಅವಕಾಶ ಕೊಡದಂತೆ ಸಾರ್ವಜನಿಕವಾಗಿಯೇ ಅಮಾನುಷವಾಗಿ ಥಳಿಸಿದ್ದಾರೆ. ಇತರ ವಿದ್ಯಾರ್ಥಿಗಳು ಅವರ ಸಹಾಯಕ್ಕೆ ಬರದಂತೆ ಲಾಠಿ ಚಾರ್ಜ್ ಮಾಡಿ ಓಡಿಸಿದ್ದಾರೆ. ನಂತರ ಪೊಲೀಸ್ ಠಾಣೆಗೆ ಮುಖಂಡರಿಬ್ಬರನ್ನೂ ಎಳೆದೊಯ್ದು ಅಲ್ಲಿಯೂ ತಮ್ಮ ಕ್ರೌರ್ಯ ಮೆರೆದಿದ್ದಾರೆ. ವಿಷಯ ತಿಳಿದು ವಿಚಾರಿಸಲು ಹೋದ ಕಾನೂನು ಕಾಲೇಜಿನ ಪ್ರಾಧ್ಯಾಪಕರಾದ ಶ್ರೀನಿವಾಸ್ ರವರನ್ನು ಅವಾಚ್ಯ, ಅಶ್ಲೀಲ ಪದಗಳಿಂದ ಬೈಯ್ದು ಕಳುಹಿಸಿದ್ದಾರೆ.

ಎಸ್‌ಎಫ್‌ಐ ಸಂಘಟನೆ ಜಿಲ್ಲೆಯ ಇತರ ಪ್ರಗತಿಪರ ಸಂಘಟನೆಗಳಾದ ಡಿವೈಎಫ್‌ಐ ಮತ್ತು ಸಿಐಟಿಯುನೊಂದಿಗೆ ಸೇರಿ ಮೇಲಧಿಕಾರಿಗಳ ಮೇಲೆ ಒತ್ತಡ ಹೇರಿ ಮಂಜುನಾಥ್ ಮತ್ತು ಲಿಂಗರಾಜು ರವರನ್ನು ಬಿಡುಗಡೆ ಮಾಡಿಸಿದ್ದಲ್ಲದೆ ಮಾರನೇ ದಿನವೇ ಡಿ.ಯೋಗೇಶ್ ಅವರನ್ನು ಅಮಾನತ್ತುಗೊಳಿಸ ಬೇಕೆಂದು ಒತ್ತಾಯಿಸಿ ಬೃಹತ್ ಪ್ರತಿಭಟನೆ ನಡೆಸಿವೆ. ಎಸ್‌ಎಫ್‌ಐ ಪೊಲೀಸ್ ದೌರ್ಜನ್ಯದ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆ ನಡೆಸಿತು.

ಸಾರ್ವಜನಿಕರಿಗೆ ಯಾವುದೇ ತೊಂದರೆ ನೀಡದೆ, ರಸ್ತೆ ತಡೆ ಅಥವಾ ಕಲ್ಲು ತೂರಾಟದಂತಹ ದಾಂಧಲೆಗಳಿಗೆ ಇಳಿಯದೆ ಶಾಂತಿಯುತವಾಗಿಯೇ ತಮ್ಮ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತಿದ್ದ ವಿದ್ಯಾರ್ಥಿಗಳ ಮೇಲೆ ವಿನಾಕಾರಣ ಧಾಳಿ ನಡೆಸಿದ, ಎಸ್‌ಎಫ್‌ಐ ಸಂಘಟನೆಯ ಮುಖಂಡರನ್ನು, ಅವರ ಜನಪರ ಕಾಳಜಿಯನ್ನು ಮಟ್ಟಹಾಕಲೇಬೇಕೆಂಬ ದುರುದ್ದೇಶದಿಂದ ಅಮಾನುಷವಾಗಿ ವರ್ತಿಸಿದ ಗೂಂಡಾ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಯೋಗೇಶ್‌ಗೆ ತಕ್ಕ ಶಿಕ್ಷೆಯಾಗಲೇಬೇಕು.


■ ವರದಿಗಾರ

ಕೋಲಾರ : ಕಾಂಗ್ರೆಸ್ ಒಳ ಜಗಳದಲ್ಲಿ ಜನಹಿತವೆಲ್ಲಿ?

ವಿಭಜಿಸಿ ಆಳುವ ನೀತಿಯನ್ನು ಅನುಸರಿಸುತ್ತಾ ಕೋಲಾರ ರಾಜಕಾರಣದಲ್ಲಿ ಪ್ರಬಲವಾಗಿ ಬೇರೂರಿರುವ ಶಾಸಕ ಕೆ.ಶ್ರೀನಿವಾಸಗೌಡರ ಬುಡಕ್ಕೆ ಇಂದು ನೀರು ಹರಿಯುತ್ತಿದೆ. 2004ರಲ್ಲಿ ಅಧಿಕಾರದಾಸೆಗೆ ಕಾಂಗ್ರೆಸ್ ಪಾಳಯಕ್ಕೆ ಸೇರ್ಪಡೆಯಾದ ಶ್ರೀನಿವಾಸಗೌಡ ಮತ್ತು ಬಳಗದವರು ಪಕ್ಷದೊಳಗಿನ ಜಾತಿವಾರು ಪ್ರಾಬಲ್ಯ, ಹೈಕಮಾಂಡ್ ಸಂಸ್ಕೃತಿ, ಹಳೆ ತಲೆಮಾರಿನ ಕಾಂಗ್ರೆಸ್ ನಾಯಕರು ಪಿತೂರಿಗಳಿಂದ ತಲ್ಲಣಿಸಿದ್ದು ಕಾಂಗ್ರೆಸ್ ಪಕ್ಷ ಒಡೆದ ಮನೆಯಾಗಿದೆ. ಗೌಡರ ಭವಿಷ್ಯದ ಮೇಲೆ ಕಾರ್ಮೋಡ ಆವರಿಸಿದೆ.

ಕೋಲಾರ ತಾಲೂಕಿನ ಅಲ್ಪಸಂಖ್ಯಾತರು, ಕುರುಬರು, ಪರಿಶಿಷ್ಟ ಜಾತಿ ವರ್ಗಗಳ ಮಧ್ಯೆ ಅದರ ಮುಖಂಡರಿಗೇ ಗೊತ್ತಿಲ್ಲದಂತೆ ಗೌಡರು ಹುಳಿ ಹಿಂಡಿದರು. ಒಂದೇ ಜಾತಿಯಲ್ಲಿ ಹಲವು ಗುಂಪುಗಳನ್ನು ವಿಂಗಡಿಸುತ್ತಾ ಅವರವರಲ್ಲೇ ಕಿಚ್ಚು ಹಬ್ಬಿಸುತ್ತಾ ತಮ್ಮ ಸ್ಥಾನಕ್ಕೆ ಯಾವುದೇ ದಕ್ಕೆಯಾಗದಂತೆ ನೋಡಿಕೊಂಡಿದ್ದರು. ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್‌ಗೆ ಸೇರಿದ ಗೌಡರು ಅಲ್ಲಿಯೂ ಇದೇ ನೀತಿ ಅನುಸರಿಸುತ್ತಿದ್ದಾರೆ. ಕೋಲಾರ ನಗರದಲ್ಲಿ ಪ್ರಾಬಲ್ಯ ಹೊಂದಿರುವ ಅಲ್ಪಸಂಖ್ಯಾತರು, ಕುರುಬರು, ಬಣಜಿಗರು ಮತ್ತು ಪರಿಶಿಷ್ಟ ಜಾತಿಗಳ ಮಧ್ಯೆ ಶ್ರೀನಿವಾಸ ಗೌಡ ಬಿತ್ತಿರುವ ದ್ವೇಷದ ಬೀಜಗಳು ಇನ್ನೂ ಹಲವಾರು ವರ್ಷ ಫಲ ನೀಡುತ್ತವೆ. ಆದರೆ ಈ ಜಾತಿಗಳಲ್ಲೇ ಇರುವ ಬಡವರು ಮತ್ತು ಹಿಂದುಳಿದವರ ಬಗೆಗೆ ಅವರ ಬದುಕಿನ ಬವಣೆಯ ಬಗ್ಗೆ ಇವರ್‍ಯಾರು ತಲೆ ಕೆಡಿಸಿಕೊಂಡಿಲ್ಲ.

ಮೊದಲೆ ಒಡೆದ ಮನೆಯಾಗಿದ್ದ ಕಾಂಗ್ರೆಸ್‌ನಲ್ಲಿ ಇತ್ತೀಚೆಗೆ ಉಂಟಾಗಿರುವ ವೈಷಮ್ಯಗಳು ವೇಗವರ್ಧಕಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಮೂಲತಃ ಕೋಲಾರದವರಲ್ಲದ ವರ್ತೂರು ಪ್ರಕಾಶ್ ಗೌಡರ ಪಾಲಿಗೆ ಯಮಧರ್ಮನಾಗಿ ಬಂದಿಳಿದಿದ್ದಾನೆ. ರಾಜಕೀಯದಲ್ಲಿ ಅಷ್ಟೇನೂ ನಿಪುಣನಲ್ಲದಿದ್ದರೂ ಪಡೆಯುತ್ತಿರುವ ಪ್ರಚಾರ ನೋಡಿದರೆ ಯಾವ ರಾಜಕಾರಣಿಯಾದರೂ ಬೆಚ್ಚಿ ಬೀಳುತ್ತಾನೆ. ಕುರುಬ ಜನಾಂಗಕ್ಕೆ ಸೇರಿದ ಪ್ರಕಾಶ್ ಬಳಿ ಇರುವ ಹಣ ಬ್ಲಾಕೊ ವೈಟೊ ಗೊತ್ತಿಲ್ಲ. ಆದರೆ ಬಿಸ್ಕಿಟ್‌ಗಳ ರೂಪದಲ್ಲಿ ಹಾಕುತ್ತಿರುವುದಂತೂ ಸತ್ಯ. ಅದಕ್ಕಾಗಿ ಸಣ್ಣಪುಟ್ಟ, ಒಳಗೊಳಗೇ ಭಾರಿ ಪುಡಾರಿಗಳೂ ಜೊಲ್ಲು ಸುರಿಸುತ್ತಾ ಕಾಯುತ್ತಿರುವುದು ಸತ್ಯ. ಏನೇ ಆದರೂ ಕೋಲಾರ ತಾಲ್ಲೂಕಿನಲ್ಲಿ ಹವಾ ಎಬ್ಬಿಸಿರುವುದಂತೂ ನಿಜ.



ಶ್ರೀನಿವಾಸಗೌಡ

ಹತ್ತುಹದಿನೈದು ವರ್ಷಗಳಿಂದ ಕಾಂಗ್ರೆಸ್‌ಗೆ ನಿಷ್ಠೆ ತೋರಿದ ಹಲವಾರು ಮಂದಿ ಇದುವರೆಗೂ ಯಾವುದೇ ಅಧಿಕಾರ ಹಣ ಇಲ್ಲದೆ ಹಪಹಪಿಸುತ್ತಿದ್ದಾರೆ. ವರ್ತೂರು ಪ್ರಕಾಶ್ ನೀರಿನಂತೆ ಹಣ ಚೆಲ್ಲುತ್ತಾ ದೊಡ್ಡ ಪ್ರಚಾರ ಪಡೆದುಕೊಳ್ಳುತ್ತಿದ್ದಾನೆ. ಈ ಬಗ್ಗೆ ಕಾಂಗ್ರೆಸ್ ಮೇಲ್‌ಸಮಿತಿಗೆ ದೂರು ಹೋಗಿ ನಿಯಂತ್ರಣ ಬಿದ್ದಿದೆ. ಕೋಲಾರದಲ್ಲಿ ಒಕ್ಕಲಿಗ ಸಮುದಾಯದವರೇ ಶಾಸಕರಾಗುತ್ತಿದ್ದಾರೆ ಹಾಗಾಗಿ ಹಿಂದುಳಿದವರಿಗೂ ಅವಕಾಶ ನೀಡಿ ಇಲ್ಲವೇ ಮುಸ್ಲಿಮರಿಗೆ ನೀಡಿ ಎಂಬ ತಂತ್ರವನ್ನು ಗಾಳಿಗೆ ತೇಲಿ ಬಿಟ್ಟಿದ್ದಾನೆ. ಇದರ ಆಧಾರದಲ್ಲಿ ಹಿಂದುಳಿದವರನ್ನು ಐಕ್ಯಗೊಳಿಸುವ ತಂತ್ರ ರೂಪಿಸಿದ್ದಾನೆ. ರಾಜಕೀಯ ತಳದಲ್ಲಿ ಈಜುತ್ತಿರುವ ಶ್ರೀನಿವಾಸ ಗೌಡರಿಗೆ ಒಂದೆಡೆ ಅಪಾಯದಂತೆ ಕಂಡರೂ ಮತ್ತೊಂದೆಡೆ ವರವಾಗಿ ಪರಿಣಮಿಸಿದಂತಿಗೆ. ವರ್ತೂರು ಪ್ರಕಾಶ್ ವಿರುದ್ಧ ಒಕ್ಕಲಿಗರನ್ನು ಎತ್ತಿಕಟ್ಟಲು ಗೌಡರು ಇದನ್ನು ನೆಪವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಈಗಾಗಲೇ ಇಂಥ ಪ್ರಕ್ರಿಯೆಗಳು ಆರಂಭವಾಗಿದೆ. ತಮ್ಮ ದುರಾಡಳಿ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮರೆಮಾಚಲು ಇದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

ವಿಧಾನ ಸಭೆ ಚುನಾವಣೆಯಲ್ಲಿ ಕೋಲಾರ ನಗರದ ಮತದಾರರು ನಿರ್ಣಾಯಕ ಪಾತ್ರ ವಹಿಸಲಿದ್ದು, ನಗರಸಭೆ ಚುನಾವಣೆಯಲ್ಲಿ ತನ್ನ ಅನುಯಾಯಿಗಳಿಗೆ ಅನುಕೂಲವಾಗುವಂತೆ ವಾರ್ಡ್‌ಗಳ ಮೀಸಲಾತಿ ನಿಗದಿಪಡಿಸುವಲ್ಲಿ ಗೌಡರು ಯಶಸ್ವಿಯಾಗಿದ್ದಾರೆ. ಇದರಿಂದ ಕಾಂಗ್ರೆಸ್‌ನಲ್ಲಿ ಭಾರಿ ಒಡಕು ಉಂಟಾಗಲಿದ್ದು ಹೆಚ್ಚಿನ ಸಂಖ್ಯೆಯ ಬಂಡಾಯ ಅಭ್ಯರ್ಥಿಗಳ ಸ್ಪರ್ಧೆಗಿಳಿಯುವ ಸಂಭವವಿದೆ. ಇವರಿಗೆ ನೆರವು ನೀಡುವುದಾಗಿ ಪ್ರಕಾಶ್ ಭರವಸೆ ಸಹ ನೀಡಿದ್ದಾನಂತೆ. ಇವರಿಬ್ಬರ ನಡುವಿನ ಕಚ್ಚಾಟದಿಂದ ಕಾಂಗ್ರೆಸ್‌ನಲ್ಲಿ ಒಕ್ಕಲಿಗರು ಮತ್ತು ಇತರ ಜನಾಂಗಗಳ ನಡುವೆ ಭಾರಿ ಭಿನ್ನಾಭಿಪ್ರಾಯಗಳು ತಲೆದೋರಿವೆ.

ವರ್ತೂರ್ ಪ್ರಕಾಶ್‌ಗೆ ಕಾಂಗ್ರೆಸ್ ಟಿಕೆಟ್ ದಕ್ಕಿದರೆ ಜೆಡಿಎಸ್‌ಗೆ ಪಕ್ಷಾಂತರ ಮಾಡುವ ಯೋಜನೆಯೂ ಶ್ರೀನಿವಾಸ ಗೌಡರ ಪಾಳಯದಲ್ಲಿದೆಯಂತೆ. ಸದ್ಯ ಜೆಡಿಎಸ್ ಕೋಲಾರದಲ್ಲಿ ಲೆಕ್ಕಕ್ಕುಂಟು ಆಟಕ್ಕಿಲ್ಲದ ಪಕ್ಷವಾಗಿದೆ. ಅಲ್ಲಲ್ಲಿರುವ ಬೆರಳೆಣಿಕೆಯಷ್ಟು ಮುಖಂಡರು ಎಲ್ಲಿ ಯಾವ ಹಣ ಬರುತ್ತದೋ ಎಂದು ಹಾತೊರೆಯುತ್ತಿರುತ್ತಾರೆ. ಮತ್ತೊಂದು ಅರ್ಥದಲ್ಲಿ ಹೇಳುವುದಾದರೆ ಜೆಡಿಎಸ್ ಮುಖಂಡರು ಮಾರಾಟಕ್ಕಿದ್ದಾರೆ ಎಂಬಂತಾಗಿದೆ. ಶ್ರೀನಿವಾಸ ಗೌಡರನ್ನು ಬಿಜೆಪಿಗೆ ಸೆಳೆಯುವ ಪ್ರಯತ್ನಗಳು ನಡೆಯುತ್ತಿರುವುದನ್ನು ತಳ್ಳಿಹಾಕುವಂತಿಲ್ಲ.

• ಅಷ್ಟು



ಗೋಮಾಳ ಜಮೀನು ಸಾಗುವಳಿ ಸಕ್ರಮಕ್ಕೆ ಆದೇಶಿಸಿ ನೀಡಿರುವ ಹೈಕೋರ್ಟ್ ತೀರ್ಪನ್ನು ಸರ್ಕಾರ ಜಾರಿ ಮಾಡಲು ಮುಂದಾಗಿಲ್ಲ, ನಿರ್ಲಕ್ಷಿಸಿದೆ.

ಗೋಮಾಳ ಸಾಗುವಳಿ ಸಕ್ರಮಕ್ಕೆ ಆದೇಶ

ಹೈಕೋರ್ಟ್ ತೀರ್ಪನ್ನು ನಿರ್ಲಕ್ಷಿಸುತ್ತಿರುವ ಸರ್ಕಾರ

ನ್ಯಾಯಯುಕ್ತ ಎನಿಸಿರುವ ಗೋಮಾಳ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ರೈತಾಪಿ ವರ್ಗಕ್ಕೆ ಆ ಜಮೀನನ್ನು ಖಾಯಂ ಮಾಡುವ ಕುರಿತು ಪರಿಶೀಲನೆ ನಡೆಸುವಂತೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಹೈಕೋರ್ಟ್ ಆದೇಶಿಸಿದೆ. (ಪ್ರ.ವಾ.23 ನವೆಂಬರ್ 2006).

ರಾಜ್ಯದಲ್ಲಿರುವ ಎಲ್ಲ ಗೋಮಾಳ ಜಮೀನನ್ನು ಗುರುತಿಸಿ, ಆಯಾಭಾಗದ ಜಾನುವಾರುಗಳ ಗಣತಿಗೆ ಅನುಗುಣವಾಗಿ ಯಾವ ಯಾವ ಪ್ರದೇಶದಲ್ಲಿ ಈ ಜಮೀನಿನ ಅಗತ್ಯ ಎಷ್ಟರಮಟ್ಟಿಗೆ, ಎಷ್ಟು ಜಮೀನನ್ನು ಬೇರೆ ಕೆಲಸಕ್ಕೆ ಉಪಯೋಗಿಸಬಹುದು ಎಂಬ ಮಾಹಿತಿಯನ್ನು ನೀಡುವಂತೆಯೂ ನ್ಯಾಯಮೂರ್ತಿಗಳಾದ ಶ್ರೀ ವಿ.ಗೋಪಾಲ ಗೌಡ ಹಾಗೂ ಶ್ರೀ ಸಿ.ಆರ್.ಕುಮಾರಸ್ವಾಮಿ ಅವರನ್ನು ಒಳಗೊಂಡ ವಿಭಾಗೀಯ ಪೀಠ ಜಿಲ್ಲಾಧಿಕಾರಿಗಳಿಗೆ ಆದೇಶಿಸಿದೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಿಕ್ಕಶಕುನ ಗ್ರಾಮದ ಗೋಮಾಳ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಂತೆ ಏಕ ಸದಸ್ಯ ಪೀಠ ಹೊರಡಿಸಿದ್ದ ಆದೇಶವನ್ನು ರದ್ದು ಮಾಡಿರುವ ವಿಭಾಗೀಯ ಪೀಠ ಈ ಮಹತ್ವದ ಆದೇಶ ಹೊರಡಿಸಿದೆ.

ಬದುಕಿಗಾಗಿ ಸಾಗುವಳಿ:

ತಮ್ಮ ನಿತ್ಯದ ಕೂಳಿಗಾಗಿ ರೈತಾಪಿ ವರ್ಗದವರು ಗೋಮಾಳ ಭೂಮಿಯಲ್ಲಿ ಸಾಗುವಳಿ ಮಾಡುತ್ತಾರೆ. 'ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ಕೊಡಿ' ಎನ್ನುವ ಆದೇಶ ಅವರ ಮೂಲ ಹಕ್ಕನ್ನು ಕಸಿದುಕೊಂಡಂತಾಗುತ್ತದೆ. ಅಷ್ಟೇ ಅಲ್ಲದೆ ಈ ವರ್ಗದ ಜೀವನಾಧಾರವಾದ ಭೂಮಿಯನ್ನು ಕಸಿದುಕೊಳ್ಳುವುದು ನಿಯಮಬಾಹಿರ ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದು ಗೋಮಾಳ ಜಮೀನು ಎಂಬುದು ನಿಜ. ಎಷ್ಟೋ ವರ್ಷಗಳ ಹಿಂದೆ ಇಲ್ಲಿ ಹುಲ್ಲುಗಾವಲು ಇದ್ದಿರಬಹುದು. ಆದರೆ ಕಾಲಕ್ರಮೇಣ ಆಧುನಿಕತೆಯ ಸ್ಪರ್ಶದಿಂದ ಹಿಂದಿನ ಪರಿಸ್ಥಿತಿ ಈಗಿಲ್ಲ. ಜಾನುವಾರು ಗಳಿಗಿಂತ ಮಾನವ ಜನಸಂಖ್ಯೆಯೇ ಎರಡು ಪಟ್ಟು ಆಗಿದೆ. ಪರಿಸ್ಥಿತಿ ಹೀಗಿರುವಾಗ ಹಿಂದಿನ ದಿನಗಳನ್ನೇ ಗಮನದಲ್ಲಿಟ್ಟು ಇಂದು ಆತನ ಹಕ್ಕನ್ನು ಕಸಿದುಕೊಳ್ಳುವುದು ಉಚಿತ ಅಲ್ಲ' ಎಂದು ಪೀಠ ತಿಳಿಸಿದೆ.

ಜಿಲ್ಲಾಧಿಕಾರಿಗಳಿಗೆ ಅಧಿಕಾರ:

ಅನಧಿಕೃತವಾಗಿ ಸಾಗುವಳಿ ಮಾಡಲಾಗುತ್ತಿದ್ದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಹೈಕೋರ್ಟಿನ ಏಕ ಸದಸ್ಯ ಪೀಠ ಹೊರಡಿಸಿದ ಆದೇಶವನ್ನು ಶಿವಮೊಗ್ಗದ ಜಿಲ್ಲಾಧಿಕಾರಿಗಳು ಪ್ರಶ್ನಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ವಿಭಾಗೀಯ ಪೀಠ, 'ಗೋಮಾಳ ಜಮೀನಿನ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದುದು ಆಯಾ ಜಿಲ್ಲಾಧಿಕಾರಿಗಳಿಗೆ ಬಿಟ್ಟ ವಿಷಯ. ಆದರೆ ಈ ಬಗ್ಗೆ ಏಕ ಸದಸ್ಯ ಪೀಠ ಗಮನಹರಿಸದೇ ಇದ್ದುದು ವಿಷಾದನೀಯ' ಎಂದು



ಅಭಿಪ್ರಾಯಪಟ್ಟಿದೆ.

'ಇಂದು ರೈತಾಪಿ ಜನತೆ ತಮ್ಮ ಜಾನುವಾರು ಮೇಯಿಸಲು ಹಿಂದಿನಂತೆ ಗೋಮಾಳ ಜಮೀನನ್ನು ಅವಲಂಬಿಸಿಲ್ಲ. ಬದಲಾಗಿ ಅವರು ಪರ್ಯಾಯ ವ್ಯವಸ್ಥೆ ಮಾಡಿಕೊಂಡಿದ್ದಾರೆ', ಎಂದು ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ. ಅಂತೆಯೇ ಅರ್ಜಿದಾರರು ಈಗ ಸಾಗುವಳಿ ಮಾಡುತ್ತಿರುವ ಗೋಮಾಳ ಜಮೀನನ್ನು ಕಾಯಂ ಮಾಡುವ ಕುರಿತು ವಿವಾದದ ಪ್ರಸ್ತಾಪವನ್ನು ಜಮೀನು ಮಂಜೂರಾತಿ ಸಮಿತಿ ಮುಂದೆ ಇಡುವಂತೆಯೂ ನ್ಯಾಯ ಮೂರ್ತಿಗಳು ಸೂಚಿಸಿದ್ದಾರೆ.

ಜಾರಿಯಾಗದ ಆದೇಶ:

ರಾಜ್ಯದ ಹೈಕೋರ್ಟು ನೀಡಿರುವ ಈ ಅತ್ಯಂತ ಮಹತ್ವದ ತೀರ್ಪು ಇದುವರೆಗೂ ಜಾರಿಗೆ ಬಂದಿಲ್ಲ ಎನ್ನುವುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಸಿಗಬೇಕಾಗಿದ್ದ ಪ್ರಚಾರವೂ ಸಿಕ್ಕಿಲ್ಲ. ಕಂದಾಯ ಮಂತ್ರಿ ಜಗದೀಶಶೆಟ್ಟರ್ ಅವರ ಒಂದು ಪೂರಕ ಹೇಳಿಕೆಯನ್ನು ಬಿಟ್ಟರೆ ಬೇರೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ರಾಜ್ಯದ ಹಲವು ಕಡೆ ಗೋಮಾಳ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ಬಡವರಿಗಂತೂ ಈ ವಿಷಯ ತಿಳಿದಿಲ್ಲ. ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ನೇಮಕವಾಗಿರುವ ಸಮಿತಿಗಳು ಸಹ ಗೋಮಾಳ, ಹುಲ್ಲುಗಾವಲು ಭೂಮಿ ಸಾಗುವಳಿ ಪ್ರಕರಣಗಳ ಸಕ್ರಮ ಕೋರಿ ಬಂದಿರುವ ಅರ್ಜಿಗಳನ್ನು ತಿರಸ್ಕರಿಸುತ್ತಿವೆ. 53 ನಂಬರ್ ನಮೂನೆಯಲ್ಲಿ ಅರ್ಜಿ ಸಲ್ಲಿಸಿದವರು ಹೈಕೋರ್ಟಿನ ಈ ಆದೇಶವನ್ನು ಆಧರಿಸಿ ಮೇಲ್ಮನವಿ ಸಲ್ಲಿಸಿ ನ್ಯಾಯ ಪಡೆಯಲು ಸಾಧ್ಯವಿದೆ.

ಹಾಳು ಬಿದ್ದಿರುವ ಗೋಮಾಳ ಭೂಮಿ:

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ 2000-01 ರ ಪ್ರಕಟಣೆಯ ಪ್ರಕಾರ ರಾಜ್ಯದಲ್ಲಿ 9,59,224 ಹೆಕ್ಟೇರ್ ಗೋಮಾಳ ಭೂಮಿ ಇದೆ. ಗ್ರಾಮಗಳ ಆಸುಪಾಸಿನಲ್ಲಿರುವ ಈ ಭೂಮಿ ಗೋಮಾಳವಾಗಿ ಬಳಕೆಯಾಗುತ್ತಿಲ್ಲ. ಹಾಳುಬಿದ್ದ ಈ ಭೂಮಿಯಲ್ಲಿ ಕುರುಚಲು ಕಾಡು ಬೆಳೆಯುತ್ತಿದೆ. ಗ್ರಾಮಗಳಲ್ಲಿರುವ ದನಕರುಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯವಿರುವಷ್ಟು ಭೂಮಿಯನ್ನು ಗೋಮಾಳವಾಗಿ ಬಿಟ್ಟು ಉಳಿದ ಕೃಷಿ ಯೋಗ್ಯ ಭೂಮಿಯನ್ನು ಸಾಗುವಳಿ ಮಾಡಲು ಬಯಸುವ ಭೂ ರಹಿತ ಕುಟುಂಬಗಳಿಗೆ ವಿತರಣೆ ಮಾಡುವುದು ಆಗಬೇಕಾಗಿದೆ. ಈ ವಿಷಯದಲ್ಲಿ ಭೂಮಿ ಇರುವ ರೈತರು ಅನಗತ್ಯವಾಗಿ ತಕರಾರು ಮಾಡುವುದನ್ನು ಕೈಬಿಡುವಂತೆ ಅವರಿಗೆ ತಿಳುವಳಿಕೆ ನೀಡುವ ಕೆಲಸ ಆಗಬೇಕಾಗಿದೆ. ಗ್ರಾಮದ ಭೂರಹಿತ ಕೂಲಿಕಾರ ಕುಟುಂಬಗಳು, ದಲಿತರು ಇಂತಹ ಭೂಮಿಯನ್ನು ಸಾಗುವಳಿ ಮಾಡಿ ಬದುಕುವುದು ಗ್ರಾಮದ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂಬುದನ್ನು ಗ್ರಾಮಸ್ಥರಿಗೆ ಮನವರಿಕೆ ಮಾಡಬೇಕಾಗುತ್ತದೆ. ಭೂ ಹೀನ ಬಡವರನ್ನು ಸಂಘಟಿಸಿ, ಅವರನ್ನು ಹೋರಾಟಕ್ಕೆ ಇಳಿಸುವುದು ಸಹ ತುಂಬ ಮುಖ್ಯವಾಗುತ್ತದೆ.

ಭೂ ಬಳಕೆಯ ನೀತಿ

ಕರ್ನಾಟಕ ಸರ್ಕಾರದ ವಶದಲ್ಲಿ ಸಾಕಷ್ಟು ಭೂಮಿ ಇದೆ. ಅದರಲ್ಲಿ ಸಾಕಷ್ಟು ಕೃಷಿ ಯೋಗ್ಯ ಭೂಮಿ ಇದೆ. ಕೆಲವು ಕಡೆ ಇಂತಹ ಭೂಮಿಗೆ ನೀರಾವರಿ ಸೌಲಭ್ಯವೂ ಲಭ್ಯವಿದೆ. ಸರ್ಕಾರಕ್ಕೆ ಒಂದು ಜನಪರವಾದ ಭೂ ಬಳಕೆ ನೀತಿ ಇಲ್ಲದೆ ಇರುವುದರಿಂದ ಈ ಭೂ ಸಂಪತ್ತು ಬಳಕೆಯಾಗದೆ ವ್ಯರ್ಥವಾಗುತ್ತದೆ.

ರಾಜ್ಯದಲ್ಲಿ 4,26,584 ಹೆಕ್ಟೇರ್ ಸಾಗುವಳಿ ಯೋಗ್ಯವಾದ ಬಂಜರು ಭೂಮಿ ಸರ್ಕಾರದ ವಶದಲ್ಲಿದೆ. ಅದರಲ್ಲಿ ಕೆಲವು ಸಾವಿರ ಹೆಕ್ಟೇರ್ ಭೂಮಿ ಅಕ್ರಮ ಸಾಗುವಳಿಗೆ ಒಳಪಟ್ಟಿದೆ. ಅನೇಕ ಕಡೆ ಶ್ರೀಮಂತ ರೈತರು, ಭೂಗಳ್ಳರು ಇಂತಹ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ. ಇದೇ ಸಮಯದಲ್ಲಿ ರಾಜ್ಯದಲ್ಲಿ ಲಕ್ಷಾಂತರ ಕೂಲಿಕಾರ ಕುಟುಂಬಗಳು ಸ್ವಂತ ಭೂಮಿ, ವಾಸಕ್ಕೆ ಒಂದು ಮನೆ ಇಲ್ಲದೆ ಪರದಾಡುತ್ತಿದ್ದಾರೆ. ರಾಜ್ಯದಲ್ಲಿ ಲಭ್ಯ ಇರುವ ಕೃಷಿ ಯೋಗ್ಯ ಭೂಮಿಯನ್ನು ಬೇಸಾಯ ಮಾಡಲು ಆಸಕ್ತಿ ಹೊಂದಿರುವ ಭೂ ಹೀನ ಕುಟುಂಬಗಳಿಗೆ ಹಂಚುವುದು ಸರ್ಕಾರದ ಭೂ ಬಳಕೆ ನೀತಿಯ ಭಾಗವಾಗಬೇಕಾಗಿದೆ. ಮನೆಗಳಿಲ್ಲದ ಬಡವರಿಗೆ, ಕೊಳಚೆ ಪ್ರದೇಶಗಳಲ್ಲಿ ವಾಸವಿರುವ ಕೂಲಿಕಾರರ ಕುಟುಂಬಗಳಿಗೆ ನಿವೇಶನಗಳನ್ನು ಮನೆಗಳನ್ನು ಒದಗಿಸಲು ಸರ್ಕಾರ ತನ್ನ ಭೂ ಬಳಕೆ ನೀತಿಯಲ್ಲಿ ಅವಕಾಶ ಮಾಡಿಕೊಳ್ಳಬೇಕಾಗಿದೆ.

ಕೈಗಾರಿಕೆಗಳಿಗೂ ಭೂಮಿ ಬೇಕಾಗುತ್ತದೆ. ಕೈಗಾರಿಕೆಗಳಿಗಾಗಿ ರೈತರ ಕೃಷಿ ಭೂಮಿಯನ್ನು ಬಲವಂತದಿಂದ ಸ್ವಾಧೀನಪಡಿಸಿಕೊಳ್ಳುವ ಬದಲು ಕೃಷಿಗೆ ಯೋಗ್ಯವಲ್ಲದ ಬಂಜರು ಭೂಮಿಯನ್ನು ಬಳಸಿಕೊಳ್ಳುವುದಾಗ ಬೇಕಾಗಿದೆ. ಇವೆಲ್ಲವನ್ನೂ ಒಳಗೊಳ್ಳುವ ಸಮಗ್ರವಾದ ಒಂದು ಭೂ ಬಳಕೆ ನೀತಿಯನ್ನು ಸರ್ಕಾರ ರೂಪಿಸುವುದು ಅತ್ಯಗತ್ಯವಾಗಿದೆ. ಅಂತಹ ಒಂದು ಜನಪರವಾದ ಭೂ ಬಳಕೆ ನೀತಿಯನ್ನು ಸರ್ಕಾರ ರೂಪಿಸುವಂತೆ ಜನ ಚಳುವಳಿಯ ಒತ್ತಡ ಅಗತ್ಯವಿದೆ.

■ ರೆಹಿನಾಲ್

ನಿರುದ್ಯೋಗಿಗಳಿಗೆ ಸುಸಂಧಿ

ಹೀಗೆಯೇ ಬೆಲೆ ನೋಡಿ ಏರಿದರೆ ಮುಂದೆ
ನಿರುದ್ಯೋಗಿಗಳಿಗೆಲ್ಲ ಗ್ಯಾರಂಟಿ ದಂಧೆ
ಉದ್ಯೋಗವಿಲ್ಲದಿಹ ತರುಣರಿಗೆ ಆಗ
ಗೋರಿ ತೋಡುವ ಕೆಲಸ ದೊರಕಲಿದೆ ಬೇಗ.

- ವಿಡಂಬಾರಿ



ಭಾರತದಲ್ಲಿ 44 ದಶಲಕ್ಷ ಬಾಲ ಕಾರ್ಮಿಕರಿದ್ದಾರೆ

ಪ್ರತಿದಿನ ಭಾರತದಲ್ಲಿ ಎರಡು ಲಕ್ಷಕ್ಕಿಂತ ಅಧಿಕ ಬಾಲಕರು ಶಾಲೆ ಬಿಟ್ಟು ಕೆಲಸಕ್ಕೆ ಸೇರುತ್ತಾರೆ. ಇಷ್ಟೊಂದು ಪ್ರಮಾಣದ ಬಾಲ ಕಾರ್ಮಿಕರು ಬೇರೆ ಯಾವ ದೇಶದಲ್ಲೂ ಇಲ್ಲ. ಬಾಲಕರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದು ಅಪರಾಧವೆಂದು ಘೋಷಿಸಲಾಗಿದ್ದರೂ ಈ ಪದ್ಧತಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಈ ವಿಷಯದಲ್ಲಿ ಕಾನೂನು ಹಾಗೂ ಉಲ್ಲಂಘನೆ ಸಮಸಮವಾಗಿ ಸಾಗುತ್ತಿರುವುದು ವಿಪರ್ಯಾಸ.

ಹ..ಹ್ಹಾ..ಹ....

ಒಬ್ಬ : ನಮ್ಮೂರಲ್ಲಿ ನೆಲ ಅಗೆಯುವಾಗ ಪ್ರಾಚೀನ ಕಾಲದ ಲೋಹದ ತಂತಿ ಸಿಕ್ಕಿತು. ಭಾರತದಲ್ಲಿ ಪ್ರಾಚೀನ ಕಾಲದಲ್ಲೇ ದೂರವಾಣಿ ಸಾಧನ ಬಳಕೆಯಲ್ಲಿತ್ತು ಅನ್ನೋದಕ್ಕೆ ಇದೇ ಸಾಕ್ಷಿ.

ಮತ್ತೊಬ್ಬ: ಹೌದು, ಹೌದು. ನಮ್ಮೂರಲ್ಲಿ ನೆಲ ಅಗೆದಾಗ ಅಲ್ಲಿ ಯಾವ ತಂತಿನೂ ಸಿಗಲಿಲ್ಲ. ಭಾರತದಲ್ಲಿ ಪ್ರಾಚೀನ ಕಾಲದಲ್ಲೇ ವೈರ್‌ಲೆಸ್ ಸಾಧನ ಬಳಕೆಯಲ್ಲಿತ್ತು ಅನ್ನೋದಕ್ಕೇ ಇದೇ ಸಾಕ್ಷಿ ಅಲ್ಲವೇ?

ಆಂಧ್ರದಲ್ಲಿ ಭೂಮಿ ಹೋರಾಟ

ಪುಟ 7 ರಿಂದ

ಮೊದಲ ದಿನ ರಾಜ್ಯದ 132 ಸ್ಥಳಗಳಲ್ಲಿ ಆರಂಭವಾದ ಪ್ರತಿಭಟನೆಗಳು ನಂತರದಲ್ಲಿ ಪ್ರತಿದಿನ ಕನಿಷ್ಠ 300 ಸ್ಥಳಗಳಲ್ಲಿ ನಿರಂತರವಾಗಿ ಮುನ್ನಡೆಯುತ್ತಿತ್ತು. ಚಳುವಳಿಗೆ ಬೆಂಬಲವಾಗಿ ಮೇ 23 ರಂದು ಸಿಪಿಎಂ, ಸರ್ವ ಪಕ್ಷ ಸಭೆಯನ್ನು ಆಯೋಜಿಸಿತು. ಇದರಲ್ಲಿ ಸಿಪಿಎಂ, ಸಿಪಿಐ, ಟಿಡಿಪಿ, ಟಿಆರ್‌ಎಸ್, ಸಿಪಿಐ(ಎಂ.ಎಲ್) ಮತ್ತಿತರ ಪಕ್ಷಗಳ ಮುಖಂಡರು ಭಾಗವಹಿಸಿದ್ದರು. ರಾಜ್ಯ ಸರ್ಕಾರ ಸರ್ವ ಪಕ್ಷಗಳ ಸಭೆ ನಡೆಸಿ ಈ ಸಮಸ್ಯೆ ನಿವಾರಿಸಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ಇದರೊಂದಿಗೆ ಬಡವರಿಗೆ ಉಚಿತವಾಗಿ ನಿವೇಶನಗಳನ್ನು ಹಂಚಿಕೆ ಮಾಡಬೇಕೆಂದು ಸಭೆ ಆಗ್ರಹಿಸಿತು. ನಗರ ಪ್ರದೇಶದಲ್ಲಿ ಭೂಮಿ ಬಳಕೆ ಮಾಡಿಕೊಳ್ಳುವ ಕುರಿತು ಭೂ ನೀತಿ ರೂಪಿಸಬೇಕೆಂದು ಒತ್ತಾಯಿಸಿತು. ಪ್ರತಿ ಲೇಔಟ್‌ನಲ್ಲಿ ಇಂತಿಷ್ಟು ಪ್ರಮಾಣದ ನಿವೇಶನಗಳನ್ನು ಬಡವರಿಗಾಗಿ ಮೀಸಲಿಡಬೇಕು. ನಗರ ಪ್ರದೇಶದಲ್ಲಿನ ಭೂಮಿ ಹಂಚಿಕೆ ಕುರಿತು, ಆರು ತಿಂಗಳೊಳಗೆ ಉನ್ನತ ಮಟ್ಟದ ಸಮಿತಿ ರಚಿಸಬೇಕೆಂದು ಸಭೆ ಸರ್ವಾನುಮತದಿಂದ ಒತ್ತಾಯಿಸಿತು. ಕೋನೇರು ರಂಗಾರಾವ್ ಸಮಿತಿ ಭೂ ಹಂಚಿಕೆ ಕುರಿತು ನೀಡಿರುವ ವರದಿಯನ್ನು ಸರ್ಕಾರ ಬಹಿರಂಗಗೊಳಿಸಿ, ಎಲ್ಲ ಪಕ್ಷಗಳು, ಸಾಮೂಹಿಕ ಸಂಘಟನೆಗಳೊಂದಿಗೆ ಚರ್ಚೆ ನಡೆಸಬೇಕೆಂದು, ಸಭೆಯಲ್ಲಿ ಪಾಲ್ಗೊಂಡಿದ್ದವರು ಆಗ್ರಹಿಸಿದರು. ಬಿ.ವಿ. ರಾಘವುಲು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರ ಆಕ್ರಮಣಕಾರಿ ನೀತಿ ಅನುಸರಿಸಿದರೆ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸುವುದಾಗಿ ಅವರು ಎಚ್ಚರಿಕೆ ನೀಡಿದರು.

ಪ್ರತಿಭಟನೆಗಳಿಗೆ ಮಣಿದ ರಾಜ್ಯ ಸರ್ಕಾರ ಸಿಪಿಎಂ ಮತ್ತು ಸಿಪಿಐ ಪಕ್ಷಗಳೊಂದಿಗೆ ಮಾತುಕತೆ ನಡೆಸಿತು. ಈ ಕುರಿತು ಸ್ವಯಂ ಸೇವಾ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಕಾರ್ಯಾಗಾರವೊಂದನ್ನು ನಡೆಸಲಿದ್ದು ಅಲ್ಲಿಯವರೆಗೆ ಪ್ರತಿಭಟನೆ ಸ್ಥಗಿತಗೊಳಿಸಬೇಕೆಂದು ಮುಖ್ಯಮಂತ್ರಿ ವೈ.ಎಸ್.ರಾಜಶೇಖರರೆಡ್ಡಿ ಮನವಿ ಮಾಡಿದರು.

ಆದರೆ ಚಳುವಳಿಕಾರರು ಕೋನೇರು ರಂಗಾರಾವ್ ಸಮಿತಿ ವರದಿ ಬಹಿರಂಗಗೊಳಿಸಿ ಅದರ ಜಾರಿಗೆ ಕ್ರಮ ಕೈಗೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿದರು. ಸಮಿತಿ ವರದಿ ಬಹಿರಂಗಗೊಳಿಸದೆ ಕಾರ್ಯಾಗಾರದಲ್ಲಿ ಚರ್ಚೆ ನಡೆಸಲು ಹೇಗೆ ಸಾಧ್ಯ ಎಂದು ರಾಘವುಲು ಪ್ರಶ್ನಿಸಿದರು. 'ಇಂದಿರಮ್ಮ ಯೋಜನೆಯಡಿ ಬಡವರಿಗೆ ಮನೆ ನಿರ್ಮಿಸಲಾಗುವುದು' ಎಂದಷ್ಟೇ ಮುಖ್ಯಮಂತ್ರಿ ಹೇಳಿದರು.

ರಂಗರಾವ್ ಸಮಿತಿ ವರದಿಯಲ್ಲೇನಿದೆ?

ರಂಗರಾವ್ ಸಮಿತಿಯು ಒಟ್ಟು 104 ಶಿಫಾರಸ್ಸುಗಳನ್ನು ಸಲ್ಲಿಸಿದೆ. ಬಹಳಷ್ಟು ಶಿಫಾರಸ್ಸುಗಳು ಬಡವರ ಪರ ಇವೆ. ಆದರೆ ಕೆಲವು ವಿವಾದಾಸ್ಪದವಾಗಿದೆ. 2004ರಲ್ಲಿ ಸಿಪಿಐ, ಸಿಪಿಐ(ಎಂ) ಪಕ್ಷಗಳು ಜಂಟಿಯಾಗಿ ಸರ್ಕಾರವು ಭೂಮಿ ವಿಷಯದ ಕುರಿತು ಸಮಿತಿಯನ್ನು ನೇಮಕ ಮಾಡಬೇಕೆಂದು ಒತ್ತಾಯಿಸಿದ್ದವು. ನಂತರ ಮಾವೋವಾದಿಗಳೊಂದಿಗಿನ ಸರ್ಕಾರದ ಚರ್ಚೆಯ ಸಂದರ್ಭದಲ್ಲಿಯೂ ಈ ಪ್ರಶ್ನೆ ಎದ್ದು ಬಂದಿತ್ತು. ಸರ್ಕಾರವು ರಂಗಾರೆಡ್ಡಿ ಸಮಿತಿಯ ಶಿಫಾರಸ್ಸುಗಳನ್ನಷ್ಟೇ ಬಿಡುಗಡೆ ಮಾಡಿದೆ. ಇದನ್ನು ಪ್ರತಿಭಟಿಸಿ ಆಂಧ್ರಪ್ರದೇಶದ ಕೃಷಿ ಕೂಲಿಕಾರರ ಸಂಘಟನೆಯು ಸಮಿತಿಯ ಪೂರ್ಣ ವರದಿಯನ್ನು ಬಿಡುಗಡೆ ಮಾಡಿದೆ.) ಬಡವರಿಗೆ ನಿವೇಶನಕ್ಕಾಗಿ ನಡೆಯುತ್ತಿರುವ ಹೋರಾಟ ಮುಂದುವರಿದಿದೆ.

ಅಂತರ ವಿಶ್ವವಿದ್ಯಾಲಯ ಮಂಡಳಿಯ ಅವಾಂತರ

ಗೊಂದಲದ ಗೂಡು ಪದವಿ ಸ್ನಾತಕೋತ್ತರ

ಪ್ರಾದೇಶಿಕ ಭಿನ್ನತೆ, ಸಾಮಾಜಿ, ಆರ್ಥಿಕ ಪರಿಸ್ಥಿತಿ ಪರಿಗಣಿಸದೆ ಇಡೀ ರಾಜ್ಯಕ್ಕೆ ಒಂದೇ ನೀತಿ, ಒಂದೇ ಮಾನದಂಡ ಎಂದರೆ ಅದು ವೈಜ್ಞಾನಿಕವೇ?

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ಒಂದೇ ರೀತಿಯ ಪಠ್ಯ ಕ್ರಮದ ಬಗ್ಗೆ ಸರ್ಕಾರ ಯೋಚಿಸುತ್ತಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಮತ್ತು ಶೈಕ್ಷಣಿಕ ತಾರತಮ್ಯಗಳಿಂದು, ತಾಂಡವವಾಡುತ್ತಿರುವ, ಗುಲ್ಬರ್ಗಾ ವಿಭಾಗದ ವಿದ್ಯಾರ್ಥಿಗಳು 'ಶತಮಾನ ಸಂಭ್ರಮ' ಆಚರಿಸಿಕೊಳ್ಳುತ್ತಿರುವ ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಸ್ನಾತಕ ಪದವಿಯ ಪ್ರವೇಶ ಪರೀಕ್ಷೆಯ ಸ್ಪರ್ಧೆಗಿಳಿದು ಗೆಲ್ಲಬಹುದೇ? ಇದು ಯೋಚನೀಯವಷ್ಟೇ ಅಲ್ಲ ಶೋಚನೀಯ ಕೂಡಾ!

ಯಾಕೆಂದರೆ ಬರುವ ಶೈಕ್ಷಣಿಕ ವರ್ಷದಿಂದ (07-08) ರಾಜ್ಯ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯ ಬಯಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿ.ಇ.ಟಿ) ಎದುರಿಸಬೇಕೆಂದು ಅಂತರ್ ವಿಶ್ವವಿದ್ಯಾಲಯ ಮಂಡಳಿ ನಿರ್ದೇಶನ ನೀಡಿದೆ. ಮೈಸೂರು ವಿಶ್ವ ವಿದ್ಯಾಲಯದ ಕುಲ ಸಚಿವರ ನೇತೃತ್ವದಲ್ಲಿ ಮೊದಲ ಸುತ್ತಿನ ಸಭೆ ನಡೆದು ಜೂನ್ 07 ರ ಕೊನೆಯ ವಾರದಲ್ಲಿ ಪ್ರವೇಶ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಅದೂ ಕೇವಲ 11 ವಿಷಯಗಳಿಗೆ ಮಾತ್ರ !

ತಾರತಮ್ಯ ಧೋರಣೆ: ಇನ್ನುಳಿದ ವಿಷಯಗಳಲ್ಲಿ ಪದವಿ ಪಡೆದ ವಿದ್ಯಾರ್ಥಿಗಳ ಮನೋಸ್ಥಿತಿ ಏನಾಗಬಹುದು? ಅವರ ಮಾನಸಿಕ ಕುಗ್ಗುವಿಕೆಗೆ ಸರ್ಕಾರವೇ ನೇರ ಕಾರಣವಾಗುವುದಿಲ್ಲವೇ? ಯಾಕೆಂದರೆ, ಒಂದೊಂದು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 32 ರಿಂದ 36 ವಿಷಯಗಳ ಪದವಿ ವ್ಯಾಸಂಗಕ್ಕೆ ಅವಕಾಶವಿರುತ್ತದೆ. 11 ವಿಷಯಗಳಿಗೆ ಸ್ನಾತಕ ಪದವಿಗೆ ಪ್ರವೇಶ ಪರೀಕ್ಷೆಯೆಂದರೆ, ಶ್ರೇಷ್ಠವೆಂತಲೋ? ಯಾಕೆ? ಹ್ಯಾಗೆ? ಈ ಉದ್ಯೋಗವಿಲ್ಲದ ಬಡಿಗ್ಯಾ....ಕೆತ್ತಿ ಮಣಿ ಮಾಡಿದ್ಹಂತೆ!

ಹಿಂಗಾಗಿದೆ ಸ್ನಾತಕ ಪದವಿಯ ಪ್ರವೇಶ ಪರೀಕ್ಷೆ. ಯಾಕೆಂದರೆ ವಿಜ್ಞಾನ ವಿಷಯಗಳಾದ ಸೂಕ್ಷ್ಮ ಜೀವಶಾಸ್ತ್ರ, ಬಯೋ ಕೆಮಿಸ್ಟ್ರಿ, ಬಯೋ ಟೆಕ್ನಾಲಜಿ ವಿಷಯಗಳು ತಾಂತ್ರಿಕ ತೊಂದರೆ ಯನ್ನೆರಿಸಬೇಕಾಗಿದೆ. ಸ್ನಾತಕ ಪದವಿಯ ಪ್ರವೇಶ ಪರೀಕ್ಷೆಯಲ್ಲಿ, ಹೇಗೆಂದರೆ, ಈ ವಿಷಯಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ತತ್ಸಮಾನ ವಿಷಯಗಳಾದ, ಸಸ್ಯಶಾಸ್ತ್ರ, ಪ್ರಾಣಿ ಶಾಸ್ತ್ರ ವಿಷಯಗಳಲ್ಲಿ ಪದವಿ ಪಡೆದ ಅಭ್ಯರ್ಥಿಗಳೂ ಅರ್ಹರು. ಆದರೆ ಸ್ನಾತಕೋತ್ತರ ಪದವಿ ವ್ಯಾಸಂಗಕ್ಕಾಗಿ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಗಳು ಆಯಾ ವಿಷಯದ ಪ್ರಶ್ನೆ ಪತ್ರಿಕೆಗಳಿರುವುದರಿಂದ ಸಸ್ಯ ಶಾಸ್ತ್ರ ಮತ್ತು ಪ್ರಾಣಿಶಾಸ್ತ್ರದ ವಿದ್ಯಾರ್ಥಿಗಳು, ಸೂಕ್ಷ್ಮ ಜೀವ ಶಾಸ್ತ್ರ, ಬಯೋ ಕೆಮಿಸ್ಟ್ರಿ, ಬಯೋಟೆಕ್ನಾಲಜಿ ವಿಷಯಗಳನ್ನು ಪದವಿಯಲ್ಲಿ ಓದದೇ ಇರುವುದರಿಂದ ಅವರಿಗೆ, ಅರ್ಹತೆ ಇದ್ದು, ವಂಚಿಸಿದಂತಾಗುವುದಿಲ್ಲವೇ? ಒಂದು ಸಮೂಹದ ವಿದ್ಯಾರ್ಥಿಗಳ ಭವಿಷ್ಯವನ್ನು ಸರ್ಕಾರವೇ ಹಾಳು ಮಾಡಿದಂತಾಗುವುದಿಲ್ಲವೆ? ಮೇಲಾಗಿ ಶೈಕ್ಷಣಿಕ ಅವಧಿ ಏರುಪೇರಾಗುವುದರಿಂದ 2 ವರ್ಷದ ವ್ಯಾಸಂಗ ಮೂರು ವರ್ಷಗಳಾಗಿ ವಿದ್ಯಾರ್ಥಿ ಒಂದು ಹಾಳಾಗಬಹುದು.

ಐ.ಯು.ಬಿ. ಅವಾಂತರ: ವಿವಿಧ ಸ್ನಾತಕೋತ್ತರ ಪದವಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶವೇ ಅಂತಿಮ ಎಂದು ಐ.ಯು.ಬಿ. (ಅಂತರ್ ವಿಶ್ವವಿದ್ಯಾಲಯ ಮಂಡಳಿ) ಹೇಳಿದೆ ಹಾಗಾದರೆ, ಬಿ.ಎ. ಬಿ.ಎಸ್ಸಿ., ಬಿ.ಕಾಂ., ವ್ಯಾಸಂಗದಲ್ಲಿ ಅಗ್ರ ಶ್ರೇಣಿ ಪಡೆದ ವಿದ್ಯಾರ್ಥಿಗೆ ಯಾವ ಬೆಲೆ? ಇದು ವಿಶ್ವ ವಿದ್ಯಾಲಯದ ಸ್ವಾಯತ್ತತೆ, ಮತ್ತು ಆಯಾ ಪದವಿ ವ್ಯಾಸಂಗದ ಶೈಕ್ಷಣಿಕ ಪಾವಿತ್ರತೆಯನ್ನು ಪ್ರಶ್ನಿಸುವಂತಿದೆ.

ಇನ್ನೂ ಆಶ್ಚರ್ಯವೆಂದರೆ, ಪದವಿಯಲ್ಲಿ ಕೇವಲ ಶೇ.35 ಅಂಕ ಪಡೆದ ವಿದ್ಯಾರ್ಥಿಯೂ ಸ್ನಾತಕ ಪದವಿಯ ಪ್ರವೇಶ ಪರೀಕ್ಷೆಯಲ್ಲಿ ಗ್ರೇಡ್ 'ಎ' ಪಡೆದು ಪ್ರವೇಶ ಪಡೆಯಬಹುದು. ಈ ಪ್ರವೇಶ ಪರೀಕ್ಷೆಯಲ್ಲಿ ಯಾವ ಪ್ರಶ್ನೆಗೂ ಅಂಕಗಳನ್ನು ಹಾಕುವುದಿಲ್ಲ ಗ್ರೇಡ್ ಹಾಕುತ್ತಾರೆ.

ಇನ್ನೂ ಆಶ್ಚರ್ಯ !!! : ಈ ಸ್ನಾತಕ ಪದವಿ ಪ್ರವೇಶ ಪರೀಕ್ಷೆಯಲ್ಲಿ ಸದ್ಯದ ಶೇ.50 ತುಂಬಾ ಕಠಿಣ ಪ್ರಶ್ನೆಗಳು ಶೇ.25 ಮಧ್ಯಮ ಪ್ರಶ್ನೆಗಳು ಶೇ.25 ಸರಳ ಪ್ರಶ್ನೆಗಳಿರುವಂತೆ ಐ.ಯು.ಬಿ. ಸಲಹೆ ಸೂಚನೆಗಳನ್ನು ನೀಡಿದೆ. ವಿದ್ಯಾರ್ಥಿಗಳ ಪ್ರಶ್ನೆಗೆ ಕರ್ನಾಟಕ ಸರ್ಕಾರದ ಉನ್ನತ ವ್ಯಾಸಂಗದ ಸಚಿವರಲ್ಲಿ ಏನಿದೆ ಉತ್ತರ?

ವಿಳಂಬದ ಆಗರ.... ಗೊಂದಲದ ಸಾಗರ: ಅಂತರ್ ವಿಶ್ವವಿದ್ಯಾಲಯ ಮಂಡಳಿಯ ಸೂಚನೆಯಂತೆ ಜೂನ್ ಕೊನೆಯವಾರದಲ್ಲಿ ಪ್ರವೇಶ ಪರೀಕ್ಷೆ ನಡೆಸಲು ತೀರ್ಮಾನಿಸಲಾಯಿತು. ಸರಿ, ಆದರೆ ಸಾಮಾನ್ಯ ಪ್ರವೇಶ ಪರೀಕ್ಷೆಯ ವಿಷಯ ಪಠ್ಯವನ್ನು ಇನ್ನೂ ತಯಾರಿಸಿಲ್ಲ.ಆಯಾ ವಿಷಯಗಳ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಲಾಗಿಲ್ಲ. ಇವೆಲ್ಲವುಗಳನ್ನು ತಯಾರಿಸಿ ಮೈಸೂರು ವಿಶ್ವವಿದ್ಯಾಲಯ ಕುಲಸಚಿವರು (ಮೌಲ್ಯಮಾಪನ) ಇವರಿಗೆ ಒಪ್ಪಿಸಿದಾಗ ಇವರು ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಮ್ಮ ಮಾರ್ಗದರ್ಶನದಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸುವುದು. ಇಷ್ಟೆಲ್ಲಾ ಆದ ಮೇಲೆ ಆಯ್ಕೆ ಪಟ್ಟಿ ತಯಾರಿಸಿ, ವಿದ್ಯಾರ್ಥಿ ಪ್ರವೇಶ ಪಡೆದು ಶೈಕ್ಷಣಿಕ ವರ್ಷ ಪ್ರಾರಂಭವಾಗುವುದ್ಯಾವಾಗ? ಯಾರಿಗೂ ಗೊತ್ತಿಲ್ಲ! ! ಯಾರಿಗೂ ಹೇಳ್ಬೇಡಿ!! ಇದು ನಮ್ಮ ಘನ ಸರ್ಕಾರದ ಶಿಕ್ಷಣ ಪದ್ಧತಿಯ ಸೀಕ್ರೇಟು ! ಹೂಂ!!

ಉತ್ತರ ಕರ್ನಾಟಕದಲ್ಲೊಂದು ನಾಣ್ಣುಡಿ ಇದೆ 'ದಂಡಿಗ್ಹೋಗ್ತೀನಿ ಅಂತ ಎಂಟು ಕೋಳಿ ತಿಂದಿದ್ದಂತೆ!' ಎಂಟು ಕೋಳಿ ತಿಂದವ ತಕ್ಷಣ ದಂಡಿಗೆ ಹೋಗ್ತಾನಾ? ಮಲಗಿ ನಿದ್ದೆ ಮಾಡಿ ಫ್ರೆಷ್ ಆಗಿ ಹೋಗೋ ಹೊತ್ತಿಗೆ ಇವರ ಕಡೆಯವರೆಲ್ಲ ಸೋತು ಮನೆಗೆ ಬರ್‍ತಿದ್ರಂತೆ! ಹಾಗಾಯಿತು ಈ ಅಂತರ್ ವಿಶ್ವವಿದ್ಯಾಲಯ ಮಂಡಳಿಯ ಅವಾಂತರ.

ಶೈಕ್ಷಣಿಕ ಹಿಂದುಳಿಯುವಿಕೆ ಸಾಮಾಜಿಕ ಅನ್ಯಾಯ: ಗುಲ್ಬರ್ಗಾ ವಿಭಾಗದಲ್ಲಿ ಬೀದರ್ ಶೈಕ್ಷಣಿಕವಾಗಿ ಅತಿ ಹಿಂದುಳಿದ ಜಿಲ್ಲೆ ಇಂದಿನ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿ ಫಲಿತಾಂಶಗಳು ನಮ್ಮ ಮುಖಕ್ಕೆ ಹಿಡಿದ ಕನ್ನಡಿಯಾಗಿದೆ. ಇನ್ನೊಂದು ನಿದರ್ಶನವೆಂದರೆ ಗುಲ್ಬರ್ಗಾ ವಿಭಾಗದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ನಿಗದಿಯಾದ ಶಿಕ್ಷಕ ಹುದ್ದೆಗಳು ಗುಲ್ಬರ್ಗಾ ವಿಭಾಗದ ಅಭ್ಯರ್ಥಿಗಳಿಗಿಂತ ಬೇರೆ ವಿಭಾಗದ ಅಭ್ಯರ್ಥಿಗಳ ಪಾಲಾದದ್ದು ಅಂಗೈ ಹುಣ್ಣು. ಮಾನ್ಯ ಶಿಕ್ಷಣ ಮಂತ್ರಿಗಳು ಇದಕ್ಕೆ ಏನು ಉತ್ತರ ಹೇಳುತ್ತಾರೆ...? ಇದೆಲ್ಲದಕ್ಕೂ ಕಳಸವಿಟ್ಟಂತೆ ಅಬ್‌ಜೆಕ್ಟಿವ್ ಪರೀಕ್ಷಾ ಮಾದರಿ, ಮೇಲಾಗಿ ಋಣಾತ್ಮಕ ಮೌಲ್ಯ ಮಾಪನ ಪದ್ಧತಿ. ಹೀಗಾಗಿ ವಿದ್ಯಾರ್ಥಿಗಳಿಗೆ ಶೂನ್ಯ ಸಂಪಾದನೆಯೇ ಗ್ಯಾರಂಟಿ. ಈ ಶೂನ್ಯ ಸಂಪಾದನೆಯ ಹೊತ್ತು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶದಿಂದ ಹೋದ ವಿದ್ಯಾರ್ಥಿ ಪ್ರಾಚೀನ ಕಾಲದ ಮೈಸೂರು, ಬೆಂಗಳೂರು ವಿಶ್ವ ವಿದ್ಯಾಲಯಗಳಲ್ಲಿ ಪ್ರವೇಶ ದೊರಕಿಸಿಕೊಳ್ಳುವುದೆಂದರೆ .... ಹೇಗೆ?

ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಜಿಲ್ಲೆಗಳು ತಮ್ಮ ಜನರ ಬದುಕಿನ ಮಟ್ಟವನ್ನು ಎತ್ತರಿಸಿ, ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಲೆಂದು ಸರ್ಕಾರ ಆಯಾ ವಿಶ್ವ ವಿದ್ಯಾಲಯಗಳಿಗೆ ಸ್ವಾಯತ್ತ ಅಧಿಕಾರ ಕೊಟ್ಟಿದೆ. ಇದನ್ನು ಆಯಾ ಪ್ರದೇಶಗಳು ಹಂತ ಹಂತವಾಗಿ ಸಾಧಿಸಿಕೊಳ್ಳಲು ಕಾಲ ಮಿತಿಯ ಪ್ರಯತ್ನ ಅಗತ್ಯ. ಆದ್ದರಿಂದ ಸ್ನಾತಕೋತ್ತರ ಪದವಿಗಳಿಗೆ ಆಯಾ ವಿಶ್ವವಿದ್ಯಾಲಯಗಳೇ ಪ್ರವೇಶ ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಕೊಡಬೇಕು. ಇಲ್ಲದಿದ್ದರೆ, ಎಲ್ಲಾ ವಿಶ್ವ ವಿದ್ಯಾಲಯಗಳು ತಮ್ಮ ಸ್ವಾಯತ್ತತೆಯನ್ನು ಹಾಗೂ ಶೈಕ್ಷಣಿಕ ಪಾವಿತ್ರತೆಯನ್ನು ಕಳೆದುಕೊಂಡು ಪಿ.ಯು.ಸಿ. ಓದಿಸುವ ಕಾಲೇಜುಗಳಾಗುತ್ತವೆ ಅಷ್ಟೆ.

ನಮ್ಮ ಘನ ಸರ್ಕಾರದ ಉನ್ನತ ಶಿಕ್ಷಣದ ಸಚಿವರಾದ ಶಂಕರ ಮೂರ್ತಿಯವರು ಕೇಂಬ್ರಿಡ್ಜ್ ವಿಶ್ವ ವಿದ್ಯಾಲಯದಲ್ಲಿ ಓದಿ ಬಂದವರೇನಲ್ಲ. ಆ ಸ್ಟ್ಯಾಂಡರ್ಡ್ ಮೆಂಟೇನ್ ಮಾಡಿ ನಮ್ಮ ಸ್ನಾತಕ ಪದವಿ ವಿದ್ಯಾರ್ಥಿಗಳನ್ನು ಇನ್ಫೋಸಿಸ್ ನಾರಾಯಣಮೂರ್ತಿಯ ಕೈಗೇನೂ ಕೊಡಬೇಕಾಗಿಲ್ಲ. ಯಾಕೆಂದರೆ ಆಯಾ ಪ್ರದೇಶದ ವಿದ್ಯಾರ್ಥಿಗಳು ತಮ್ಮ ಭವಿಷ್ಯ ನಿರ್ಮಾಣ ಮಾಡಿಕೊಳ್ಳುವ ಸಂದರ್ಭದಲ್ಲಿ ಸರ್ಕಾರದ ಕಾಯ್ದೆ ಕಾನೂನುಗಳು ವಿದ್ಯಾರ್ಥಿಗಳ ಬದುಕಿಗೆ ಕಂಟಕವಾಗಬಾರದು. ಅಷ್ಟಕ್ಕೂ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಬೇಕೆಂದರೆ ದೇಶದ ಶಿಕ್ಷಣ ತಜ್ಞರನ್ನು ಅರ್ಥ ಶಾಸ್ತ್ರಜ್ಞರನ್ನೂ ವಿಜ್ಞಾನಿಗಳನ್ನು ಹಾಗೂ ಸಾಮಾಜಿಕ ಚಿಂತಕರನ್ನು ಚಳುವಳಿ ಪ್ರತಿನಿಧಿಗಳನ್ನು, ವಿದ್ಯಾರ್ಥಿಗಳನ್ನು ಸೇರಿಸಿ ಸರ್ಕಾರ ಸಲಹೆ ಸೂಚನೆಗಳನ್ನು ಪಡೆಯಲಿ. ಇಲ್ಲದಿದ್ದರೆ 'ಹುಚ್ಚರ ಲಗ್ನದಲ್ಲಿ ಉಂಡವನೇ ಜಾಣ' ಎಂದಂತಾಗುತ್ತದೆ.

■ ಘಂಟಾನಾದ

ಜಗದಗಲ

ಶರತ್‌ಚಂದ್ರ

ಎಸ್ಟೋನಿಯಾದಲ್ಲಿ ಕೆಂಪು ಸೈನ್ಯದ ಸ್ಮಾರಕಕ್ಕೆ ಅವಮಾನ - ಪ್ರತಿಭಟನೆ

ಎಸ್ಟೋನಿಯಾದ ಸರ್ಕಾರ ಯುರೋಪನ್ನು ನಾಜಿಗಳಿಂದ ವಿಮೋಚನೆಗೊಳಿಸಲು ಬಲಿದಾನ ಮಾಡಿದ 2.7 ಲಕ್ಷ ಸೋವಿಯೆಟ್ ಕೆಂಪು ಸೈನಿಕರ ಸ್ಮಾರಕವನ್ನು ತೆಗೆಯಿತು. ಇದು ರಶ್ಯನ್ 'ಅಧಿಪತ್ಯ'ದ ಕುರುಹು ಎಂಬ ಸರ್ಕಾರದ ಹೇಳಿಕೆ ಮತ್ತು ಸ್ಮಾರಕಕ್ಕೆ ಅವಮಾನದ ವಿರುದ್ಧ ಎಸ್ಟೋನಿಯಾದಲ್ಲಿ ಮಾತ್ರವಲ್ಲ, ಯುರೋಪಿನಾದ್ಯಂತ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಎಸ್ಟೋನಿಯಾದಲ್ಲಿ ಇದು ಹಲವು ದಿನಗಳ ಕಾಲ ಸರ್ಕಾರದ ಬೆಂಬಲಿಗರು ಮತ್ತು ಪ್ರತಿಭಟನೆಕಾರರ ನಡುವೆ ತೀವ್ರ ಘರ್ಷಣೆಗೆ ಕಾರಣವಾಯಿತು. ರಶ್ಯನ್ ಸರ್ಕಾರ ಸಹ ಇದಕ್ಕೆ ತೀವ್ರ ಪ್ರತಿಭಟನೆ ಸಲ್ಲಿಸಿತು. 1930-40ರ ದಶಕದ ಚಾರಿತ್ರಿಕ ನಾಜಿ- ವಿರೋಧಿ ಹೋರಾಟ ಮತ್ತು ಅದರಲ್ಲಿ ಕಮ್ಯುನಿಸ್ಟರ, ಸೋವಿಯೆಟ್ ಪಾತ್ರದ ಮಹತ್ವವನ್ನು ಅಲ್ಲಗಳೆಯುವ, ಇತಿಹಾಸವನ್ನು ತಿರಿಚುವ ಇಂತಹ ಘಟನೆಗಳು ಯುರೋಪಿನಾದ್ಯಂತ ಹೆಚ್ಚಿವೆ. ಪೂರ್ವ ಯುರೋಪಿನಲ್ಲಿ (ಮುಖ್ಯವಾಗಿ ರೋಮೆನಿಯಾ, ಪೋಲೆಂಡ್, ಹಂಗರಿ) ಅಧಿಕಾರಕ್ಕೆ ಬಂದಿರುವ ಹಲವು ಬಲಪಂಥೀಯ ಸರ್ಕಾರಗಳು ಇದಕ್ಕೆ ಕುಮ್ಮಕ್ಕು ಕೊಡುತ್ತಿವೆ. ಇವು ಕಮ್ಯುನಿಸ್ಟ್ ವಿರೋಧೀ ಮಾತ್ರವಲ್ಲ, ನಾಜೀ-ಪರ ಪ್ರಜಾಸತ್ತೆ-ವಿರೋಧಿ ಸ್ವರೂಪ ತಾಳಿವೆ.

ಮೇ2 ರಂದು ಹಂಗರಿ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಹಿರಿಯ ಕಮ್ಯುನಿಸ್ಟ್ ನಾಯಕ ಜಾನೋಸ್ ಕಾದರ್ ಗೋರಿ ಮೇಲೆ ದಾಳಿ, ಪೋಲೆಂಡ್ ಮತ್ತು ರೋಮೆನಿಯಾದಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಸರ್ಕಾರದ ಜತೆ ಸಂಬಂಧ ಹೊಂದಿದ್ದ ಸುಮಾರು 7 ಲಕ್ಷ ಜನರನ್ನು 'ಅಪರಾಧಿ'ಗಳು ಎಂದು ಶಂಕಿಸುವ ಹೊಸ ಕಾನೂನಿನ ಜಾರಿ, ನವ ನಾಜಿ ಭಾಷೆ ಬಳಸಿ ರೋಮೆನಿಯಾದ ಅಧ್ಯಕ್ಷರಿಂದ ಕಮ್ಯುನಿಸ್ಟರ ಟೀಕೆ, ರೋಮೆನಿಯಾದ ನಾಜೀ-ಪರ ಪ್ರಧಾನಿಗೆ ಅಧಿಕೃತ ಮಾನ್ಯತೆ - ಇವು ಇಂತಹ ಇತರ ಘಟನೆಗಳು. ಇವಲ್ಲದೆ ನಾಜೀ-ವಿರೋಧಿ, ಕಮ್ಯುನಿಸ್ಟ್ ನಾಯಕರ ಹೆಸರು ಇರುವ ರಸ್ತೆ, ವೃತ್ತ, ಚೌಕ, ಸಾರ್ವಜನಿಕ ಕಟ್ಟಡ, ಸಂಸ್ಥೆಗಳ ಹೆಸರುಗಳನ್ನು ಬದಲಾಯಿಸುವ ಪ್ರವೃತ್ತಿ ಸಹ ಇದರಲ್ಲಿ ಸೇರಿದೆ.

ಯುರೋಪಿನ 30ಕ್ಕೂ ಹೆಚ್ಚು ಎಡ ಮತ್ತು ಕಮ್ಯುನಿಸ್ಟ್ ಪಕ್ಷಗಳು ಇಂತಹ ಕಮ್ಯುನಿಸ್ಟ್ ವಿರೋಧೀ ಮಾತ್ರವಲ್ಲ, ನಾಜೀ-ಪರ ಪ್ರಜಾಸತ್ತೆ-ವಿರೋಧಿ ಕಾರ್ಯಾಚರಣೆಗಳನ್ನು ತೀವ್ರವಾಗಿ ಖಂಡಿಸಿವೆ. ಈ ಸವಾಲನ್ನು ಸ್ವೀಕರಿಸಿ ಪ್ರಜಾಸತ್ತೆ-ಪರ ಶಕ್ತಿಗಳನ್ನು ಈ ಹೋರಾಟದಲ್ಲಿ ಅಣಿ ನೆರೆಸಲು ಕರೆ ನೀಡಿವೆ.

ನಾಯಕರನ್ನು ಜನರಿಂದ ರಕ್ಷಿಸಲು ಉಕ್ಕಿನ 'ಬರ್ಲಿನ್ ಗೋಡೆ'!!

ಜೂನ್ ಮೊದಲ ವಾರದಲ್ಲಿ ಜರ್ಮನಿಯ ಹೈಲಿಗೆಂದಮ್ (ಬಾಲ್ಟಿಕ್ ಸಮುದ್ರ ತೀರದ ತಾಣ) ನಲ್ಲಿ ನಡೆಯಲಿರುವ ಜಿ-8 ಶೃಂಗಸಭೆ (ಶ್ರೀಮಂತ 8 ದೇಶಗಳ ನಾಯಕರ ಸಭೆ) ರಣಾಂಗಣದಂತೆ ಕಾಣುತ್ತಿದೆ. ಶೃಂಗಸಭೆ ನಡೆಯುವ ತಾಣದ ಸುತ್ತ 12 ಕಿ.ಮೀ ಉದ್ದದ ಉಕ್ಕಿನ ಕೋಟೆಯನ್ನು ನಿರ್ಮಿಸಲಾಗಿದೆ. ಈ ಉಕ್ಕಿನ ಕೋಟೆ 24 ಗಂಟೆ ಕಾಯಲು ಸಾವಿರಾರು ಪೋಲೀಸರನ್ನು ನಿಯೋಜಿಸಲಾಗಿದೆ. ಇದು ಎರಡನೇ ಮಹಾಯುದ್ಧದ ನಂತರ ಭದ್ರತಾ ಪಡೆಗಳನ್ನು ಅತಿ ದೊಡ್ಡ ಪ್ರಮಾಣದ ಅಣಿ ನೆರೆಸುವಿಕೆ ಎನ್ನಲಾಗಿದೆ. ಇದು ಶ್ರೀಮಂತ 8 ದೇಶಗಳ ನಾಯಕರನ್ನು ಅವರದ್ದೇ ಪ್ರಜೆಗಳಿಂದ ರಕ್ಷಿಸಲು ಸಿದ್ಧತೆ. ಇದು ಜರ್ಮನಿಯ ಹೊಸ 'ಬರ್ಲಿನ್ ಗೋಡೆ' ಎಂದು ಜನ ಹೇಳುತ್ತಿದ್ದಾರಂತೆ. ಜಿ-8 ಎಂದು ಕರೆಯಲಾಗುವ ಈ ನಾಯಕರ ಸಭೆಗಳು ಅವರ ನೀತಿ ವಿರುದ್ಧ ಪ್ರತಿಭಟನೆಯ ಮುಖ್ಯ ತಾಣಗಳಾಗಿವೆ, ಹಲವು ವರ್ಷಗಳಿಂದ. ಇದಕ್ಕೆ ಈ ನಾಯಕರು ಅಂಗೀಕರಿಸುತ್ತಿರುವ ಜನ-ವಿರೋಧಿ ನೀತಿಗಳೇ ಕಾರಣ. ಈ ಬಾರಿ ಸಹ ಸಾಮ್ರಾಜ್ಯಶಾಹಿ-ಜಾಗತೀಕರಣ ವಿರೋಧಿ ಚಳುವಳಿಗಳು ಜಿ-8 ಸಭೆ 'ನಿಲ್ಲಿಸುವ' ನೇರ ಕಾರ್ಯಾಚರಣೆ ಅಲ್ಲದೆ, ಜನರನ್ನು ಬಾಧಿಸುವ ಹಲವು ಪ್ರಶ್ನೆಗಳ ಬಗ್ಗೆ ಬದಲಿ ಶೃಂಗಸಭೆಗಳನ್ನು ಹಮ್ಮಿಕೊಂಡಿವೆ.

ಭಾರಿ ಪ್ರತಿಭಟನೆ ನಿರೀಕ್ಷಿಸುತ್ತಿರುವ ಜರ್ಮನ್ ಸರ್ಕಾರ ಎಲ್ಲೆಡೆ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಕಾರ್ಯಾಚರಣೆಯ ಪ್ರಮುಖ ನಾಯಕರನ್ನು, ಕಾರ್ಯಕರ್ತರನ್ನು ಬೆದರಿಸುವ, ಚಟುವಟಿಕೆ ನಿರ್ಬಂಧಿಸುವುದರಲ್ಲಿ ಬಂಧಿಸುವುದರಲ್ಲಿ ತೊಡಗಿದೆ. ಇವರ 'ವಾಸನೆ' ಸಂಗ್ರಹಿಸಿ ತರಬೇತಿ ಪಡೆದ ನಾಯಿಗಳನ್ನು ಬಳಸಿ ಅವರ ಚಲನವಲನ ತಡೆಯುವ ಹಿಂದೆಂದೂ ಇಲ್ಲದ ಪ್ರಯತ್ನದಲ್ಲಿ ತೊಡಗಿದೆ. ಸರ್ಕಾರದ ಈ ಕ್ರೂರ ಮತ್ತು ಪ್ರಜಾಸತ್ತೆ-ವಿರೋಧಿ ಕಾರ್ಯಾಚರಣೆಗಳನ್ನು ಆಳುವ ಪಕ್ಷದ ನಾಯಕರೂ, ದೊಡ್ಡ ಬ್ಯಾಂಕ್ ಒಂದರ ಹಿರಿಯ ಅಧಿಕಾರಿಗಳೂ ಖಂಡಿಸುವಷ್ಟು ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಈಗಾಗಲೇ ಯುರೋಪಿನ ಹಲವು ನಗರಗಳಲ್ಲಿ ಭಾರೀ ಪ್ರತಿಭಟನೆಗಳು ನಡೆದಿವೆ. ಮುಂದಿನ ವಾರದ ಪ್ರತಿಭಟನೆಗೆ ಭಾರೀ ತಯಾರಿ ಸಹ ನಡೆದಿದೆ.



'ಶರಿಯತ್ ಬೇಡ' 'ತುರ್ಕಿ ಜಾತ್ಯತೀತ ಆಗಿತ್ತು, ಆಗಿರುತ್ತದೆ'



ತುರ್ಕಿಯಲ್ಲಿ ಜಾತ್ಯತೀತತೆ ಮತ್ತು ಧರ್ಮಾಂಧತೆಗಳ ನಡುವೆ ಸೆಣಸಾಟ ನಡೆಯುತ್ತಿದೆ. ಇದು ಸುಮಾರು 10 ಲಕ್ಷಕ್ಕಿಂತಲೂ ಹೆಚ್ಚು ಜಾತ್ಯತೀತ ಜನರ ಬೃಹತ್ ರ್‍ಯಾಲಿಯ ದೃಶ್ಯ. ಈಗಿನ ಆಳುವ ಪಕ್ಷದ ಅಭ್ಯರ್ಥಿ ಅಧ್ಯಕ್ಷನಾದರೆ ತುರ್ಕಿ ಜಾತ್ಯತೀತ ಸ್ವರೂಪಕ್ಕೆ ಧಕ್ಕೆ ಬರಬಹುದು ಎಂಬ ಆತಂಕವಿದೆ.

ನೇಪಾಳದಲ್ಲಿ ಸಂವೈಧಾನಿಕ ಸಭೆ ಚುನಾವಣೆ ಮುಂದಕ್ಕೆ

ನೇಪಾಳ ಪ್ರಜಾಸತ್ತೆ ಕಡೆಗಿನ ಪ್ರಯಾಣದಲ್ಲಿ ಹಲವು ಪ್ರಮುಖ ಮೈಲಿಗಲ್ಲುಗಳನ್ನು ದಾಟಿದೆ. ಆದರೆ ಈ ಪ್ರಮಾಣದಲ್ಲಿ ಪ್ರಮುಖ ಘಟ್ಟವಾದ ಸಂವೈಧಾನಿಕ ಸಭೆಯ ಚುನಾವಣೆಗಳು ಮುಂದಕ್ಕೆ ಹೋಗಿ ಸ್ವಲ್ಪ ಮಟ್ಟದ ಆತಂಕ ತಂದಿದೆ. ಚುನಾವಣೆ ಕಮೀಷನ್ ತೆರೈ ಪ್ರದೇಶದಲ್ಲಿ ಗಲಭೆಗಳು ಮತ್ತು ಇತರ ಕಾರಣಗಳಿಂದ ಜೂನ್‌ನಲ್ಲಿ(ಮೊದಲ ಯೋಜನೆಯಂತೆ) ಚುನಾವಣೆಗಳು ನಡೆಸುವುದು ಸಾಧ್ಯವಿಲ್ಲ ಎಂದಿದೆ. ಆಮೇಲೆ ನಾಲ್ಕು ತಿಂಗಳ ಕಾಲ ಮಳೆಗಾಲದಿಂದ ಚುನಾವಣೆ ನವೆಂಬರ್-ಡಿಸೆಂಬರ್‌ಗೆ ಮುಂದೆ ಹೋಗುವ ಸಾಧ್ಯತೆ ಇದೆ. ಈ ವಿಳಂಬ ಹಲವು ಸಮಸ್ಯೆಗಳನ್ನು ಬೀರಬಹುದು ಎನ್ನಲಾಗಿದೆ.



ನೇಪಾಳದ ಸಂಸತ್ತಿನಲ್ಲಿ ಕಾಂ. ಯೆಚೂರಿ. ಫೈಲ್ ಫೋಟೋ

ತೆರೈ ಪ್ರದೇಶದ ಜನತೆ, ಇತರರನ್ನು ಒಳಗೊಳ್ಳುವ ಬಗೆಗೂ ಕೆಲವು ಸಮಸ್ಯೆಗಳು ಉದ್ಭವವಾಗಿವೆ. ಗಲಭೆಗಳು ನಡೆಯುವಷ್ಟು ತೀವ್ರವಾಗಿದೆ. ಈ ನಡುವೆ ಈಗ ಕ್ಯಾಂಪ್‌ಗಳಲ್ಲಿರುವ ಮಾವೋವಾದಿ ಗೆರಿಲ್ಲಾ ಸೈನಿಕರ ಭವಿಷ್ಯದ ಬಗೆಗೂ ಭಿನ್ನಾಭಿಪ್ರಾಯ ಇದೆ. ಏಳು ಪ್ರಮುಖ ಕ್ಯಾಂಪ್‌ಗಳು ಮತ್ತು 21 ಸಣ್ಣ ಕ್ಯಾಂಪ್‌ಗಳಲ್ಲಿ ಇರುವ ಸುಮಾರು 36 ಸಾವಿರ ಗೆರಿಲ್ಲಾಗಳ ಭವಿಷ್ಯದ ಬಗ್ಗೆ ಹಲವು ಸಲಹೆಗಳನ್ನು ಮಂಡಿಸಲಾಗಿದೆ. ಅವರ ಶಸ್ತ್ರಾಸ್ತ್ರಗಳನ್ನು ಕ್ಯಾಂಪ್ ನಲ್ಲಿ ಇಡಲಾಗಿದೆ. ವಿಶ್ವಸಂಸ್ಥೆಯು ಈ ಕ್ಯಾಂಪ್‌ಗಳ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಅವರಿಗೆ ಈ ಕ್ಯಾಂಪ್‌ಗಳಿಗೆ ಭೇಟಿ ಮಾಡುವ ಅವಕಾಶ ಒದಗಿತ್ತು. ವಿಶ್ವಸಂಸ್ಥೆ ಸಿಬ್ಬಂದಿ ಬಿಟ್ಟರೆ, ಈ ಕ್ಯಾಂಪ್‌ಗೆ ಪ್ರವೇಶ ಪಡೆದ ಮೊದಲ ವಿದೇಶಿಯರೆಂದರೆ ಯೆಚೂರಿ. ಈ ಭೇಟಿ ವೇಳೆ ಅವರಿಗೆ ಪ್ರಚಂಡ ಸ್ವಾಗತ ನೀಡಲಾಯಿತು.

ಇದ್ದದ್ದು ಇದ್ದಾಂಗ....

"ಭಾಷಾ ನೀತಿಯನ್ನು ಪಾಲಿಸಲೊಲ್ಲದ ಶಾಲೆಗಳ ಆಡಳಿತ ಮಂಡಳಿಗಳ ಮಾತು ಖಾಸಗಿ ವೃತ್ತಿ ಶಿಕ್ಷಣದ ಆಡಳಿತ ಮಂಡಳಿಗಳ ಗತ್ತಿನಂತಿದೆ"

- ಸಾಹಿತಿ ಬರಗೂರು , ದಿನಪತ್ರಿಕೆಯ ವರದಿ

"ಇನ್ನೆಂದೂ ಸಾಲ ಮನ್ನಾ ಮಾಡುವ ಯೋಜನೆ ಕೈಗೆತ್ತಿಕೊಳ್ಳುವುದಿಲ್ಲ. ಇದೇ ಸಾಕು"

- ಜಿ.ಟಿ.ದೇವೇಗೌಡ, ಸಹಕಾರ ಸಚಿವರು

.........ಬಾಣೆ ಜಮೀನಿನ ಹಕ್ಕಿನ ಬಗ್ಗೆ ಮಾತನಾಡಿದ ಸಚಿವ ರಾಮಚಂದ್ರಗೌಡರು 'ಹೊರಗಿನವರು ಬಂದು ಇಲ್ಲಿ ಭೂಮಿ ಖರೀದಿಸುವುದನ್ನು ತಡೆಯಬೇಕೆಂದು ಸಂತನಂತೆ ದೊಡ್ಡ ಸ್ವರದಲ್ಲಿ ಹೇಳಿದರು. ಆದರೆ ಅವರೀಗ ದಕ್ಷಿಣ ಕೊಡಗಿನಲ್ಲಿ ಕಾಫಿ ತೋಟ ಖರೀದಿಸಲು ಮುಂದಾಗಿದ್ದಾರೆ.

ಕೊಡಗು ಸಮಾಚಾರ 16.5. 2007

ಭೈರಪ್ಪ - ಚಿಮೂ ಮತ್ತು 'ಸತ್ಯಾ'ನ್ವೇಷಣೆ

ಆವರಣ - ಅನಾವರಣದ ಸುತ್ತ ಎದ್ದಿರುವ ವಿವಾದ ಕುರಿತು ಹಿರಿಯ ಲೇಖಕರ ಅಭಿಪ್ರಾಯಗಳು

ಭೈರಪ್ಪ ಅವರು ಕಾದಂಬರಿಕಾರರು ಹೌದೋ ಅಲ್ಲವೋ ಎಂಬುದರ ಚರ್ಚೆ ಇಲ್ಲಿ ಅಪ್ರಸ್ತುತ. ಆದರೆ 'ಆವರಣ' ಕೃತಿ ಕಾದಂಬರಿ, ಸಂಶೋಧನೆ, ಇತಿಹಾಸ, ಕರಪತ್ರ ಈ ಯಾವ ಜಾಡಿಗೂ ಸೇರದ ಕೃತಿ. ಈ ಕೃತಿ ಅತ್ಯಂತ ಅಪಾಯಕಾರಿ ಬರಹವೆಂಬುದರ ಬಗ್ಗೆ ನನಗೆ ಅನುಮಾನವೇ ಇಲ್ಲ. ಹಾಗೂ ಚಿಮೂ ಅವರು ಖಂಡಿತ ಸಾಹಿತ್ಯ ವಿಮರ್ಶಕರು ಎನಿಸಿಕೊಳ್ಳುವುದಿಲ್ಲ ಎಂಬುದರ ಕುರಿತೂ ನನಗೆ ಸಂದೇಹಗಳಿಲ್ಲ. ಭೈರಪ್ಪನವರು ಮತ್ತು ಚಿಮೂ ಇಬ್ಬರೂ ಕೂಡ 'ಸತ್ಯ' ಎಂಬ ಶಬ್ದವನ್ನು ಧಾರಾಳವಾಗಿ ಬಳಸುತ್ತಾರೆ. 'ಆವರಣ'ದಲ್ಲಿಯಂತೂ 'ಸತ್ಯ' ಶಬ್ದ ಪುಟಪುಟದಲ್ಲಿಯೂ ರಾರಾಜಿಸುತ್ತದೆ. ಚಿಮೂ ಅವರು ಪದೇ ಪದೇ ಅವರ ಲೇಖನಗಳಲ್ಲಿ, ಭಾಷಣಗಳಲ್ಲಿ, ಸಂದರ್ಶನಗಳಲ್ಲಿ ಘೋಷಿಸುವುದೆಂದರೆ 'ನಾನು ಸತ್ಯಕ್ಕಾಗಿ ನಿಲ್ಲುತ್ತೇನೆ. ನಾನು ಸತ್ಯಕ್ಕಾಗಿ ಮಾತ್ರ ನಿಷ್ಠ ಎಂದು ಘೋಷಿಸುತ್ತಿರುತ್ತಾರೆ. ಭೈರಪ್ಪನವರು ತಾವು 'ಸತ್ಯ'ವನ್ನು ಸಂಗ್ರಹಿಸಿದ 50 ಪುಸ್ತಕಗಳ ಪಟ್ಟಿ ನೀಡುತ್ತಾರೆ. ಆದರೆ ಭೈರಪ್ಪನವರಿಗೆ ಮತ್ತು ಅವರಿಗೆ 'ನೈತಿಕ ಬೆಂಬಲ' ನೀಡುವ ಚಿಮೂ ಅವರಿಗೆ ಸತ್ಯವೆಂಬುದು ತಾವುಗಳು ಓದಿದ ಪುಸ್ತಕಗಳ ಪುಟಗಳಲ್ಲಿ ಅಡಕವಾಗಿದ್ದು, ಅಲ್ಲಿಂದ ತಲೆಗೆ ಹೊಕ್ಕು, ನಂತರ ತಮ್ಮೆದುರ ಖಾಲಿ ಹಾಳೆಗಳ ಮೇಲೆ ಚೆಲ್ಲಿಕೊಳ್ಳುತ್ತ ಹೋಗುವುದಷ್ಟೇ ಹೊರತು ಅದಕ್ಕೂ ಮೀರಿ ಅವಕ್ಕೆ ಅಸ್ತಿತ್ವವಿಲ್ಲ.

- ಜಿ.ಕೆ.ಗೋವಿಂದರಾವ್

★

ಸಮಾಜವನ್ನು ಕೂಡಿಸುತ್ತೋ, ಒಡೆಯುತ್ತೋ?

ಒಳ್ಳೆಯ ಉದ್ದೇಶ ಇದ್ದರೆ ಒಳ್ಳೆಯದು ಬರೆಯಬಹುದು. ಬರೆದದ್ದು ಸಮಾಜವನ್ನು ಕೂಡಿಸುತ್ತೋ, ಒಡೆಯುತ್ತೋ ಅನ್ನೋದರ ಮೇಲೆ ಯಾವುದೇ ಕೃತಿ ಬಗ್ಗೆ ನಿರ್ಧರಿಸಬೇಕು.

- ದೇವನೂರು ಮಹದೇವ, ಸಾಹಿತಿಗಳ

★

ಜಾಗತೀಕರಣದಿಂದ ಭಾರತೀಯ ಸಂಸ್ಕೃತಿ ಎನ್ನುವುದೇ ನಾಶವಾಗುತ್ತಿರುವ ಸಂದರ್ಭದಲ್ಲಿ ಮುಸ್ಲಿಂ ವಿರೋಧ ಎನ್ನುವುದು ಅರ್ಥವಾಗದ ಸಂಗತಿ.

ಚಾರಿತ್ರಿಕ ಹಿನ್ನೆಲೆಯ ವಸ್ತುಗಳನ್ನು ಇಟ್ಟುಕೊಂಡು ಕಾದಂಬರಿ ರಚಿಸಿ ಜನರನ್ನು ತಪ್ಪುದಾರಿಗೆ ಎಳೆಯುವುದು ಸರಿಯಲ್ಲ ಎಂದ ಅವರು, ಭೈರಪ್ಪ ಅವರ ಬರಹಗಳು ಕಾವ್ಯಮಯವಲ್ಲ. ಅವರ 'ಗೃಹಭಂಗ' ಕಾದಂಬರಿ ಚೆನ್ನಾಗಿದೆ. ಅದರ ಹೊರತಾಗಿ ಉಳಿದ ಕೃತಿಗಳಲ್ಲಿ ಸಾಹಿತ್ಯ ಕಾಣುವುದಿಲ್ಲ. ಬದಲಾಗಿ ಅವರೊಬ್ಬ ಚರ್ಚಾಪಟುವಿನಂತೆ ಕೃತಿ ರಚಿಸುತ್ತಾರೆ.

ಅವರ ಕಾದಂಬರಿಯನ್ನು ಓದುತ್ತಿದ್ದೆ. ಅವರ ಗೃಹಭಂಗ ಕಾದಂಬರಿಯನ್ನು ನ್ಯಾಷನಲ್ ಬುಕ್‌ಟ್ರಸ್ಟ್‌ನಿಂದ ಬೇರೆ ಭಾಷೆಗೆ ಅನುವಾದಿಸಲು ಆಯ್ಕೆ ಮಾಡಲಾಗಿತ್ತು.

ಭೈರಪ್ಪ ಕಾದಂಬರಿಗಳನ್ನು ಜನಪ್ರಿಯವಾಗಿ ಬರೆಯುತ್ತಾರೆ. ಹಿಂದೂ ಸಂಸ್ಕೃತಿಯ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಬರೀತಾರೆ. ಆ ಪ್ರಶ್ನೆಗೆ ಉತ್ತರಗಳು ಅವರ ಮನಸ್ಸಿನಲ್ಲಿಯೇ ಇರುತ್ತದೆ.

- ಯು.ಆರ್.ಅನಂತಮೂರ್ತಿ

ನಂದಿಗ್ರಾಮ ಪ್ರಶ್ನೆ


ಭೂಮಿ ಹೋರಾಟವಲ್ಲ ರಾಜಕೀಯ ಪಿತೂರಿ

ಸೀತಾರಾಂ ಯೆಚೂರಿ

ನಂದಿಗ್ರಾಮದಲ್ಲಿ ರಸಾಯನಿಕ ಕೈಗಾರಿಕೆಗಳ ಸಮಚ್ಚಯ (ಕೆಮಿಕಲ್ ಹಬ್) ನಿರ್ಮಾಣವನ್ನು ಮೊದಲು ಯೋಜಿಸಿದ್ದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರವಲ್ಲ. ನಂತರ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಅಲ್ಲಿ ಇಂಡೋನೇಷಿಯಾದ ಸಲೀಂ ಗ್ರೂಪ್‌ನೊಂದಿಗೆ ಒಪ್ಪಂದ ಮಾಡಿಕೊಂಡು ಕೈಗಾರಿಕೆಗಳ ಸ್ಥಾಪನೆಯ ಆ ಸ್ಥೂಲ ಅಂದಾಜು ಮಾಡಿತ್ತು. ಹಲ್ದಿಯಾ ಪೆಟ್ರೋ ಕೆಮಿಕಲ್ ಘಟಕವು ಸಮೀಪದಲ್ಲಿರುವುದರಿಂದ ಈ ಪ್ರದೇಶ ಒಳ್ಳೆಯದೆಂಬ ಅಭಿಪ್ರಾಯವಿತ್ತು. ಆದರೆ ಈ ಭೂಮಿ ವಶಕ್ಕೆ ಯಾವುದೇ ಅಧಿಸೂಚನೆ ಹೊರಡಿಸಿರಲಿಲ್ಲ. ಈ ಸಂಬಂಧ ಸರ್ಕಾರ ರೈತರೊಂದಿಗೆ ಇನ್ನೂ ಚರ್ಚೆ ಆರಂಭಿಸುವುದರಲ್ಲಿತ್ತು.

ಆದರೆ ವಿರೋಧ ಪಕ್ಷಗಳು ದೊಡ್ಡ ಅಪಪ್ರಚಾರ ನಡೆಸಿದವು. ತೃಣಮೂಲ ಕಾಂಗ್ರೆಸ್, ನಕ್ಸಲಿಯ ಗುಂಪುಗಳು ಜೊತೆಗೆ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಸೇರಿಕೊಂಡು ದೊಡ್ಡ ಪಿತೂರಿ ನಡೆಸಿದವು.

ಯೋಜನೆಗೆ ಅಗತ್ಯವಾದ ಭೂಮಿಯ ಪ್ರಮಾಣದ ಬಗ್ಗೆ ಉತ್ಪ್ರೇಕ್ಷಿತವಾದ ತಪ್ಪು ಸುದ್ದಿ ಹರಡಲಾಯಿತು. ಇಲ್ಲಿ ಅಪಪ್ರಚಾರ ನಡೆಸುತ್ತಿರುವಷ್ಟು ಭೂಮಿಯು ಯೋಜನೆಗೆ ಅಗತ್ಯವಾಗಿಲ್ಲ. ಅದು ಅದಕ್ಕಿಂತ ತೀರಾ ಕಡಿಮೆ ಎಂದು ಹಲ್ದಿಯಾ ಪೆಟ್ರೋಕೆಮಿಕಲ್ಸ್ ಸಂಸ್ಥೆಯು ನೀಡಿದ ಸ್ಪಷ್ಟೀಕರಣವನ್ನೇ ಭೂಮಿ ವಶಪಡಿಸಿಕೊಳ್ಳಲು ನೀಡಲಾದ ನೋಟೀಸು ಎಂದು ಪ್ರಚಾರ ನಡೆಸಿ ಜನರನ್ನು ಉದ್ರೇಕಿಸಲಾಯಿತು. ವಾಸ್ತವವಾಗಿ ಹಲ್ದಿಯಾ ಸಂಸ್ಥೆ ಈ ಬಗ್ಗೆ ಸ್ಪಷ್ಟೀಕರಣ ನೀಡುವ ಅಧಿಕೃತ ವಕ್ತಾರನಾಗಿರಲಿಲ್ಲ. ಈ ವಿಚಾರದಲ್ಲಿ ತಪ್ಪಾಗಿತ್ತು. ಇದೇ ಅಂಶವನ್ನೇ ದುರ್ಬಳಕೆ ಮಾಡಲಾಯಿತು.



ಶೌಚಾಲಯಗಳ ಬಳಕೆ ಹಾಗೂ ಸ್ಪಷ್ಟೀಕರಣದ ಸಂಬಂಧವಾಗಿ ಕೇಂದ್ರ ಸರ್ಕಾರವು ಪೂರ್ವ ಮಿಡ್ನಾಪುರವನ್ನು ದೇಶದ ಪ್ರಥಮ 'ನಿರ್ಮಲ ನಗರ' ಎಂದು ಘೋಷಿಸಲು ಉದ್ದೇಶಿಸಿತ್ತು.

ಈ ಸಂಬಂಧವಾಗಿ ನಡೆದ ಸಭೆಯನ್ನು ಭೂಮಿ ವಶಕ್ಕಾಗಿ ನಡೆದ ಸಭೆ ಎಂದು ಹುಯಿಲೆಬ್ಬಿಸಿ ಪಂಚಾಯ್ತಿ ಕಛೇರಿಯ ಮೇಲೆ ದಾಳಿ ನಡೆಸಲಾಯಿತು. ಪಂಚಾಯ್ತಿ ಪ್ರಧಾನರನ್ನು ಥಳಿಸಲಾಯಿತು. ಸಿಪಿಐ(ಎಂ) ಬೆಂಬಲಿಗರನ್ನು, ಕಾರ್ಯಕರ್ತರನ್ನು ಕೊಲ್ಲಲಾಯಿತು. ಯೋಜನೆಗಾಗಿ ಪ್ರದೇಶದ ಮಸೀದಿ, ಮಂದಿರವನ್ನು ತೆರವುಗೊಳಿಸಲಾಗುವುದೂ ಎಂದೂ ಅಪಪ್ರಚಾರ ನಡೆಸಲಾಯಿತು.

ಇದಲ್ಲದೇ ಈ ಭಾಗದ ಸುಮಾರು 2500 ಜನರನ್ನು ಸಿಪಿಐ(ಎಂ) ಬೆಂಬಲಿಗರು ಯೋಜನೆಯ ಪರವಾಗಿರುವವರು ಎಂದು ಆರೋಪಿಸಿ ಗ್ರಾಮದಿಂದ ಹೊರಗಟ್ಟಲಾಯಿತು. ನೂರಾರು ಮನೆಗಳನ್ನು ಅಂಗಡಿಗಳನ್ನು ಲೂಟಿ ಮಾಡಲಾಯಿತು. ರಸ್ತೆ, ಸೇತುವೆಗಳನ್ನು ಕಡಿದು ಹಾಕಿ, ಗ್ರಾಮಗಳನ್ನು ಹೊರ ಜಗತ್ತಿನಿಂದ ಪ್ರತ್ಯೇಕಿಸಲಾಯಿತು. ಶಾಲಾ ಬಾಲಕಿ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಲಾಯಿತು.

ಈ ನಡುವೆ ಈ ಭಾಗದಲ್ಲಿ ಕೌಟುಂಬಿಕ ಕಾರಣಕ್ಕಾಗಿ ನಡೆದ ಆತ್ಮಹತ್ಯೆಗಳನ್ನು ಈ ಯೋಜನೆಯ ಸಂಬಂಧವಾಗಿ ನಡೆದ ಹತ್ಯೆ ಎಂದೂ ಸುಳ್ಳು ಪ್ರಚಾರ ನಡೆಸಲಾಯಿತು. ಪ್ರಾಥಮಿಕ ತನಿಖೆಗಳಲ್ಲೇ ಸತ್ಯ ಬಯಲಾಯಿತು. ಸಿಂಗೂರು ಪ್ರಶ್ನೆಯಲ್ಲಿ ಬಹುತೇಕ ರೈತರು ತಮ್ಮ ಒಪ್ಪಿಗೆ ನೀಡಿ ಪರಿಹಾರ ಪಡೆದುಕೊಂಡಿದ್ದರೂ ಹೊರಗಿನಿಂದ ಬಂದವರನ್ನು ತೋರಿಸಿ ವ್ಯಾಪಕ ಅಪಪ್ರಚಾರ ನಡೆಸಲಾಯಿತು.

ಮಾರ್ಚ್ 7 (ಅಥವಾ 9) ರಂದೇ ಸರ್ಕಾರವು ರೈತರ ಒಪ್ಪಿಗೆ ಇಲ್ಲದಿದ್ದಲ್ಲಿ ಸರ್ಕಾರ ಭೂಮಿ ವಶಪಡಿಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟವಾಗಿ ಘೋಷಿಸಿದ್ದರೂ ಪರಿಸ್ಥಿತಿ ಸುಧಾರಿಸಲಿಲ್ಲ. ನಿರಾಶ್ರಿತರ ಶಿಬಿರಗಳ ಮೇಲೆ ದಾಳಿ ನಡೆಸಲಾಯಿತು. ಎಷ್ಟೋ ಜನ ಮಕ್ಕಳು ಶಾಲಾ ಕಾಲೇಜುಗಳಿಗೆ ಹೋಗಲಾರದೇ ಒಂದು ಶೈಕ್ಷಣಿಕ ವರ್ಷವನ್ನೇ ಕಳೆದುಕೊಂಡರು. ಇಂತಹ ಪರಿಸ್ಥಿತಿಯಲ್ಲಿ ಮಾರ್ಚ್ 14ರಂದು ನಮ್ಮ ಪಕ್ಷಗಳ ಸಭೆಯ ತೀರ್ಮಾನದಂತೆ ಮುಂಚಿತವಾಗಿಯೇ ಗ್ರಾಮದಲ್ಲಿ ಕಾನೂನು ಸುವ್ಯವಸ್ಥೆಯ ಸ್ಥಾಪನೆಗಾಗಿ ಪೋಲೀಸರು ಪ್ರವೇಶಿಸುತ್ತಿರುವುದು ಎಂದು ಸಾರಿದ್ದರೂ ಕೂಡ ಮಾರಾಕಾಸ್ತ್ರಗಳು, ಬಾಂಬುಗಳೊಂದಿಗೆ ದಾಳಿ ನಡೆಸಲಾಯಿತು. ಈ ಘರ್ಷಣೆಯಲ್ಲಿ ದುರದೃಷ್ಟಕರವಾದ ಗೋಲಿಬಾರ್ ನಡೆಯಿತು.

ಈ ಒಟ್ಟು ವಿಚಾರದಲ್ಲಿ ಭೂಮಿ ಪ್ರಶ್ನೆಗಿಂತ ಎಡರಂಗ ವಿರೋಧಿ ಹಿಂಸಾತ್ಮಕ ರಾಜಕೀಯ ದುರುದ್ದೇಶ ಅಡಗಿದೆ. ಎಡರಂಗದ ಪ್ರಸಿದ್ಧ ಭೂ ಸುಧಾರಣೆಯಿಂದ ಭೂಮಿ ಕಳೆದುಕೊಂಡು ಈಗಲೂ ಬುಸುಗುಡುತ್ತಿರುವ ಮಾಜಿ ಭೂ ಮಾಲಕ ಶಕ್ತಿಗಳ ಕುತಂತ್ರ ಇದೆ. ಭೂಮಿ ಮರು ವಶದ ಉದ್ದೇಶದಿಂದಲೇ ಇಂತಹ ಗಲಭೆಗಳ ಸಂದರ್ಭದಲ್ಲಿ ಪಂಚಾಯ್ತಿ ಕಛೇರಿಗಳಿಗೆ ಬೆಂಕಿ ಹಚ್ಚಲಾಗುತ್ತದೆ. ಭೂ ದಾಖಲೆಗಳು ಭಸ್ಮಗೊಂಡರೆ ಭೂಮಿಯ ಮರು ವಶ ಸಾಧ್ಯವಾಗಬಹುದೇನೋ ಎಂಬುದು ಅವರ ಬಯಕೆ. ಈ ಎಲ್ಲಾ ಗಲಭೆಗಳಿಗೆ ಕಾಂಗ್ರೆಸ್ ಪಕ್ಷದ ಪರೋಕ್ಷ ಬೆಂಬಲವಿದೆ. ಹಿಂದೆ ಎಡರಂಗದ ವಿರುದ್ಧ ಬಿಜೆಪಿ ಸೇರಿದಂತೆ ಉಳಿದೆಲ್ಲರು ಸೇರಿ 'ಮಹಾಜೋತ್' (ಮಹಾ ಒಕ್ಕೂಟ) ರಚಿಸಿ ಕಮ್ಯುನಿಸ್ಟರನ್ನು ಸೋಲಿಸಬೇಕೆಂಬ ಯತ್ನ ನಡೆದು ಅದು ವಿಫಲವಾಗಿತ್ತು. ಈಗ ಹೇಗಾದರೂ ಮಹಾಜೋತ್ ಎಂಬ ಅನೈತಿಕ ಕೂಟಕ್ಕೆ ಏನಾದರೂ ಒಂದು ಸಮರ್ಥನೆ ರೂಪಿಸಿಕೊಳ್ಳಲು ಈ ಸಿಂಗೂರು, ನಂದಿಗ್ರಾಮಗಳನ್ನು ಸೃಷ್ಟಿಸಲಾಗುತ್ತಿದೆ.

ಕಳೆದ 30 ವರ್ಷಗಳಲ್ಲಿ ಎಡರಂಗ ಇಂತಹ ಎಷ್ಟೆ ಪಿತೂರಿಗಳನ್ನು ಎದುರಿಸಿದೆ. ಈ ಸಂದರ್ಭದ ಸವಾಲನ್ನು ಯಶಸ್ವಿಯಾಗಿ ಎದುರಿಸಲಿದೆ.

ಪ.ಬಂ. ಸ್ಥಳೀಯ ಉಪಚುನಾವಣೆ ನಂದಿಗ್ರಾಮದಲ್ಲಿ ಎಡರಂಗದ ಜಯ

ಸಿಂಗೂರು ಮತ್ತು ನಂದಿಗ್ರಾಮ ಹಿಂಸಾಚಾರ ಹಿನ್ನೆಲೆಯಲ್ಲಿ ಅಪಪ್ರಚಾರ ಮತ್ತು ಪ್ರತಿಪಕ್ಷಗಳು ನಡೆಸಿದ ಆಂದೋಲನದ ನಡುವೆಯೂ ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಎಡಪಕ್ಷಗಳು ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮಹತ್ವದ ಜಯ ದಾಖಲಿಸಿವೆ.

ಸಿಂಗೂರ್‌ನ ಟಾಟಾಕಾರು ತಯಾರಿಕಾ ಘಟಕ ಮತ್ತು ನಂದಿಗ್ರಾಮದ ರಾಸಾಯನಿಕ ಘಟಕ ಯೋಜನೆಗೆ ಸಂಬಂಧಿಸಿದಂತೆ ಪ್ರತಿಪಕ್ಷ ತೃಣಮೂಲ ಕಾಂಗ್ರೆಸ್ ಮತ್ತು ಕೆಲ ನಕ್ಸಲೀಯ ಸಂಘಟನೆಗಳು ಸತತ ಅಪಪ್ರಚಾರ ಮತ್ತು ಚಳುವಳಿ ನಡೆಸಿತ್ತು. ಈ ಹಿನ್ನಲೆಯಲ್ಲಿ ಈ ಚುನಾವಣಾ ಫಲಿತಾಂಶ ಮಹತ್ವ ಪಡೆದುಕೊಂಡಿತ್ತು.

ನಂದಿಗ್ರಾಮಕ್ಕೆ ಹೊಂದಿಕೊಂಡ ಗ್ರಾಮ ಪಂಚಾಯತ್‌ನಲ್ಲಿ ಸಿಪಿಎಂ ಅಧಿಕಾರಕ್ಕೇರಿದೆ: ಈ ಪಂಚಾಯತ್ ಮೊದಲು ತೃಣಮೂಲ ಕಾಂಗ್ರೆಸ್ಸಿನ ವಶದಲ್ಲಿತ್ತು. ತೃಣಮೂಲ ಕಾಂಗ್ರೆಸ್‌ನ ಈ ಸೋಲಿನಿಂದ ಅದರ ನಾಯಕಿ ಮಮತಾ ಬ್ಯಾನರ್ಜಿಗೆ ತೀವ್ರ ಮುಖಭಂಗವಾಗಿದೆ.

ನಂದಿಗ್ರಾಮ, ಸಿಂಗೂರು ಅಲ್ಲದೆ ಬರ್ದ್ವಾನ್ ಜಿಲ್ಲೆಯ ಸಲಾನ್ ಗ್ರಾಮ ಪಂಚಾಯ್ತಿಗಳಲ್ಲಿ ಹಿಂದೆ ತೃಣಮೂಲ ಕಾಂಗ್ರೆಸ್ ಗೆದ್ದಿದ್ದ ಸಾಕಷ್ಟು ಸ್ಥಾನಗಳಲ್ಲಿ ಈ ಎಡರಂಗ ಗೆದ್ದುಕೊಂಡಿದೆ.

ಆದರೆ ಪನ್ಸ್‌ಕುರಾ ಪಂಚಾಯತ್‌ನಲ್ಲಿ ಮಾತ್ರ ಸಿಪಿಎಂ ಸೋಲು ಅನುಭವಿಸಿದೆ. ಇಲ್ಲಿ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿಗಳೆಲ್ಲವೂ ಸೇರಿ ಅನೈತಿಕ ಮೈತ್ರಿ ಮಾಡಿಕೊಂಡಿದ್ದರಿಂದಾಗಿ ಇಲ್ಲಿ ಎಡರಂಗಕ್ಕೆ ಸ್ವಲ್ಪ ಹಿನ್ನಡೆಯಾಗಿದೆ.


ಈ ವಿಜಯದ ಬಗ್ಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಅತೀವ ಸಂತಸ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಜೊತೆ ಜನರು ಇದ್ದಾರೆ. ನಮ್ಮ ಕೈಗಾರಿಕಾ ನೀತಿಗಳನ್ನು ಬೆಂಬಲಿಸಿದ್ದಾರೆ. ಅದನ್ನು ಮುಂದುವರಿಸಲು ನೀಡಿದ ಜನಾದೇಶ ಇದು ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

'ಸ್ಥಳೀಯ ಸಂಸ್ಥೆಗಳ ಈ ಫಲಿತಾಂಶದ ಮೂಲಕ ರಾಜ್ಯದ ಕೈಗಾರಿಕಾ ನೀತಿ ವಿರುದ್ಧ ಸಮರ ಸಾರಿರುವ ಮಮತಾ ಮತ್ತು ಅವರ ಬಾಲಬಡುಕ ನಾಯಕರಿಗೆ ಜನತೆ ತಕ್ಕ ಪಾಠ ಕಲಿಸಿದ್ದಾರೆ.



ಮೂರು ಗಂಟೆಗಳ ಮನರಂಜನೆ ಬಿಟ್ಟರೆ ಈ ಸಿನಿಮಾದಿಂದ ಬಹಳವೇನೂ ನಿರೀಕ್ಷೆ ಮಾಡುವಂತಿಲ್ಲ.

'ಪಲ್ಲಕ್ಕಿ' ಪಯಣ



ರತ್ನಜ ನಿರ್ದೇಶನದ 'ನೆನಪಿರಲಿ' ಮೂಲಕ ಎಲ್ಲರ ಗಮನ ಸೆಳೆದವರು ಪ್ರೇಮ್. ಆ ನಂತರ ಬಂದ 'ಜೊತೆ ಜೊತೆಯಲಿ' ಕೂಡ ಯಶಸ್ವಿಯಾಯಿತು. ಈಗಿನ ಪಲ್ಲಕಿ ಕೂಡ ಯಶಸ್ಸಿನತ್ತ ಸಾಗಿದೆ. ಪ್ರೇಮ ಪಾಶಕ್ಕೆ ಸಿಲುಕುವ ಪಡ್ಡೆ ಹುಡುಗನ ಕಥೆಯನ್ನು ಹೊಂದಿರುವ ಈ ಚಿತ್ರ, ಪವರ್‌ಲೂಂ ಉದ್ಯಮದ ಒಂದು ಮುಖವನ್ನು ಕತೆಯಾಗಿ ಹೊಂದಿದೆ. ನಾಯಕ ಲಕ್ಷ್ಮಿ ಸುತ್ತಲೇ ಕಥೆ ಗಿರಕಿ ಹೊಡೆಯುತ್ತದೆ. ಲಕ್ಷ್ಮಿ ಬೇಜವಾಬ್ದಾರಿ ಯುವಕ. ಆತನಿಗೆ ತನ್ನ ತಂದೆ ತಾಯಿಗಿಂತ ಪಡ್ಡೆ ಸ್ನೇಹಿತರೇ ಮುಖ್ಯ. ತನ್ನ ತಂದೆ ಪವರ್‌ಲೂಂ ಉದ್ಯಮಿಯ ಹಣವನ್ನು ಧಾರಾಳವಾಗಿ ಖರ್ಚು ಮಾಡಲು ಹಿಂದೆ ಮುಂದೆ ನೋಡದ ಈತ ತನ್ನ ಏರಿಯಾದಲ್ಲಿ ಒಂದು ಥರಾ ರೌಡಿಯೇ... ಗುದ್ದಾಟ, ಹೊಡದಾಟ... ಬಳಿಕ ನಾಯಕಿ ಪ್ರಾರ್ಥನಳ ಬಗೆಗೆ ಪ್ರೀತಿ ಚಿಗುರುತ್ತದೆ. ಆಕೆಯ ಮನ ಗೆಲ್ಲಲು ಶತಾಯ ಗತಾಯ ಪ್ರಯತ್ನ ಮಾಡುವ ನಾಯಕ ಆದರಿಂದ್ಲೇ ಬದುಕಿನ ವಾಸ್ತವವನ್ನು ಅರಿಯುತ್ತಾನೆ. ನೀನು ಇಲ್ಲಿಯ ತನಕ ಏನನ್ನು ಸಾಧಿಸಿದ್ದಿ. ತಂದೆ ದುಡಿದದ್ದನ್ನು ಬೇಕಾಬಿಟ್ಟಿ ಖರ್ಚು ಮಾಡುವ ನೀನು 'ನನ್ನನ್ನು ಸಾಕುವ' ಅರ್ಹತೆ ಪಡೆದ ಬಳಿಕವೇ ಪ್ರೀತಿ ಎಂದು ನಾಯಕಿ ಶರತ್ತು ವಿಧಿಸುತ್ತಾಳೆ. ಇದೇ ಪಲ್ಲಕ್ಕಿ ಪಯಣದ ಟರ್ನಿಂಗ್ ಪಾಯಿಂಟ್. ಆಗಲೇ ಛಲಕ್ಕೆ ಬಿದ್ದ ನಾಯಕ ಲಕ್ಷ್ಮಿ ಮುಚ್ಚಿಹೋಗಿದ್ದ ತಂದೆಯ ಪವರ್‌ಲೂಂ ಘಟಕವನ್ನು ಪುನಶ್ಚೇತನಗೊಳಿಸುತ್ತಾನೆ. ಆಗ ತಡೆಯಲು ಬಂದ ಯುವಕರನ್ನು ಆ ಘಟಕದ ವಾಚ್‌ಮನ್ ತನ್ನ ಮಾತಿನ ಛಾಟಿ ಏಟಿನ ಮೂಲಕ ಮನಃ ಪರಿವರ್ತಿಸುತ್ತಾನೆ. ಇದರಿಂದ ತನ್ನ ಪಡ್ಡೆ ಸ್ನೇಹಿತರಿಂದಲೇ ಈ ಘಟಕವನ್ನು ಯಶಸ್ಸಿನತ್ತ ಕೊಂಡೊಯ್ಯುತ್ತಾನೆ ನಾಯಕ. ಈ ಪಯಣದಲ್ಲಿ ಆತ ಸಾಕಷ್ಟು ಏಳು ಬೀಳಿನ ಹಾದಿಯನ್ನು ಸವೆಸುತ್ತಾನೆ. ಒಟ್ಟಿನಲ್ಲಿ ಯುವಜನತೆ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು ಎಂಬ ಸಂದೇಶ ನೀಡಲು ಯತ್ನಿಸಲಾಗಿದೆ ಎಂಬಂತೆ ತೋರುತ್ತದೆ. ಆದರೆ, ನಾಯಕನ ಅಪ್ರಬುದ್ಧ ನಟನೆ ಚಿತ್ರದ ಮೈನಸ್ ಪಾಯಿಂಟ್. ನಟರ ಪೈಕಿ ದೊಡ್ಡಣ್ಣ ಮಾತ್ರ ಪ್ರೇಕ್ಷಕರ ಮನಸ್ಸಲ್ಲಿ ಉಳಿಯುತ್ತಾರೆ. ಒಂದು ಹಾಡು ಬಿಟ್ಟರೆ ಉಳಿದೆಲ್ಲವೂ ಅಷ್ಟಕ್ಕಷ್ಟೇ.



ಆಮದು ತಾರೆ ರಮನೀತೋ ಚೌಧರಿ ಸಿಕ್ಕಿದ ಅವಕಾಶವನ್ನು ಬಳಸಿಕೊಂಡಿದ್ದಾರೆ. ಮೂರು ಗಂಟೆಗಳ ಮನರಂಜನೆ ಬಿಟ್ಟರೆ ಇಂತಹ ಸಿನಿಮಾಗಳಿಂದ ಬಹಳವೇನೂ ನಿರೀಕ್ಷೆ ಮಾಡುವಂತಿಲ್ಲ.

ಕನ್ನಡ ಚಿತ್ರರಂಗಕ್ಕೆ ಯುವ ಸ್ಟಾರ್‌ಗಳ ಲಗ್ಗೆ





ಸ್ಯಾಂಡಲ್‌ವುಡ್‌ನಲ್ಲಿ ಈಗ ಹೊಸ ಗಾಳಿ ಬೀಸುತ್ತಿದೆ. ಯುವಕರ ಪಡೆ ಕನ್ನಡ ಚಿತ್ರ ಪ್ರೇಮಿಗಳ ಹೃದಯಕ್ಕೆ ಲಗ್ಗೆ ಇಟ್ಟಿದ್ದಾರೆ. ಚೆಲ್ಲಾಟದಿಂದ ಇನಿಂಗ್ಸ್ ಆರಂಭಿಸಿದ ಉದಯ ಟಿವಿಯ ಕಾಮಿಡಿಟೈಮ್ ಗಣೇಶ್ ಮುಂಗಾರುಮಳೆ ಮೂಲಕ ಸ್ಟಾರ್ ಪಟ್ಟಕ್ಕೇರಿದರು. ಇದರ ಬೆನ್ನಲ್ಲೇ ನೆನಪಿರಲಿ ಎಂದು ಹೇಳುತ್ತಾ ಚಾಕಲೇಟ್ ಹೀರೋ ಪ್ರೇಮ್‌ಕುಮಾರ್ ಅದೃಷ್ಟ ರೇಖೆಯ ಜೊತೆ ಜೊತೆಯಲಿ ಸಾಗಿದರು. ಇನ್ನು ದೇವರಾಜ್ ಪುತ್ರ ಪ್ರಜ್ವಲ್ ಸಿಕ್ಕಿದ ಮೊದಲ ಅವಕಾಶದಲ್ಲೇ ಸಿಕ್ಸರ್ ಬಾರಿಸಿದರು. ಹಾಗಂತ ತೆರೆಗೆ ಬಂದ ಎಲ್ಲರೂ ಯಶಸ್ವಿ ಅಂತೇನಲ್ಲ. ಅಶ್ಲೀಲತೆ ಇಲ್ಲದ, ಸ್ಕೆಚ್ಚು, ಮಚ್ಚು ಕೊಚ್ಚು ಸಂಸ್ಕೃತಿ ಇಲ್ಲದ, ಉತ್ತಮ ಚಿತ್ರಕಥೆ ತಾಜಾತನ ಹೊಂದಿರುವ ಉತ್ತಮ ಚಿತ್ರಗಳಿಗೆ ಪ್ರೇಕ್ಷಕರು ರತ್ನಗಂಬಳಿ ಹಾಸಿದ್ದಾರೆ. ಹಾಗಾಗಿ ಇತ್ತೀಚಿನ ಮುಂಗಾರು ಮಳೆ, ಪಲ್ಲಕ್ಕಿ, ಸಿಕ್ಸರ್ ಗೆದ್ದಿದೆ.



ಇದು ಯಶಸ್ವಿ ನಾಯಕರೆನಿಸಿದ ಹಳಬರಿಗೆ ಒಂದು ಸವಾಲೇ ಸರಿ. ಕೆಲ ವರ್ಷಗಳಿಂದ ಚಿತ್ರರಂಗದಲ್ಲಿ ಬೇರೂರಿರುವ ಈ ಹಿರಿಯ ನಟರಿಗೆ ಇನ್ನೂ ಹೊಸ ಸಂಗತಿ ಒಳ ಹೋಗಬೇಕಿದೆ. ಅವರು ಇನ್ನೂ ಅದೇ ಮಚ್ಚು ಲಾಂಗು ಸಂಸ್ಕೃತಿಗೆ ಜೋತು ಬಿದ್ದಿದ್ದಾರೆ.

'ಆವರಣ'ದ ಅನಾವರಣವಾಗಬೇಕು



ಸಮಕಾಲೀನ ಕನ್ನಡ ಸಾಹಿತ್ಯದ ಓದುಗರಲ್ಲಿ 'ಆವರಣ' ವು ಸೃಷ್ಟಿಸಿರುವ ನಿಷೇಧಾತ್ಮಕ ಪ್ರತಿಕ್ರಿಯೆ ಹಿಂದೆಂದೂ ಕಂಡರಿಯದಂತಹುದು. ಈ ಕೃತಿಯ ಹತ್ತಾರು ಸಾವಿರ ಪ್ರತಿಗಳು ಮಾರಾಟವಾಗಿವೆಯಂತೆ ಹಲವಾರು ಸಂವಾದಗೋಷ್ಠಿಗಳನ್ನು ಲೇಖಕರ ಅಭಿಮಾನಿಗಳು ನಡೆಸುತ್ತಿದ್ದಾರೆ. ನಿರ್ದಿಷ್ಟ ಓದುಗ, ಬರಹಗಾರ ವಲಯದಲ್ಲಿ ಇದೊಂದು ಮಹಾಕೃತಿಯೆಂಬ ಗಾಳಿ ಮಾತನ್ನು ತೇಲಿ ಬಿಡಲಾಗಿದೆ. ಅದಕ್ಕೆ ಪ್ರತಿಯಾಗಿ ಪ್ರಗತಿಪರ ಓದುಗ, ಬರಹಗಾರರು, ಈ ಕೃತಿಯನ್ನು ತೀವ್ರವಾಗಿ ಖಂಡಿಸುತ್ತಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಈ ಪ್ರಮಾಣದ ವಿವಾದ, ರಾಗದ್ವೇಷಗಳಿಗೆ ಒಂದು ಕೃತಿ ಕಾರಣವಾಗಿರುವುದು ಆಶ್ಚರ್ಯ ಮತ್ತು ಆತಂಕಕ್ಕೆ ಕಾರಣ ವಾಗುವ ಸಮಾಚಾರವೆನ್ನಬಹುದಾಗಿದೆ.



ಚಾರಿತ್ರಿಕ ವಸ್ತು, ವ್ಯಕ್ತಿ, ಸಂಗತಿಗಳನ್ನು ಆಧರಿಸಿರುವ ಈ ಕಾದಂಬರಿಗೆ ಸಮಕಾಲೀನ ಕಥೆಯೊಂದಿದೆ; ಈ ಕಥಾ ಚೌಕಟ್ಟಿಗೆ ಹೊಂದಿಕೊಂಡು ಒಂದು ಚಾರಿತ್ರಿಕ ಕಿರು ಕಾದಂಬರಿಯೂ ಇದೆ. ಆದರೆ ಇವೆರಡೂ ಕೇವಲ ನೆಪ ಮಾತ್ರಕ್ಕಿವೆ. ಕಲಾತ್ಮಕವಾಗಿ ವಸ್ತು ನಿಷ್ಠವಾಗಿ ತಾವು ಬರೆಯಲಿರುವ ಸಂಗತಿಯನ್ನು ನಿರೂಪಿಸಬೇಕೆಂಬ ಆಸಕ್ತಿಯಾಗಲೀ ಉದ್ದೇಶವಾಗಲೀ 'ಆವರಣ' ದ ಲೇಖಕರಿಗಿಲ್ಲವೆಂಬುದು, ಓದಿದ ಯಾರಿಗಾದರೂ ತಟ್ಟನೆ ಗೋಚರಿಸುವ ಅಂಶ.

ಲೇಖಕರ ಪ್ರಧಾನ ಕಾಳಜಿ, ಇಸ್ಲಾಂ ವಿರೋಧಿ ನಿಲುವು; ಬ್ರಿಟಿಷ್ ಪೂರ್ವ ಕಾಲದ ಮುಸ್ಲಿಂ ಆಡಳಿತದ ಪುನರ್ ಅವಲೋಕನ; ಮತ್ತು ಸಮಕಾಲೀನ ಸೆಕ್ಯುಲರ್ ಸಾಮಾಜಿಕ ಸಿದ್ಧಾಂತ ಹಾಗೂ ಅದರ ಪ್ರತಿಪಾದಕರ ಖಂಡನೆ. ಸ್ಪಷ್ಟವಾಗಿ ಹಿಂದೂತ್ವವಾದದ ಮಂಡನೆ, ಸೆಕ್ಯುಲರ್‌ವಾದದ ಖಂಡನೆಯೇ ಗುರಿಯಾಗುಳ್ಳ ಈ ಕಾದಂಬರಿಯನ್ನು ಸಾಹಿತ್ಯ ಕೃತಿಯೆಂದೂ ಕರೆಯಬೇಕೇ? ಎನ್ನುವ ಕುರಿತು ಚರ್ಚೆಗಳಾಗುತ್ತಿವೆ.



ಕೆ.ಮರುಳಸಿದ್ದಪ್ಪ

ಭೈರಪ್ಪನವರು ತಮ್ಮ ಕಾದಂಬರಿಯ ಮುನ್ನುಡಿಯಲ್ಲಿ 'ಆವರಣ' ವೆಂದರೆ ಮರೆಮಾಚುವುದು, ಎಂದು ಹೇಳಿ ಸೆಕ್ಯುಲರ್ ಇತಿಹಾಸಕಾರರು ಸತ್ಯವನ್ನು ಮರೆಮಾಚಿರುವುದರಿಂದ ಅದನ್ನು ಸರಿಪಡಿಸಲು ತಾವು ಈ ಕೃತಿ ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ವಿಪರ್ಯಾಸವೆಂದರೆ ತಮ್ಮ ಕೃತಿಯ 'ಆವರಣ' ವೆಂಬ ಹೆಸರು ತಮಗೆ ತಿರುಗುಬಾಣವಾಗಬಹುದಾದ ಸಾಧ್ಯತೆ ಅವರಿಗೆ ಹೊಳೆದಿಲ್ಲ. ಏಕೆಂದರೆ, 'ಆವರಣ'ವು ಪ್ರತಿಪಾದಿಸುವ 'ಹಿಂದೂತ್ವವಾದಿ ಸತ್ಯ' ವನ್ನು ಈ ದೇಶದ ಬಹು ಸಂಖ್ಯಾತರು ತಿರಸ್ಕರಿಸಿದ್ದಾರೆ. ವಸ್ತು ನಿಷ್ಠ ಇತಿಹಾಸಕಾರರು, ಕಲಾವಿದರು, ಲೇಖಕರು ಈ ಅತಿರಂಜಿತ ಕೋಮುವಾದಿ ಚರಿತ್ರೆಯ ಅಪಾಯವನ್ನು ಸ್ಪಷ್ಟವಾಗಿ ನಿರಾಕರಿಸುತ್ತಾ ಬಂದಿದ್ದಾರೆ. ಅಂದರೆ, 'ಆವರಣ' ಯಾರ ಸೃಷ್ಟಿ? ಚರ್ಚಿಸಬೇಕಾಗುತ್ತದೆ.

'ಸತ್ಯ' ದ ಬಗೆಗೆ ಭೈರಪ್ಪನವರ ವ್ಯಗ್ರತೆ ಮಾತ್ರ ತೀವ್ರವಾಗಿರುವಂತಿದೆ. ಈ ಕಾದಂಬರಿಯಲ್ಲಿ ನೂರಾರು ಕಡೆ ಸತ್ಯ, ಸತ್ಯ ಸತ್ಯವೆಂದು ಪಠಿಸಲಾಗುತ್ತದೆ. ಕಾದಂಬರಿಯ ಪ್ರಚಾರ ಸಂದರ್ಭದಲ್ಲಿಯೂ ತಾವು ಹೇಳಿರುವುದು ನೂರಕ್ಕೆ ಇನ್ನೂರು ಶತ ಸತ್ಯವೆಂದು ಆಣೆ ಪ್ರಮಾಣ ಹಾಕಿದರು. ಚರಿತ್ರೆಯಲ್ಲಿ ಸತ್ಯ ನಿಷ್ಠೆಗೆ ಮತ್ತೊಂದು ಹೆಸರಾದ ಗಾಂಧೀಜಿಯವರೇ ತಮ್ಮ ಆತ್ಮ ಚರಿತ್ರೆಯನ್ನು 'ಸತ್ಯದ ದಾರಿಯಲ್ಲಿ ನನ್ನ ಪ್ರಯೋಗಗಳು' ಎಂದು ಕರೆದುಕೊಂಡಿದ್ದಾರೆ. ಅವರೆಂದೂ ನಾನು ಹೇಳುವುದೇ ಸತ್ಯವೆಂದೂ ಘೋಷಿಸಿಕೊಂಡಿಲ್ಲ. ಭೈರಪ್ಪನವರಿಗಿರುವ ಎದೆಗಾರಿಕೆ ಗಾಂಧೀಜಿಯವರಿಗಿರಲಿಲ್ಲವೆನ್ನುವುದು ಸಹಜವೇ ಆಗಿದೆ. ಏಕೆಂದರೆ ಸುಳ್ಳಿಗೆ ಗಂಟಲು ದೊಡ್ಡದಾಗಿರುತ್ತದೆ; ನಿಜವು ಹಿಂಜರಿಕೆಯಿಂದ ಮೆಲುದನಿಯಲ್ಲಿ ಅಭಿವ್ಯಕ್ತಿ ಪಡೆಯುತ್ತದೆ. ಆತ್ಮ ಸಾಕ್ಷಿಯಿರುವವನಿಗೆ ತನ್ನ ನಡೆ ನುಡಿಯ ಬಗೆಗೆ ಎಚ್ಚರವಿರುತ್ತದೆ. ಆದರೆ ಸುಳ್ಳನ್ನು ಆಕರ್ಷಕವಾಗಿ ಪ್ರಚಾರ ಮಾಡುವುದೇ ನಾಜಿಗಳ ತಂತ್ರವಾಗಿದ್ದು, ಅವರ ಮಾರ್ಗದಲ್ಲಿಯೇ ಮುನ್ನಡೆಯುತ್ತಿರುವ ನಮ್ಮ ದೇಶದ ಹಿಂದೂತ್ವವಾದಿಗಳು ತಾವೇ ಸತ್ಯದ ಅಪರಾವತಾರವೆಂದು ಧೈರ್ಯವಾಗಿ ಘೋಷಿಸಿಕೊಳ್ಳುತ್ತಾರೆ. ಸಂಘ ಪರಿವಾರದ ವಕ್ತಾರ ಭೈರಪ್ಪನವರಿಂದ ನಾವು ಇನ್ನೇನು ತಾನೆ ನಿರೀಕ್ಷಿಸಬಹುದು?

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE 560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH